# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್. ವಿಕಾಸ್

ದಾವಣಗೆರೆ
ಬುಧವಾರ, ಡಿಸೆಂಬರ್ 25, 2024

ಸಂಪುಟ : 51 ಸಂಚಿಕೆ : 222 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





ನಗರ ದೇವತೆ ಶ್ರೀ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಮಂಗಳವಾರ ಕಾರ್ತಿಕೋತ್ಸವ ನಡೆಯಿತು. ದೇವಿಗೆ ಪಂಚಾಮೃತ ಅಭಿಷೇಕ, ಹೂವಿನ ಹಾರದ ಮೆರವಣಿಗೆ ನಡೆಯಿತು.

## ಸಿ.ಟಿ.ರವಿ ಅಶ್ಲೀಲ ಪದ ಬಳಕೆ ಆರೋಪ ಪ್ರಕರಣ ಸಿಬಿಐಗೆ





ಬೆಂಗಳೂರು, ಡಿ.24- ಮಹಿಳೆ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಬಿಜೆಪಿ ಶಾಸಕ ಸಿ.ಟಿ. ರವಿ ಅಶ್ಲೀಲ ಪದ ಬಳಿಕೆ ಮಾಡಿದ್ದಾರೆ ಎಂಬ ಆರೋಪ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ.


ಅಶ್ಲೀಲ ಪದ ಬಳಕೆ ಆರೋಪದ ಜೊತೆಗೆ, ವಿಧಾನ ಪರಿಷತ್ ಆವರಣದಲ್ಲೇ ತಮ್ಮ ಕೊಲೆಗೆ ಪ್ರಯತ್ನ ನಡೆದಿತ್ತು ಎಂಬ ರವಿ ಅವರು ನೀಡಿರುವ ದೂರಿನ ಬಗ್ಗೆಯೂ ತನಿಖೆ ಆಗಲಿದೆ.

ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಶಾಸಕ ರವಿ ಅವರು ಸಚಿವೆ ವಿರುದ್ಧ ಅಶ್ಲೀಲ ಪದ ಬಳಸಿದ್ದಾರೆ ಎಂಬ ವಿಷಯದ ಮೇಲೆ ಈಗಾಗಲೇ ರೂಲಿಂಗ್ ನೀಡಲಾಗಿದೆ, ಪೋಲಿಸ್‌ನವರು, ಪರಿಷತ್ ಅಂಗಳಕ್ಕೆ ಪ್ರವೇಶ ಮಾಡಿದ್ದಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಮಾಹಿತಿ ನೀಡಿದ್ದೇನೆ ಎಂದು ವಿಷಯಕ್ಕೆ ತರೆ ಎಳೆದಿದ್ದರು. ಸಭಾಪತಿ ಅವರ ನಿರ್ಧಾರ ಪ್ರಕಟವಾಗುತ್ತಿದ್ದಂತೆ ಸರ್ಕಾರ ಪ್ರಕರಣವನ್ನು ಸಿಐಡಿಗೆ ವಹಿಸಿ ಮೂರು ತಿಂಗಳೊಳಗಾಗಿ ತನಿಖಾ ವರದಿ ನೀಡುವಂತೆ ಸೂಚಿಸಿದೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಸಚಿವರ ವಿರುದ್ಧ ರವಿ ಅವರು ಬಳಸಿದ ಪದಕ್ಕೆ ಸಂಬಂಧಿಸಿದಂತೆ ಹಲವು ವ್ಯಾಖ್ಯಾನಗಳು ಕೇಳಿಬರುತ್ತಿವೆ, ಇಬ್ಬರೂ ಒಬ್ಬರ ಮೇಲೊಬ್ಬರು ಆರೋಪ ಮಾಡಿದ್ದಾರೆ, ಠಾಣೆಯಲ್ಲಿ ದೂರು ದಾಖಲಾಗಿದೆ, ಹೀಗಾಗಿ ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಸರ್ಕಾರ ತನಿಖೆಗೆ ಆದೇಶಿಸಿದೆ ಎಂದರು.

ಲಕ್ಷ್ಮೀ ಹೆಬ್ಬಾಳ್ಕರ್ ಅವರು ನಿನ್ನೆ ಪತ್ರಿಕಾಗೋಷ್ಠಿ ನಡೆಸಿ, ರವಿ ಅವರಿಗೆ ಶಿಕ್ಷೆ ಆಗುವವರೆಗೂ ತಾವು ವಿಶ್ರಮಿಸುವುದಿಲ್ಲ, ಈ ಬಗ್ಗೆ ಉನ್ನತ ಮಟ್ಟದ (4ನೇ ಪುಟಕ್ಕೆ)

## ಮಂತ್ರಾಲಯಕ್ಕೆ ಭಕ್ತರ ದಂಡು: ಸೌಲಭ್ಯ ಕಲ್ಪಿಸಲು ಕಷ್ಟ



ರಾಯಚೂರು, ಡಿ.24- ಕ್ರಿಸ್‌ಮಸ್ ಮತ್ತು ಹೊಸ ವರ್ಷದ ರಜೆ ಇರುವ ಕಾರಣ ಮಂತ್ರಾಲಯ ಮಠಕ್ಕೆ ಬರುವ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಡಿ.25ರಿಂದ ಜನವರಿ 2ರ ವರೆಗೆ ಇಲ್ಲಿ ಬರುವ ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲು ಕಷ್ಟವಾಗಲಿದೆ ಎಂದು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

ಭಕ್ತರು ಈಗಾಗಲೇ ಕೊಠಡಿಗಳಿಗೆ ಆನ್‌ಲೈನ್ ಬುಕಿಂಗ್ ಕಾಯ್ದಿರಿಸಿದ್ದಾರೆ. ಇಷ್ಟೇ ಅಲ್ಲದೆ, ಇತ್ತೀಚಿನ ದಿನಗಳಲ್ಲಿ ಕೊಠಡಿ ಹಂಚಿಕೆಗಾಗಿ ದಾನಿಗಳಿಂದ ಡೋನರ್ಸ್ ಕೂಪನ್‌ಗಳನ್ನು ಸ್ವೀಕರಿಸಲಾಗಿದೆ. ಭಕ್ತರು ಮತ್ತು ಶಿಷ್ಯರ ಹೆಚ್ಚಿನ ಒಳಹರಿವನ್ನು ನಿರೀಕ್ಷಿಸುತ್ತಿರುವುದರಿಂದ ಸಾಮಾನ್ಯ (4ನೇ ಪುಟಕ್ಕೆ)


### ಜನ್ಮ ದಿನದ ಶುಬಾಶಯಗಳು...





ಇಂದು 18ನೇ ವರ್ಷದ ಜನ್ಮದಿನವನ್ನು ಆಚರಿಸಿಕೊಳ್ಳುತ್ತಿರುವ

**ಕು|| ಸಹನ ಎಂ.**

ಇವರಿಗೆ ಜನ್ಮದಿನದ ಶುಭಾಶಯಗಳು...

ಶುಭ ಕೋರುವವರು :
ತಂದೆ : ಡಿ. ಮಂಜುನಾಥ್ (ದುರ್ಗದ ಮಂಜು)
ತಾಯಿ : ಡಿ. ಶೋಭಾ
ಎಂ. ಅಜಯ್ ಕುಮಾರ್, ದಾವಣಗೆರೆ. ಬಡ ತಿಮ್ಮಣ್ಣ
ಟಿ. ಲಿಂಗಣ್ಣ, ಆರ್. ಅರುಣ (ಗುಂಡ), ಶಿವಗಂಗ.
ಭರತಣ್ಣ, ಅಂಬಲಗೆರೆ., ಜಿ. ಮಹೇಶ್, ಎನ್. ಬಸವರಾಜ್,
ಆರ್. ತುಷಾರ, ಚಿತ್ರದುರ್ಗ.,
ವಿಳಾಸ : ಹೈಟೆಕ್ ಕಾಲೇಜ್ ಹಿಂಭಾಗ,
ಶಕ್ತಿ ಗ್ಯಾಸ್ ಗೋಡೌನ್ ಹತ್ತಿರ, ನಿಟುವಳ್ಳಿ, ದಾವಣಗೆರೆ.


## ನಿಷ್ಠೆಯಿಂದ ಭಗವಂತನ ಅನುಗ್ರಹ ಪ್ರಾಪ್ತಿ



**ಸೋದೆ ಶ್ರೀಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ**

ದಾವಣಗೆರೆ, ಡಿ. 24- ಭಕ್ತಿ, ನಿಷ್ಠೆ, ಪ್ರೀತಿಯಿಂದ ಮಾತ್ರ ಭಗವಂತನ, ಗುರುವಿನ ಅನುಗ್ರಹ ಸಾಧ್ಯವಿದೆ ಎಂದು ಸೋದೆ ಶ್ರೀಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಪ್ರತಿಪಾದಿಸಿದರು. ಇಲ್ಲಿನ ನಲ್ಲೂರು ಶ್ರೀಮತಿ ಗೌರಮ್ಮ ನರಹರಿ ಶೇಟ್ ಸಭಾ ಭವನದಲ್ಲಿ ದೈವಜ್ಞ ಬ್ರಾಹ್ಮಣರ ಶಿಷ್ಯವೃಂದದ ವತಿಯಿಂದ ಇಂದು ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಶ್ರೀಗಳು (4ನೇ ಪುಟಕ್ಕೆ)


### 14th Year Memory



In ever loving Memory of
**Smt. K.L. Yashodha**
w/o Late Sri B.K.G. Lakshman Setty
Who left us on 25.12.2010



**Smt. K.L. Yashodha**
24.12.1932 - 25.12.2010
9/2971, 'Sri' Nivas' 6th Main,
MCC'B' Block, Davangere-4.

Daughters and Son's In-Law
**Smt. Geetha Srinivasulu,** Hospet
**Smt. Dr. Sunitha & Sri T.V. Sushil Kumar,** Lincolnshire, U.K.
**Smt. Sadhana & Sri Nagendra Prasad,** Mysore
**Smt. Dr. Vandana & Sri Dr. Rajendra Desai,** Davangere.
**Smt. Lakshmi & Sri Sreeram,** Sydney, Australlia
Grand Children :
**Sindhu, Santosh, Sripal, Teju, Shantanu And Pooja**






ಲಕ್ಷ್ಮಿ ಸುಜುಕಿ

ಪಿ.ಎಸ್.ಎಸ್. ಪ್ಲಾಜಾ ಹತ್ತಿರ, ನಮ್ಮೂರ ತಿಂಡಿ ಹೋಟೆಲ್ ಎದುರು, ಹದಡಿ ರಸ್ತೆ, ದಾವಣಗೆರೆ.
# 3410/ಎಫ್ - 1, ಸಾಯಿ ಇಂಟರ್ ನ್ಯಾಷನಲ್ ಹೋಟೆಲ್ ಹತ್ತಿರ, ಪಿ.ಬಿ. ರಸ್ತೆ, ದಾವಣಗೆರೆ.
ಫೋ. : 98442 55540, 84318 46360, 73380 58518

# ಮಕ್ಕಳಿಗೆ ಪಠ್ಯದ ಜೊತೆಗೆ ಸಾಹಿತ್ಯ, ಸಂಗೀತವನ್ನೂ ಕಲಿಸಿ

## ಕುಂಬಳೂರು ಸದ್ಭಾವನಾ ಗೋಷ್ಠಿಯಲ್ಲಿ ಸಾಣೇಹಳ್ಳಿ ಶ್ರೀ ಸಲಹೆ



ಮಲೇಬೆನ್ನೂರು, ಡಿ. 24- ಮಕ್ಕಳಿಗೆ ಪಠ್ಯದ ಜೊತೆಗೆ ಸಾಹಿತ್ಯ, ಸಂಗೀತ, ಕಲೆ ವ್ಯಕ್ತವಾಗುವಂತೆ ತರಬೇತಿ ನೀಡಿ ಎಂದು ಸಾಣೆಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಶಿಕ್ಷಕರಿಗೆ ಸಲಹೆ ನೀಡಿದರು.

ಅವರು ಕುಂಬಳೂರು ಗ್ರಾಮದ ಶ್ರೀ ಬಸವ ಗುರುಕುಲ ವಿದ್ಯಾಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಶ್ರೀ ಶರಣ ಬಿ.ಪುಟ್ಟಪ್ಪ ಹಿರಿಯ ಪ್ರಾಥಮಿಕ ಶಾಲೆ, ಶ್ರೀ ಶರಣ ಸಂಗಮ ಪ್ರೌಢಶಾಲೆ, ಶ್ರೀ ಬಸವ ಗುರುಕುಲ ಆಂಗ್ಲ ಮಾಧ್ಯಮ ನರ್ಸರಿ, ಹಿರಿಯ ಪ್ರಾಥಮಿಕ, ಪ್ರೌಢಶಾಲೆಗಳ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಸದ್ಭಾವನಾ ಚಿಂತನಾಗೋಷ್ಠಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಮಕ್ಕಳು ಹೊಸ ಚೀಲಗಳಿದ್ದಂತೆ. ಆ ಚೀಲಗಳಲ್ಲಿ ನಾವು ಏನು ತುಂಬುತ್ತೇವೆ ಎನ್ನುವುದು ಬಹಳ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಶಿಕ್ಷಕರು, ಪೋಷಕರು ಸೇರಿ ಮಕ್ಕಳಿಗೆ ಶಿಕ್ಷಣ ಹಾಗೂ ಸಂಸ್ಕಾರ, ಸಂಸ್ಕೃತಿ ಕಲಿಸುವ ಮೂಲಕ ಅವರನ್ನು ದೇಶದ ಆಸ್ತಿಯನ್ನಾಗಿ ಮಾಡಿ ಎಂದು ಕಿವಿ ಮಾತು ಹೇಳಿದರು.

ಮಕ್ಕಳಿಗೆ ವಚನ ಸಾಹಿತ್ಯವನ್ನು ಕಲಿಸಿ ವಚನ ಸಾಹಿತ್ಯದಿಂದ ಸಂಸ್ಕಾರ ಹಾಗೂ ವ್ಯಕ್ತಿತ್ವ ವಿಕಸನ ಉಂಟಾಗುತ್ತದೆ ಎಂದ ಶ್ರೀಗಳು, ಶಾಂತಿ, ಸಹನೆಯ ಭಾವನೆ ಇದ್ದರೆ ಏನಾದರೂ ಸಾಧನೆ ಮಾಡಲು ಸಾಧ್ಯ ಎಂದರು.

ಪ್ರತಿಭೆ ಎಲ್ಲರಲ್ಲೂ ಇರುತ್ತದೆ. ಅದನ್ನು ಹೊರ ಹಾಕುವ ವಾತಾವರಣ ಸೃಷ್ಟಿಸಬೇಕು. ಒಳ್ಳೆಯದಕ್ಕಿಂತ ಕೆಟ್ಟದನ್ನೇ ಬಯಸುವ ಈ ದಿನಮಾನದಲ್ಲಿ ನಾವು ಮನಸ್ಸು ಅರಳುವಂತೆ ನಡೆದುಕೊಳ್ಳಬೇಕೆಂದು ಸಾಣೇಹಳ್ಳಿ ಶ್ರೀಗಳು ಅಭಿಪ್ರಾಯ ಪಟ್ಟರು.

ಕುಂಬಳೂರಿನ ಯುವಕರು ಸಾಣೇಹಳ್ಳಿ ಮಠಕ್ಕೆ ಭತ್ತ, ಅಕ್ಕಿ ಸಂಗ್ರಹಿಸುವ ಕೆಲಸ ಮಾಡಿರುವುದಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ ಶ್ರೀಗಳು, ಸಮಾಜದ ಕೆಲಸ ಮಾಡುವವರು ಮಗುವಿನಂತಹ ಮನಸ್ಸು ಹೊಂದಿರಬೇಕೆಂದರು. ಸಾಣೇಹಳ್ಳಿ ಮಠದಲ್ಲಿ ಡಿಸೆಂಬರ್ 31 ರ ಸಂಜೆ 6 ಗಂಟೆಯಿಂದ 'ವರ್ಷದ ಹರ್ಷ' ಎಂಬ ಸಾಹಿತ್ಯ, ಸಂಗೀತ, ಉಪನ್ಯಾಸ, ಹಾಸ್ಯ, ನೃತ್ಯ ರೂಪಕಗಳ ವಿಶೇಷ ಕಾರ್ಯಕ್ರಮಗಳ ಮೂಲಕ ಹೊಸ ವರ್ಷವನ್ನು ಸ್ವಾಗತಿಸಲಾಗುವುದು ಎಂದು ಪಂಡಿತಾರಾಧ್ಯ ಶ್ರೀಗಳು ತಿಳಿಸಿದರು.

ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದ ಶಾಸಕ ಬಿ.ಪಿ. ಹರೀಶ್ ಮಾತನಾಡಿ, ಕುಂಬಳೂರಿನ ಬಸವ ಗುರುಕುಲ ವಿದ್ಯಾಸಂಸ್ಥೆಯು ಕಳೆದ 40 ವರ್ಷಗಳಿಂದ ಈ ಭಾಗದ ವಿದ್ಯಾರ್ಥಿಗಳಿಗೆ ಒಳ್ಳೆಯ ಶಿಕ್ಷಣದ ಜೊತೆಗೆ ಸಂಸ್ಕಾರ, ಸಂಸ್ಕೃತಿಯನ್ನು ಕಲಿಸುತ್ತಾ, ಅತ್ಯುತ್ತಮ ಶಾಲೆಯಾಗಿ ಬೆಳೆದಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಣೇಹಳ್ಳಿ ಶ್ರೀಗಳು ಈ ಸಂಸ್ಥೆಯ ಜವಾಬ್ದಾರಿ ವಹಿಸಿಕೊಂಡ ನಂತರ ಗ್ರಾಮಸ್ಥರ ಕಾಳಜಿ ಇನ್ನಷ್ಟು ಹೆಚ್ಚಾಗಿದ್ದು, ವಿದ್ಯಾಸಂಸ್ಥೆಯ ಅಭಿವೃದ್ಧಿಗೆ ಅಗತ್ಯ ಅನುದಾನ ಹಾಗೂ ಕ್ರೀಡಾಂಗಣಕ್ಕೆ ಬೋರ್‌ವೆಲ್ ಸೌಲಭ್ಯ ಕಲ್ಪಿಸುವುದಾಗಿ ಭರವಸೆ ನೀಡಿದರು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಉಮಾದೇವಿ ಎಂ.ಹೆಚ್. ಶಿವರಾಮಚಂದ್ರಪ್ಪ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್ ಮಾತನಾಡಿದರು.

ಸಿರಿಗೆರೆ ಸಿದ್ದೇಶ್ ಮಾತನಾಡಿ, ಮಕ್ಕಳು ಬರೀ ವಿದ್ಯಾವಂತ ರಾದರೆ ಸಾಲದು, ಸಂಸ್ಕಾರವಂತರಾಗಬೇಕು. ಅಂತಹ ಸಂಸ್ಕಾರವನ್ನು ಬಸವ ತತ್ವ ಕಲಿಸುತ್ತಿದೆ. ವಿನಯಶೀಲರಾದರೆ ಉತ್ತಮ ಬದುಕು ಸಾಧ್ಯ ಎಂದರು.

ವಿದ್ಯಾಸಂಸ್ಥೆಯ ಉಪಾಧ್ಯಕ್ಷ ಕರಿಯಪ್ಪರ ತೀರ್ಥಪ್ಪ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾಸಂಸ್ಥೆಯ ಕಾರ್ಯದರ್ಶಿ ಹಳೇಮನೆ ಶಂಭುಲಿಂಗಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು.

ಗ್ರಾ.ಪಂ. ಉಪಾಧ್ಯಕ್ಷ ಜಿ.ಎಂ. ಹರೀಶ್, ವಿದ್ಯಾಸಂಸ್ಥೆಯ ಖಜಾಂಚಿ ಬಿ.ಎಂ. ಹನುಮಂತಪ್ಪ, ಸದಸ್ಯರಾದ ಬಿ. ಶಿವರುದ್ರಪ್ಪ, ಬಿ.ಹೆಚ್. ಕಿರಣ್, ಎನ್.ಜೆ. ಕಲ್ಲೇಶ್, ಡಿ.ಹೆಚ್. ರವೀಂದ್ರ, ಕಾನೂನು ಸಲಹೆಗಾರ ಹೆಚ್.ಬಿ. ಶಿವಕುಮಾರ್, ಸ್ಪಂದನ ಚಾರಿಟಬಲ್ ಟ್ರಸ್ಟ್‌ನ ಬಿ. ವಿಶ್ವನಾಥ್, ಡಿ.ಜೆ. ಮಂಜುನಾಥ, ವಿವಿಧ ಶಾಲೆಗಳ ಎಸ್‌ಡಿಎಂಸಿ ಅಧ್ಯಕ್ಷರಾದ ಕೋಟ್ಯಾಳ್ ಅಂಜನೇಯ, ಕೆ.ಹೆಚ್. ನಾಗೇಂದ್ರಪ್ಪ, ಹಳೇಮನೆ ಚಂದ್ರಪ್ಪ, ನಿವೃತ್ತ ಮುಖ್ಯ ಶಿಕ್ಷಕ ಕೆ. ಸಿರಸಾಚಾರ್, ಮುಖ್ಯ ಶಿಕ್ಷಕರಾದ ಬಸವರಾಜ್ ಗುಂಡಣ್ಣನವರ್, ಎ.ಬಿ. ಹನುಮಂತಪ್ಪ, ಎಂ. ಸಿದ್ಧಾರ್ಥ ಮತ್ತಿತರರು ಹಾಜರಿದ್ದರು.

ಜಿ.ಬೇವಿನಹಳ್ಳಿಯ ಅಂಗನವಾಡಿ ಪುಟಾಣಿ ಅನ್ವಿತ ಮತ್ತು ಬಸವ ಗುರುಕುಲ ಶಾಲೆಯ ಕೃತಿಕಾ, ರಶೀಪಾ ಅವರ ನೃತ್ಯಗಳು ಗಮನ ಸೆಳೆದವು.



# ಅರಸೀಕೆರೆಯಲ್ಲಿ ಅದ್ಧೂರಿಯಾಗಿ ಜರುಗಿದ ಕೋಲಶಾಂತೇಶ್ವರ ಸ್ವಾಮಿ ಕಾರ್ತಿಕೋತ್ಸವ

**ಹರಪನಹಳ್ಳಿ**

ಹರಪನಹಳ್ಳಿ, ಡಿ.24- ತಾಲ್ಲೂಕಿನ ಪಂಚಗಣಾಧೀಶರಲ್ಲಿ ಒಬ್ಬರಾದ ಅರಸೀಕೆರೆ ಶ್ರೀ ಕೋಲಶಾಂತೇಶ್ವರ ಸ್ವಾಮಿ ಕಾರ್ತಿಕೋತ್ಸವವು ಸಂಭ್ರಮದಿಂದ ನೆರವೇರಿತು.

ಶ್ರೀ ಶಾಂತಲಿಂಗ ದೇಶೀಕೇಂದ್ರ ಮಹಾಸ್ವಾಮೀಜಿ ಹಾಗೂ ಕೊಡ್ಲಿಪೇಟೆ ರುದ್ರಮುನಿ ಮಹಾಸ್ವಾಮೀಜಿ ದೀಪ ಹಚ್ಚುವ ಮೂಲಕ ಕಾರ್ತಿಕೋತ್ಸವಕ್ಕೆ ಚಾಲನೆ ನೀಡಿದರು.

ಸಂಜೆ ಸ್ವಾಮಿಗೆ ಮಂಡಕ್ಕಿ, ಕೊಬ್ಬರಿ, ಬೆಲ್ಲ, ಉತ್ತತ್ತಿಯನ್ನು ದೇವರಿಗೆ ಅರ್ಪಿಸಲಾಯಿತು. ಸೋಮವಾರ ಬೆಳಗ್ಗೆಯಿಂದಲೇ ಜನರು ಸ್ವಾಮಿಯ ದೇವಸ್ಥಾನಕ್ಕೆ ಬಂದು ಹಣ್ಣು, ಕಾಯಿ, ಹೂ, ಹೋಳಿಗೆ ಎಡೆ ಅರ್ಪಿಸಿದರು.

ಸೋಮವಾರ ರಾತ್ರಿ ಶ್ರೀ ಕೋಲಶಾಂತೇಶ್ವರ ಸ್ವಾಮಿಯನ್ನು ಹೂವಿನ ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಮೆರವಣಿಗೆ ನಡೆಸಲಾಯಿತು. ಜಾನಪದ ಕಲಾ ತಂಡಗಳು ಮೆರವಣಿಗೆಗೆ ಮೆರಗು ನೀಡಿದವು.

ವೆಂಕಟೇಶ್ ಶೆಟ್ರು ಕುಟುಂಬದವರು ಲಕ್ಷ ಬತ್ತಿಗಳ ದೀಪವನ್ನು ಹಚ್ಚಿರುವುದು ವಿಶೇಷವಾಗಿತ್ತು. ಈ ಸಂದರ್ಭದಲ್ಲಿ ಮಾಜಿ ಸಂಸದರಾದ ವೈ.ದೇವೇಂದ್ರಪ್ಪ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರಾದ ವೈ. ಡಿ. ಸುಶೀಲಮ್ಮ ದೇವೇಂದ್ರಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಸದಸ್ಯರಾದ ವಿಶಾಲಕ್ಷಮ್ಮ,ಬಿಡಿಸಿಸಿ ಬ್ಯಾಂಕ್ ನಿರ್ದೇಶಕ ವೈ.ಡಿ.ಅಣ್ಣಪ್ಪ, ಮುಖಂಡರಾದ ಪ್ರಶಾಂತ್ ಪಾಟೀಲ್, ಲಕ್ಷ್ಮೀದೇವಿ ಅಣ್ಣಪ್ಪ, ವೈ.ಕೊಟ್ರೇಶ್, ಅಡ್ಡಿ ಚನ್ನವೀರಪ್ಪ, ವೆಂಕಟೇಶ್ ಶೆಟ್ರು, ಶಾಂತ ಪಾಟೀಲ್, ವೃಷಬೇಂದ್ರಯ್ಯ, ಎ. ಹೆಚ್. ಪಂಪಣ್ಣ, ಎ. ಹೆಚ್. ನಾಗರಾಜಪ್ಪ ಹಾಗೂ ಭಕ್ತಾಧಿಗಳು ಹಾಜರಿದ್ದರು.

# ಹರಳಹಳ್ಳಿ ಗ್ರಾ.ಪಂ.ಗೆ ಲಕ್ಷ್ಮಿ ಅಧ್ಯಕ್ಷೆ



ಮಲೇಬೆನ್ನೂರು, ಡಿ. 24- ಹರಳಹಳ್ಳಿ ಗ್ರಾ.ಪಂ. ಅಧ್ಯಕ್ಷರಾಗಿ ಗುಳದಹಳ್ಳಿಯ ಶ್ರೀಮತಿ ಲಕ್ಷ್ಮಿ ಎ.ಕೆ. ಮಂಜಪ್ಪ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದರು.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಎಇಇ ಬಿ.ಕೆ ಗಿರೀಶ್ ಅವರು ಚುನಾವಣಾಧಿಕಾರಿಯಾಗಿ ಕಾರ್ಯನಿರ್ವಹಿಸಿದರು.

ಹೆಚ್.ಎಂ. ಹನುಮಂತಪ್ಪ ಅವರ ರಾಜೀನಾಮೆಯಿಂದಾಗಿ ಅಧ್ಯಕ್ಷ ಸ್ಥಾನ ತೆರವಾಗಿತ್ತು. ಉಪಾಧ್ಯಕ್ಷರಾದ ಶ್ರೀಮತಿ ಜಯಮ್ಮ, ಮಾಜಿ ಅಧ್ಯಕ್ಷ ಹೆಚ್.ಎಂ. ಹನುಮಂತಪ್ಪ, ಸದಸ್ಯರುಗಳಾದ ಶ್ರೀಮತಿ ಅನುಷಾ, ಕಾಂತಮ್ಮ, ರೂಪ, ದೇವಕಿ, ನಾಗಮ್ಮ, ಮೈತ್ರಮ್ಮ, ಚಂದ್ರಶೇಖರಚಾರಿ, ಸೋಮಶೇಖರಪ್ಪ, ಉಮೇಶ್ ಹಾಗೂ ಕರ್ನಾಟಕ ದಲಿತ ಸಂಘರ್ಷ ಸಮಿತಿಯ ತಾಲೂಕು ಸಂಚಾಲಕ ಪಿ ಜೆ ಮಹಾಂತೇಶ್, ಮಲೇಬೆನ್ನೂರಿನ ಪಿ ಬಿ ದೇವರಾಜ್ ಮತ್ತು ಪಿಡಿಓ ಶಾಂತಪ್ಪ ಹಾಗೂ ಹರಳಹಳ್ಳಿ, ಮಲ್ಲನಾಯಕನಹಳ್ಳಿ, ಗುಳದಹಳ್ಳಿ, ಸಂಕ್ಲಿಪುರ ಗ್ರಾಮಗಳ ಗ್ರಾಮಸ್ಥರು ಈ ಸಂದರ್ಭದಲ್ಲಿ ಹಾಜರಿದ್ದರು.

# ಬೆಳಗಾವಿ ಸಿಡಬ್ಲ್ಯುಸಿ ಸಭೆಯಲ್ಲಿ ಕಾಂಗ್ರೆಸ್‌ನ 2025ರ ಕ್ರಿಯಾ ಯೋಜನೆ

ನವದೆಹಲಿ, ಡಿ. 24- ಬೆಳಗಾವಿಯಲ್ಲಿ ನಡೆಯಲಿರುವ ಕಾಂಗ್ರೆಸ್ ಪಕ್ಷದ ಸಿಡಬ್ಲ್ಯುಸಿ ಸಭೆಯಲ್ಲಿ 2025ರ ಕ್ರಿಯಾ ಯೋಜನೆ ಬಗ್ಗೆ ನಿರ್ಧಾರ ತೆಗೆದುಕೊಳ್ಳಲಾಗುವುದು. ಈ ಸಭೆಗೆ 'ನವ ಸತ್ಯಾಗ್ರಹ ಬೈಠಕ್' ಎಂಬ ಹೆಸರಿಡಲಾಗಿದೆ. ಮಹಾತ್ಮಾ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಅಧಿವೇಶನಕ್ಕೆ 100 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಇಲ್ಲಿ ಸಿಡಬ್ಲ್ಯುಸಿ ಸಭೆ ನಡೆಸುವುದು ಪ್ರಾಮುಖ್ಯತೆ ಪಡೆದುಕೊಂಡಿದೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನಿಸಿದ್ದಾರೆ ಎಂದು ಹೇಳಿರುವ ಕಾಂಗ್ರೆಸ್, ಸಿಡಬ್ಲ್ಯುಸಿ ಸಭೆಯಲ್ಲಿ ಈ ಬಗ್ಗೆ ಮುಂದಿನ ಕ್ರಮ ತೆಗೆದುಕೊಳ್ಳುವ ಕುರಿತು ಚರ್ಚಿಸಲಾಗುವುದು ಎಂದು ಹೇಳಿದೆ.

ಕಾಂಗ್ರೆಸ್ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹಾಗೂ ಮಾಧ್ಯಮ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಾರೆ.

ಡಿಸೆಂಬರ್ 26ರಂದು ನಡೆಯಲಿರುವ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಗೆ ನವ ಸತ್ಯಾಗ್ರಹ ಬೈಠಕ್ ಎಂದು ಹೆಸರಿಡಲಾಗಿದೆ. ಇಲ್ಲಿ ಎರಡು ನಿರ್ಣಯಗಳನ್ನು ತೆಗೆದುಕೊಳ್ಳಲಾಗುವುದು ಎಂದವರು ಹೇಳಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ಅಂಬೇಡ್ಕರ್ ಅವರಿಗೆ ಅವಮಾನಿಸಿರುವ ಹಿನ್ನೆಲೆಯಲ್ಲಿ ಈ ವಾರವನ್ನು ಅಂಬೇಡ್ಕರ್ ಸಮ್ಮಾನ್ ಸಪ್ತಾಹ ಎಂದು ಆಚರಿಸಲು ನಿರ್ಧರಿಸಲಾಗಿದೆ ಎಂದು ರಮೇಶ್ ತಿಳಿಸಿದರು.

ಕೇಂದ್ರ ಗೃಹ ಸಚಿವರನ್ನು ಸಂಪುಟದಿಂದ ಕಿತ್ತು ಹಾಕಬೇಕು ಹಾಗೂ ಅಮಿತ್ ಷಾ ಕ್ಷಮೆ ಯಾಚಿಸಬೇಕು. ಇದೊಂದೆ ಸಮಸ್ಯೆಗೆ ಪರಿಹಾರ ಎಂದವರು ಹೇಳಿದ್ದಾರೆ.

ಡಿ. 27ರಂದು ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್ ಸಮಾವೇಶವನ್ನು ಬೆಳಗಾವಿಯಲ್ಲಿ ಆಯೋಜಿಸಲಾಗುವುದು ಎಂದು ರಮೇಶ್ ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಬಿಜೆಪಿ ಸಂವಿಧಾನವನ್ನು ಬದಲಿಸಲು ಬಯಸಿವೆ. ಅವರು ಸಂವಿಧಾನದ ಸತ್ವಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ ಎಂದು ಅವರು ಆರೋಪಿಸಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಸಂಸದರಾಗಿ ಸಂಸತ್ತನ್ನು ಪ್ರವೇಶಿಸಿದಾಗ ಅದರ ಬಾಗಿಲಿಗೆ ದೀರ್ಘದಂಡ ನಮಸ್ಕಾರ ಹಾಕಿದ್ದರು. ಇದರಿಂದಾಗಿ ಹಳೆಯ ಸಂಸತ್ ಕಟ್ಟಡವನ್ನು ತೊರೆಯಲಾಯಿತು. ಹೊಸ ಕಟ್ಟಡವನ್ನು ಉದ್ಘಾಟಿಸಲಾಯಿತು. ಈ ವರ್ಷ ನವೆಂಬರ್ 26ರಂದು ಪ್ರಧಾನಿ ಮೋದಿ ಅವರು ಸಂವಿಧಾನದ ಮೂಲ ಪ್ರತಿಗೆ ನಮಸ್ಕಾರ ಮಾಡಿದ್ದಾರೆ, ಇದರ ಅರ್ಥ ಹೊಸ ಸಂವಿಧಾನ ಬರಲಿದೆ ಎಂದು ರಮೇಶ್ ವ್ಯಾಖ್ಯಾನಿಸಿದರು.

1924ರಲ್ಲಿ ಮಹಾತ್ಮಾ ಗಾಂಧಿ ಕಾಂಗ್ರೆಸ್ ಸಭೆಯ ಅಧ್ಯಕ್ಷತೆ ವಹಿಸಿದ ಸ್ಥಳದಲ್ಲಿ ಈ ಬಾರಿಯೂ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. ಇದಕ್ಕಾಗಿ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳಲಾಗಿದೆ ಎಂದು ವೇಣುಗೋಪಾಲ್ ಹೇಳಿದರು.

ರಾಜಕೀಯ ಸ್ವಾತಂತ್ರ್ಯ ಪಡೆಯಲು, ಅಸ್ಪೃಶ್ಯತೆ ನಿವಾರಿಸಲು, ಸಮುದಾಯಗಳ ನಡುವೆ ಐಕ್ಯತೆ ತರಲು, ಸಾಮಾಜಿಕ ಹಾಗೂ ಆರ್ಥಿಕ ಅಸಮಾನತೆ ನಿವಾರಿಸಲು ಹಾಗೂ ನ್ಯಾಯದ ತತ್ವಗಳನ್ನು ಜಾರಿಗೆ ತರಲು ಅಹಿಂಸೆ ಹಾಗೂ ಅಸಹಕಾರ ಮಾರ್ಗ ಹಿಡಿಯಬೇಕು ಎಂದು ಬೆಳಗಾವಿ ಅಧಿವೇಶನದಲ್ಲಿ ಮಹಾತ್ಮಾ ಗಾಂಧಿ ಅವರು ತಿಳಿಸಿದ್ದರು ಎಂದು ವೇಣುಗೋಪಾಲ್ ಹೇಳಿದರು.

ಈ ಬಾರಿಯ ಸಿಡಬ್ಲ್ಯುಸಿ ಸಭೆಯಲ್ಲಿ ಸಿಡಬ್ಲ್ಯುಸಿ ಸದಸ್ಯರು, ಶಾಶ್ವತ ಆಹ್ವಾನಿತರು ಸೇರಿದಂತೆ ಸುಮಾರು 200 ನಾಯಕರು ಭಾಗವಹಿಸಲಿದ್ದಾರೆ. ಡಿ. 26ರ ಮಧ್ಯಾಹ್ನ 2.30ಕ್ಕೆ ನವ ಸತ್ಯಾಗ್ರಹ ಬೈಠಕ್ ಮಹಾತ್ಮ ಗಾಂಧಿ ನಗರದಲ್ಲಿ ನಡೆಯಲಿದೆ. ಡಿ. 27ರಂದು ಬೆಳಗಾವಿಯಲ್ಲಿ ಬೆಳಿಗ್ಗೆ 11.30ಕ್ಕೆ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್ ಸಮಾವೇಶ ನಡೆಯಲಿದೆ ಎಂದವರು ಹೇಳಿದರು.

ಮಹಾತ್ಮ ಗಾಂಧಿ ನಗರದಲ್ಲಿ ನಡೆಯುವ ಸಮಾವೇಶದಲ್ಲಿ ಕಾಂಗ್ರೆಸ್ ಸಂಸದರು, ಎಐಸಿಸಿ ಪದಾಧಿಕಾರಿಗಳು ಹಾಗೂ ಲಕ್ಷಾಂತರ ಕಾರ್ಯಕರ್ತರು ಪಾಲ್ಗೊಳ್ಳಲಿದ್ದಾರೆ ಎಂದವರು ಹೇಳಿದರು.

ಕ್ರಿಯಾ ಯೋಜನೆ ಬಗ್ಗೆ ಸಿಡಬ್ಲ್ಯುಸಿ ಸಭೆಯಲ್ಲಿ ಚರ್ಚಿಸಲಾಗುವುದು ಹಾಗೂ ಮುಂದಿನ ವರ್ಷದ ಯೋಜನೆಗಳ ಬಗ್ಗೆ ಎರಡು ನಿರ್ಣಯಗಳನ್ನು ಜಾರಿಗೆ ತರಲಾಗುವುದು ಎಂದವರು ಹೇಳಿದರು.

ಒಂದು ನಿರ್ಣಯ ರಾಜಕೀಯ ಸಂಬಂಧದ್ದು ಹಾಗೂ ಎರಡನೆಯದು ಅದಿವೇಶನದ ಮಹತ್ವದ ಕುರಿತದ್ದಾಗಿರಲಿದೆ ಎಂದ ಮೂಲಗಳು ತಿಳಿಸಿವೆ.

ಬಿಜೆಪಿ ಆಡಳಿತದಲ್ಲಿ ಆರ್ಥಿಕ ಅಸಮಾನತೆ ಉಂಟಾಗಿದೆ, ಪ್ರಜಾಪ್ರಭುತ್ವಕ್ಕೆ ಹಾನಿಯಾಗಿದೆ ಹಾಗೂ ಸಂವಿಧಾನಿಕ ಸಂಸ್ಥೆಗಳ ಮೇಲೆ ದಾಳಿ ನಡೆದಿದೆ. ಈ ವಿಷಯಗಳ ಬಗ್ಗೆ ಪ್ರಮುಖವಾಗಿ ಚರ್ಚೆ ನಡೆಯಲಿದೆ ಎಂದು ವೇಣುಗೋಪಾಲ್ ತಿಳಿಸಿದರು.

# ಹರಿಹರ : ಶ್ರೀ ಕೊಟ್ಟೂರೇಶ್ವರ ಸ್ವಾಮಿ ಪಂಚಲೋಹದ ಮೂರ್ತಿ ಉತ್ಸವ



ಹರಿಹರ,ಡಿ.24- ನಗರದ ಹೊರ ವಲಯದಲ್ಲಿರುವ ಶ್ರೀ ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪ್ರತಿಷ್ಠಾಪಿಸಲಾದ ಪಂಚಲೋಹದ ಮೂರ್ತಿಯ ಪಲ್ಲಕ್ಕಿ ಉತ್ಸವ ವಿಜೃಂಭಣೆಯಿಂದ ನೆರವೇರಿತು.

ಮೆರವಣಿಗೆ ತುಂಗಭದ್ರಾ ನದಿಯ ಆವರಣದಿಂದ ಆರಂಭಗೊಂಡು, ರಾಜಬೀದಿಗಳ ಮೂಲಕ ಹಾದು ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನಕ್ಕೆ ಅಂತ್ಯಗೊಂಡಿತು. ಸಂಜೆ ಭಕ್ತರ ಸಮ್ಮುಖದಲ್ಲಿ ಶ್ರೀ ಸ್ವಾಮಿಯ ಕಾರ್ತಿಕೋತ್ಸವ ನಡೆಯಿತು. ಈ ಸಂದರ್ಭದಲ್ಲಿ ಗಜಾಪುರದ ವೀರಯ್ಯ ಸ್ವಾಮಿ, ಹೆಚ್.ಎಂ. ಹಾಲ ಸ್ವಾಮಿ, ಐರಣಿ ಕೊಟ್ರೇಶ್, ಬಸವರಾಜ್, ಕರಿಬಸಪ್ಪ, ಚೆನ್ನೇಶ್, ಸಮಾಳ ಚಂದ್ರಪ್ಪ, ದಯಾನಂದ ಇತರರು ಇದ್ದರು.


## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ಕಾಣಿಸಿದ ಹಳೆ ಪಿ.ಬಿ.ರಸ್ತೆ ಶಂಕರ್ ವಿಹಾರ್ ಬಡಾವಣೆಯಲ್ಲಿ ಬರುವ ಸ್ವತ್ತುಗಳನ್ನು ದಾವಣಗೆರೆ ಜಿಲ್ಲೆ, ಹರಿಹರ ಸಿಟಿ, ಪಿ.ಬಿ. ರಸ್ತೆಯಲ್ಲಿ ಬರುವ ಲಾಲ್‌ಬೇಗ್ ಬಿಲ್ಡಿಂಗ್‌ನಲ್ಲಿ ವಾಸವಾಗಿರುವ ಶ್ರೀ ಹಾಫೀಜ್ ಬೇಗ್ ತಂದೆ ಎಂ.ಲಾಲ್‌ಬೇಗ್ ಸಾಬ್ ಇವರು ದಿನಾಂಕ:07/08/2023 ರಂದು ದಾವಣಗೆರೆ ಉಪ-ನೋಂದಣಾಧಿಕಾರಿಗಳ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ.:07333/2023-24, 07332/2023-24, ಮತ್ತು 07331/2023-24 ಎಂದು ನೋಂದಣಿಯಾದ ಕ್ರಯಪತ್ರಗಳ ಮೂಲಕ **1)** ಶ್ರೀಮತಿ ಶಾಹೀನಾತಾಜ್ ಕೋಂ ಸೈಯದ್ ಮಹಮ್ಮದ್ ಸಾಬ್ **2)**ಸಯೀದಾ ನಿಷಾದ್ ಬಿನ್ ಸೈಯ್ಯದ್ ಮೊಹಮ್ಮದ್ **3)** ನಾಹಿದಾಬಾನು ಕೋಂ ಅಜೀಂ **4)** ಶ್ರೀಮತಿ ಶಬಾನಾಬಾನು ಕೋಂ ಲೇಟ್ ಸೈಯದ್ ಸಯೀದ್ **5)** ಸೈಯದ್ ರಫೀಕ್ ಬಿನ್ ಸೈಯದ್ ಮೊಹಮದ್ **6)** ಶ್ರೀಮತಿ ಗುಲ್ಜಾರ್ ಕೋಂ ಅಸ್ಲಂ **7)** ಶ್ರೀಮತಿ ಸಂಜೀದ್ ಬಾನು ಕೋಂ ಲೇಟ್ ಸೈಯದ್ ಷಂಷೀರ್ **8)** ಸೈಯದ್ ಫಾರೂಕ್ ಬಿನ್ ಸೈಯದ್ ಮೊಹಮ್ಮದ್ ಸಾಬ್ ಇವರಿಂದ ಖರೀದಿ ಮಾಡಿ ಸ್ವಾಧೀನಾನುಭವದಲ್ಲಿರುವ ಸದರಿ ಸ್ವತ್ತುಗಳನ್ನು ನಮ್ಮ ಕಕ್ಷಿದಾರರಿಗೆ ಮಾರಾಟ ಮಾಡಲು ಇಚ್ಛಿಸಿರುತ್ತಾರೆ. ಈ ಬಗ್ಗೆ ಯಾರದಾದರು ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ತಂಟೆ, ತಕರಾರು ಇದ್ದಲ್ಲಿ ಈ ನೋಟೀಸ್ ತಲುಪಿದ ಏಳು ದಿನಗಳ ಒಳಗಾಗಿ ಈ ಕೆಳಕಂಡ ನಮ್ಮ ವಿಳಾಸಕ್ಕೆ ಲಿಖಿತವಾಗಿ ದಾಖಲೆಗಳ ಸಮೇತ ಸಲ್ಲಿಸತಕ್ಕದ್ದು. ಏಳು ದಿನಗಳ ಒಳಗಾಗಿ ಯಾವುದೇ ತಂಟೆ ತಕರಾರು ಬಾರದಿದ್ದಲ್ಲಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಯಾವುದೇ ರೀತಿಯ ತಕರಾರು ಇರುವುದಿಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿದಾರರು ಸದರಿ ಆಸ್ತಿಗಳನ್ನು ಖರೀದಿ ಮಾಡುವವರಿದ್ದಾರೆ ಎಂದು ಈ ಮೂಲಕ ಸಾರ್ವಜನಿಕವಾಗಿ ತಿಳಿಸಲಾಗಿದೆ.

**ಷೆಡ್ಯೂಲ್**: 1. ದಾವಣಗೆರೆ ಸಿಟಿ, ಹಳೇ ಪಿ.ಬಿ. ರಸ್ತೆಯ ಪಕ್ಕ ಬರುವ ಶಂಕರ್ ವಿಹಾರ್ ಬಡಾವಣೆ, ವಾರ್ಡ್ ನಂ.26ರಲ್ಲಿ ವಿಂಗಡಿಸಿರುವ ಪ್ಲಾಟುಗಳ ಪೈಕಿ, ಪ್ಲಾಟ್ ನಂ.6, ಸ್ವತ್ತಿನ ಸಂಖ್ಯೆ. 26-4-791-868/ಕಿ-1, ಸ್ವತ್ತಿನ ಸಂಖ್ಯೆ. 26-4-791-868/ಕಿ-2 ಮತ್ತು ಸ್ವತ್ತಿನ ಸಂಖ್ಯೆ.26-4-788-868/ಕಿ-3 ಸ್ವತ್ತಿನ ಹಳೇ ಸಂಖ್ಯೆ. 868/ಕಿ-1, 868/ಕಿ-2 ಮತ್ತು 868/ಕಿ-3, ಇವುಗಳ ಒಟ್ಟು ಅಳತೆ ಪೂರ್ವ-ಪಶ್ಚಿಮ 9.144018 x ಉತ್ತರ-ದಕ್ಷಿಣ 31.394463 (30 x 103 ಅಡಿಗಳು) ಇರುವ ಇವುಗಳ ಒಟ್ಟು ಸ್ವತ್ತಿಗೆ **ಚಕ್ಕುಬಂದಿ: ಪೂರ್ವಕ್ಕೆ**- ಸೈಟ್ ನಂ.7, **ಪಶ್ಚಿಮಕ್ಕೆ**- ಸೈಟ್ ನಂ.5, **ಉತ್ತರಕ್ಕೆ**- 30 ಅಡಿ ರಸ್ತೆ, **ದಕ್ಷಿಣಕ್ಕೆ**- ಹಳೇ ಪಿ.ಬಿ. ರಸ್ತೆ.

**ಶ್ರೀ ಬಿ. ಬಸವರಾಜ ಉಚ್ಚಂಗಿದುರ್ಗ,**
ವಕೀಲರು, ನಂ.1040, 1ನೇ ಮೇನ್, 4ನೇ ಕ್ರಾಸ್,
ವಿನೋಬನಗರ, ದಾವಣಗೆರೆ.
**ಮೊ: 9242134700, 9019784126**

ದಿನಾಂಕ:24-12-2024
ಸ್ಥಳ:-ದಾವಣಗೆರೆ.


# ಸಂಜೆ 5ರ ಮತದಾನವನ್ನು ಅಂತಿಮ ಮತದಾನದ ಮಾಹಿತಿಗೆ ಹೋಲಿಸುವುದು ತಪ್ಪು : ಆಯೋಗ

ನವದೆಹಲಿ, ಡಿ. 24- ಇತ್ತೀಚೆಗೆ ನಡೆದ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಮತದಾರರ ಹೆಸರುಗಳನ್ನು ನಿರಂಕುಷವಾಗಿ ಸೇರ್ಪಡೆ ಇಲ್ಲವೇ ಅಳಿಸುವುದು ಮಾಡಿಲ್ಲ ಎಂದು ಚುನಾವಣಾ ಆಯೋಗ ತಿಳಿಸಿದೆ.

ಕಾಂಗ್ರೆಸ್ ಪಕ್ಷಕ್ಕೆ ಪ್ರತಿಕ್ರಿಯೆ ನೀಡಿರುವ ಚುನಾವಣಾ ಆಯೋಗ, ಸಂಜೆ 5ರವರೆಗೆ ನಡೆದ ಮತದಾನವನ್ನು ಅಂತಿಮ ಮತದಾನದ ಅಂಕಿ-ಅಂಶಗಳಿಗೆ ಹೋಲಿಸುವುದು ಸರಿಯಲ್ಲ ಎಂದು ಹೇಳಿದೆ.

ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ಪಕ್ಷವು ಹಲವು ಆಕ್ಷೇಪಗಳನ್ನು ದಾಖಲಿಸಿತ್ತು. ಈ ಬಗ್ಗೆ ಚುನಾವಣಾ ಆಯೋಗವು ವಿವರವಾದ ಟಿಪ್ಪಣಿ ಹಾಗೂ ಎಫ್‌ಎಕ್ಯೂ ರೀತಿಯ ಉತ್ತರಗಳನ್ನು ಪ್ರಕಟಿಸಿದೆ.

ಸಂಜೆ 5 ರಿಂದ ರಾತ್ರಿ 11.45ರವರೆಗೆ ನಡೆದ ಮತದಾನ ಸಾಮಾನ್ಯವಾಗಿದೆ, ಇದು ಒಟ್ಟು ಮತದಾನದ ಭಾಗವಾಗಿದೆ ಎಂದು ಚುನಾವಣಾ ಆಯೋಗ ಹೇಳಿದೆ.

ಮತಗಟ್ಟೆಯೊಂದರಲ್ಲಿ ಮತದಾನ ಪೂರ್ಣಗೊಂಡ ಸಂದರ್ಭದಲ್ಲಿ ಮತದಾನದ ಮಾಹಿತಿಯನ್ನು ಫಾರಂ 17 ಸಿ ಮೂಲಕ ಅಭ್ಯರ್ಥಿಗಳ ಏಜೆಂಟರುಗಳಿಗೆ ನೀಡಲಾಗಿರುತ್ತದೆ. ಹೀಗಾಗಿ ವಾಸ್ತವಿಕ ಮತದಾನದ ಮಾಹಿತಿ ತಿದ್ದುವುದು ಅಸಾಧ್ಯ ಎಂದು ಚುನಾವಣಾ ಆಯೋಗ ಹೇಳಿದೆ.

ಮತದಾರರ ಪಟ್ಟಿ ರೂಪಿಸುವಾಗ ಕಾಂಗ್ರೆಸ್ ಪ್ರತಿನಿಧಿಗಳೂ ಭಾಗಿಯಾಗಿದ್ದಾರೆ. ಪಾರದರ್ಶಕವಾಗಿ ಮತದಾರರ ಪಟ್ಟಿ ರೂಪಿಸಲಾಗಿದೆ. ಜುಲೈನಿಂದ ನವೆಂಬರ್‌ವರೆಗೆ 50 ವಿಧಾನಸಭಾ ಕ್ಷೇತ್ರಗಳಲ್ಲಿ ಸರಾಸರಿ 50 ಸಾವಿರ ಮತದಾರರನ್ನು ಸೇರ್ಪಡೆ ಮಾಡಲಾಗಿದೆ ಹಾಗೂ ಈ ಪೈಕಿ 47ರಲ್ಲಿ ಮಹಾಯುತಿ ಮೈತ್ರಿಕೂಟ ಗೆಲುವು ಸಾಧಿಸಿದೆ ಎಂದು ಕಾಂಗ್ರೆಸ್ ಹೇಳಿರುವುದು ಸರಿಯಲ್ಲ ಹಾಗೂ ತಪ್ಪುದಾರಿಗೆ ಎಳೆಯುವಂತದ್ದು ಎಂದು ಚುನಾವಾಣಾ ಆಯೋಗ ಹೇಳಿದೆ.

ಕೇವಲ 6 ವಿಧಾನಸಭಾ ಕ್ಷೇತ್ರಗಳಲ್ಲಿ ಮಾತ್ರ 50 ಸಾವಿರಕ್ಕೂ ಹೆಚ್ಚು ಮತದಾರರು ಈ ಅವಧಿಯಲ್ಲಿ ಸೇರ್ಪಡೆಯಾಗಿದ್ದರು. ಹೀಗಾಗಿ 47 ಸ್ಥಾನಗಳ ಬಗ್ಗೆ ಕಾಂಗ್ರೆಸ್ ಹೇಳುವುದಕ್ಕೆ ಆಧಾರ ಇಲ್ಲ ಎಂದು ಆಯೋಗ ಹೇಳಿದೆ.

# ಕಾಂಗ್ರೆಸ್ ಸಭೆ : ಶ್ರೀನಿವಾಸ್‌ಗೆ ಅತಿಥಿ ಸ್ವಾಗತಿಸುವ ಜವಾಬ್ದಾರಿ

ಹರಿಹರ, ಡಿ. 24- ಇದೇ ದಿನಾಂಕ 26 -27 ರಂದು ಬೆಳಗಾವಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ 100 ನೇ ಅಧಿವೇಶನದಲ್ಲಿ ಅತಿಥಿಯಾಗಿ ಭಾಗವಹಿಸಲಿರುವ ಮಣಿಪುರದ ಮಾಜಿ ಮುಖ್ಯಮಂತ್ರಿ, ಮಣಿಪುರದ ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಓ.ಐಬೋಬಿ ಸಿಂಗ್ ಹಾಗೂ ಅವರ ಪತ್ನಿ, ಮಾಜಿ ಶಾಸಕರಾದ ಎಂ. ಲಂಥೋನಿ ದೇವಿ ಅವರನ್ನು ಬೆಳಗಾವಿ ವಿಮಾನ ನಿಲ್ದಾಣದಲ್ಲಿ ಸ್ವಾಗತಿಸಿ ಅವರೊಂದಿಗೆ ಅಧಿವೇಶನದಲ್ಲಿ ಭಾಗವಹಿಸಲು ಹರಿಹರ ವಿಧಾನಸಭಾ ಕ್ಷೇತ್ರದ ಮುಖಂಡ ನಂದಿಗಾವಿ ಶ್ರೀನಿವಾಸ್ ನಾಳೆ ದಿನಾಂಕ 25 ರಂದು ಬೆಳಗಾವಿಗೆ ತೆರಳಲಿದ್ದಾರೆ.

# ಹರಿಹರದಲ್ಲಿ ಮಹೇಶ್ವರ ಜಾತ್ರಾ ಸಂಭ್ರಮ



ಹರಿಹರ, ಡಿ.24- ನಗರದ ತುಂಗಭದ್ರಾ ನದಿಯ ತಟದಲ್ಲಿರುವ ಶ್ರೀ ಸಂಗಮೇಶ್ವರ ಸ್ವಾಮಿ ಹಾಗೂ ಮಹೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ಮಹೇಶ್ವರ ಜಾತ್ರಾ ಮಹೋತ್ಸವ ಜರುಗಿತು.


ಅರ್ಚಕ ಸಿದ್ದಯ್ಯ ಹಿರೇಮಠ ಮತ್ತು ಸಂಗಡಿಗರಿಂದ ವಿಶೇಷ ಪೂಜೆ ನೇರವೇರಿತು. ನಂತರ ಅನ್ನ, ಹಾಲು, ಬೆಲ್ಲ, ಬಾಳೆ, ಹಣ್ಣು ಪ್ರಸಾದ ವಿನಿಯೋಗ ನಡೆಯಿತು. ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಅಧ್ಯಕ್ಷ ಡಿ.ಜಿ. ಶಿವಾನಂದಪ್ಪ, ತಾಪಂ ಮಾಜಿ ಅಧ್ಯಕ್ಷ ಟಿ.ಜೆ.ಮುರುಗೇಶಪ್ಪ, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ, ಕಸಬಾ ಗೌಡ್ರು ಲಿಂಗಾರಾಜ್ ಪಾಟೀಲ್, ಮಹೇಶ್ವರ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಚೇತನ್ ಮೂರ್ಕಲ್, ಕಾರ್ಯದರ್ಶಿ ಕೊಂಡಜ್ಜಿ ಈಶ್ವರಪ್ಪ, ಸಮಿತಿಯ ಸದಸ್ಯರಾದ ಜಿ.ಕೆ. ವೀರಣ್ಣ, ಹೆಚ್. ಕೆ. ಸಂತೋಷ, ಕೆ.ಜಿ. ಶಿವಕುಮಾರ್ ಕಂಚಿಕೇರಿ, ಶಿವಕುಮಾರ್ ಸ್ವಾಮಿ, ಕರಿಬಸಪ್ಪ ಕಂಚಿಕೇರಿ, ಮೂರ್ಕಲ್ ಚಂದನ್, ಕುಮಾರ್ ಸ್ವಾಮಿ, ಮಲ್ಲೇಶಪ್ಪ, ಹೆಚ್.ರೇಣುಕಾ ಪ್ರಸಾದ್, ವಿಜಯಕುಮಾರ್, ಶೇರಾಪುರ ರಾಜಪ್ಪ, ಸಿದ್ದೇಶ್ ಗೌಡ್ರು, ಬಿಳೆಬಾಳು ನಾಗರಾಜ್, ಮಲ್ಲೇಶ್ ಚಂದ್ರಶೇಖರ್, ಎಂ. ಚಿದಾನಂದ ಕಂಚಿಕೇರಿ, ಸಪ್ಪಿರೊಟ್ಟಿ ಮಹೇಂದ್ರ ಇತರರು ಹಾಜರಿದ್ದರು.

# ಬಿ. ಕಲಪನಹಳ್ಳಿ ಮಹೇಶ್ವರ ಜಾತ್ರೆಯಲ್ಲಿ ಮಹಿಳೆಯರು

ದಾವಣಗೆರೆ, ಡಿ. 24 - ತಾಲ್ಲೂಕಿನ ಬಿ. ಕಲ್ಪನಹಳ್ಳಿ ಶರಣ ಬಸವೇಶ್ವರ (ಅಜ್ಜಯ್ಯನ ಮಠ) ಕಲ್ಯಾಣ ಮಂಟಪದಲ್ಲಿ ಶ್ರೀ ಮಹೇಶ್ವರ ಸ್ವಾಮಿ ಜಾತ್ರೆ ನಡೆಯಿತು. ಬೆಳಿಗ್ಗೆ ಶ್ರೀ ಮಹೇಶ್ವರ ಸ್ವಾಮಿಗೆ ಗ್ರಾಮದ ಭಕ್ತಾದಿಗಳು ಪೂಜೆ ಸಲ್ಲಿಸಿ ಮಹಾಮಂಗಳಾರತಿ ನಂತರ ಅನ್ನ, ಬೆಲ್ಲ, ಹಾಲು, ತುಪ್ಪ, ವಿಶೇಷವಾಗಿ ಬಾಳೆ ಹಣ್ಣು ಪ್ರಸಾದ ಸೇವಿಸಿದರು. ರಾತ್ರಿ ಅನ್ನ, ಸಾರು, ಪ್ರಸಾದ ಸಹ ನಡೆಯಿತು. ಬೆಳಗ್ಗೆ ಪುರುಷರ ಜೊತೆಗೆ ವಿಶೇಷವಾಗಿ ಮಹಿಳೆಯರೂ ಸಹ ಪ್ರಸಾದ ಸ್ವೀಕರಿಸಿದರು.

## ಚಿಂದೋಡಿ ಕೆ. ರಾಜಶೇಖರ್ ನಿಧನ



ದಾವಣಗೆರೆ ಎಂಸಿಸಿ ಬಿ ಬ್ಲಾಕ್, ಕುವೆಂಪು ನಗರ, 3ನೇ ಕ್ರಾಸ್, ಶಂಕರ್‌ಲೀಲಾ ಗ್ಯಾಸ್ ಏಜೆನ್ಸಿ ಹತ್ತಿರ ರಂಗಭೂಮಿ ಹಿರಿಯ ಕಲಾವಿದರಾದ ದಿ.ಚಿಂದೋಡಿ ದೊಡ್ಡಕರಿಬಸಪ್ಪನವರ ನಾಲ್ಕನೇ ಪುತ್ರ ಸಿ.ಕೆ. ರಾಜಶೇಖರ್ (ಬೆಳಗಾಂ) (67) ಇವರು ದಿನಾಂಕ 24.12.2024ರಂದು ನಿಧನರಾಗಿರುತ್ತಾರೆ. ಮೃತರು ಪತ್ನಿ, ಇಬ್ಬರು ಪುತ್ರಿಯರು, ಓರ್ವ ಪುತ್ರ ಹಾಗೂ ಅಪಾರ ಬಂಧುಗಳನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿ. 25.12.2024ರಂದು ಬೆಳಿಗ್ಗೆ 10.15ಕ್ಕೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಸಲಾಗುವುದು.

## ಕಾಡಜ್ಜಿ ಕರೇಗೌಡ್ರ ನಾಗೇಂದ್ರಪ್ಪ ನಿಧನ



ದಾವಣಗೆರೆ ತಾ. ಕಾಡಜ್ಜಿ ಗ್ರಾಮದ ವಾಸಿಯಾದ ಕರೇಗೌಡ್ರ ಬಸಪ್ಪರವರ ತಂದೆಯವರಾದ ಕರೇಗೌಡ್ರ ನಾಗೇಂದ್ರಪ್ಪ (90) ಇವರು ದಿನಾಂಕ 24.12.2024ನೇ ಮಂಗಳವಾರ ಸಂಜೆ 6.10ಕ್ಕೆ ನಿಧನರಾಗಿದ್ದಾರೆ. ಓರ್ವ ಪುತ್ರ, ಓರ್ವ ಪುತ್ರಿ, ಅಳಿಯ, ಸೊಸೆ, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 25.12.2024ರ ಬುಧವಾರ ಮಧ್ಯಾಹ್ನ 1 ಗಂಟೆಗೆ ಕಾಡಜ್ಜಿ ಗ್ರಾಮದ ಸ್ವಂತ ಜಮೀನಿನಲ್ಲಿ ನೆರವೇರಲಿದೆ.

# ಮನುಕುಲಕ್ಕೆ ಅನ್ನ ನೀಡುವ ರೈತರೇ ಆದರ್ಶ ವ್ಯಕ್ತಿಗಳು



ಹರಿಹರ, ಡಿ.24- ದೇಶದ ಮನುಕುಲಕ್ಕೆ ಅನ್ನವನ್ನು ನೀಡುವ ರೈತರೇ ಇಂದಿನ ಸಮಾಜದ ಆದರ್ಶ ವ್ಯಕ್ತಿಗಳು ಎಂದು ಉಪನ್ಯಾಸಕ ಗುರುಬಸವರಾಜಯ್ಯ ಹೇಳಿದರು.

ನಗರದ ಹೊರವಲಯದ ಶಿವನಹಳ್ಳಿ ಗ್ರಾಮದ ಚಂದ್ರಶೇಖರಯ್ಯನವರ ತೋಟದಲ್ಲಿ ಆವರಣ ದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟಿನವರು ಆಯೋಜಿಸಿದ್ದ ರೈತರ ದಿನದ ಆಚರಣೆಯಲ್ಲಿ ಅವರು ಮಾತನಾಡಿದರು.

ರೈತರು ದೇಶದ ಬೆನ್ನೆಕುಬು ಆಗಿರುವುದರಿಂದ ಗೌರವಿಸುವಂತೆ ಆಗಬೇಕು. ಭಾರತದ ಐದನೇ ಪ್ರಧಾನಿ ಚೌಧರಿ ಚರಣ್ ಸಿಂಗ್ ಅವರ ಜನ್ಮದಿನವನ್ನು ಗೌರವಿಸಲು ಈ ರಾಷ್ಟ್ರೀಯ ರೈತ ದಿನಾಚರಣೆಯನ್ನು 2001ರಲ್ಲಿ ಆರಂಭಿಸಲಾಯಿತು. ಪ್ರತಿ ತುತ್ತು ಸ್ವೀಕರಿಸುವಾಗ ರೈತರನ್ನು ಸ್ಮರಿಸಿ ತೆಗೆದುಕೊಳ್ಳಬೇಕು, ಅನ್ನದಾತನ ಬಾಳು ಸುಖಮಯವಾಗಬೇಕೆನ್ನುವುದು ಪ್ರತಿಯೊಬ್ಬರ ಆಶಯವಾಗಬೇಕಿದೆ ಎಂದರು.

ಗ್ರಾಮದ ರೈತ ಮುಖಂಡರಾದ ಚಂದ್ರಶೇಖರಯ್ಯ ಮಾತನಾಡಿ, ನಮಗೆ ಅನ್ನದಾತರಾದ ರೈತರನ್ನು ಸ್ಮರಿಸುವ ಹಾಗೂ ಅವರನ್ನು ಗೌರವಿಸುವ ಈ ರೈತ ದಿನಾಚರಣೆ ನಿಜಕ್ಕೂ ಹೆಮ್ಮೆ ತರುವ ವಿಷಯವಾಗಿದೆ. ರೈತ ಕಷ್ಟಪಟ್ಟು ಬೆಳೆಯನ್ನು ಬೆಳೆಯುವರು. ಆದರೆ, ಆ ಬೆಳೆಗೆ ಅಮೂಲ್ಯವಾದ ಬೆಲೆ ಸಿಗದೆ ನೋವನ್ನು ಅನುಭವಿಸುತ್ತಾನೆ. ರೈತ ಬೆಳೆದ ಬೆಳೆಗೆ ಉತ್ತಮವಾದ ಬೆಲೆ ದೊರಕಿದಾಗ ಮಾತ್ರ ಅನ್ನದಾತನ ಬಾಳು ಬೆಳಕಾಗುವುದು ಎಂದರು.

ಈ ವೇಳೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟಿನ ಕೃಷಿ ಮೇಲ್ವಿಚಾರಕ ದೇವರಾಜ್ ಮಾತನಾಡಿದರು.

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಸದಸ್ಯ ಎಂ.ಎಸ್.ರೇವಣಸಿದ್ದಪ್ಪ, ಹಿರಿಯ ರೈತರಾದ ಎಂ.ರುದ್ರಪ್ಪ, ಅನಿಲ್ ಕುಮಾರ್, ಪಿ. ಜಿ.ಮಹೇಶ್, ಜಿ.ಎನ್.ಗಂಗಣ್ಣ ಉಪಸ್ಥಿತರಿದ್ದರು.

## ಕವಿ ಹೃದಯಿ, ಮುತ್ಸದ್ದಿ ರಾಜಕಾರಣಿ, ಅತ್ಯುತ್ತಮ ವಾಗ್ಮಿ

# ಮೈತ್ರಿ ರಾಜಕಾರಣದಲ್ಲಿ ಯಶಸ್ಸಿನ ಹಾದಿ ತೋರಿದ ವಾಜಪೇಯಿಗೆ ಜನ್ಮ ಶತಮಾನ

ನವದೆಹಲಿ, ಡಿ. 24- 1984ರ ಡಿಸೆಂಬರ್ 30ರಂದು ಮುಂಬೈನ ಶಿವಾಜಿ ಪಾರ್ಕ್‌ನಲ್ಲಿ ತಮ್ಮ ಪ್ರಸಿದ್ಧ ಭಾಷಣ ಮಾಡಿದ್ದ ಅಟಲ್ ಬಿಹಾರಿ ವಾಜಪೇಯಿ, 'ಅಂಧೇರಾ ಛಟೇಗಾ, ಸೂರಜ್ ನಿಕಲೇಗ, ಕಮಲ್ ಖಿಲೇಗ' (ಕತ್ತಲು ಅಳಿಯಲಿದೆ, ಸೂರ್ಯ ಉದಯಿಸಲಿದ್ದಾನೆ, ಕಮಲ ಅರಳಲಿದೆ ಎಂದಿದ್ದರು.


ಅವರ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಅಟಲ್ ನುಡಿಗಳು ಸತ್ಯವಾಗಿವೆ. ಬಿಜೆಪಿ ಸತತ ಮೂರನೇ ಬಾರಿಗೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದೆ ಹಾಗೂ ಕಮಲ ಸಂಪೂರ್ಣವಾಗಿ ಅರಳಿದೆ.

ಒಂದು ಕಾಲದಲ್ಲಿ ಬಿಜೆಪಿಯ ಸಾಂಸ್ಕೃತಿಕ ಅಜೆಂಡಾ ಇತರೆ ಪಕ್ಷಗಳಿಗೆ ಅಸ್ಪೃಶ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಬಿಜೆಪಿಯನ್ನು ವಾಜಪೇಯಿ ಮುನ್ನೆಲೆಗೆ ತಂದಿದ್ದರು. ಅವರ ಹಾದಿಯಲ್ಲಿ ಸಾಗಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ, ಬಿಜೆಪಿಯ ಸಾಂಸ್ಕೃತಿಕ ಅಜೆಂಡಾವನ್ನು ರಾಷ್ಟ್ರೀಯ ರಾಜಕಾರಣದ ಮಧ್ಯಬಿಂದು ಆಗುವಂತೆ ಮಾಡಿದ್ದಾರೆ.

ಮುತ್ಸದ್ಧಿ ಹಾಗೂ ವಾಗ್ಮಿಯಾಗಿದ್ದ ವಾಜಪೇಯಿ ಅವರು ಕೇಂದ್ರದಲ್ಲಿ ಪೂರ್ಣಾವಧಿ ಮುಗಿಸಿದ ಮೊದಲ ಕಾಂಗ್ರೆಸ್ಸೇತರ ಪ್ರಧಾನಿಯಾಗಿದ್ದರು. ಅವರ ಅವಧಿಯಲ್ಲಿದ್ದ ರಾಜಕೀಯ ದಿಗ್ಗಜರ ನಡುವೆ ವಾಜಪೇಯಿ ತಮ್ಮದೇ ಆದ ಪ್ರಜಾಸತ್ತಾತ್ಮಕ ಸ್ಫೂರ್ತಿಯ ರಾಜಕಾರಣದಿಂದ ಜನಮನ ಗೆದ್ದಿದ್ದರು. ರಾಜಕೀಯ ಪಕ್ಷಗಳ ಗಡಿ ಮೀರಿದ ಮೆಚ್ಚುಗೆ ಪಡೆದಿದ್ದರು.

ಮೂರು ಬಾರಿ ಪ್ರಧಾಮಂತ್ರಿಯಾಗಿದ್ದ ಅವರು, ರಾಷ್ಟ್ರಮಟ್ಟದಲ್ಲಿ ಮೈತ್ರಿ ರಾಜಕಾರಣ ಮುನ್ನಡೆಸುವಲ್ಲಿ ಯಶಸ್ಸು ಕಂಡಿದ್ದರು. ಮೈತ್ರಿ ಪಕ್ಷಗಳನ್ನು ಹೊಂದಿಯೂ ಸರ್ಕಾರವನ್ನು ಸುಭದ್ರವಾಗಿ ನಡೆಸಬಹುದು ಎಂದು ಅವರು ತೋರಿಸಿಕೊಟ್ಟಿದ್ದರು.

ಅವರ ಅವಧಿಯಲ್ಲಿ 1999ರಲ್ಲಿ ನಡೆದ ವಿಮಾನ ಅಪಹರಣ ಹಾಗೂ 2001ರಲ್ಲಿ ನಡೆದ ಸಂಸತ್ತಿನ ಮೇಲಿನ ಉಗ್ರವಾದಿ ದಾಳಿ ಪ್ರಕರಣಗಳು ರಾಷ್ಟ್ರೀಯ ಬಿಕ್ಕಟ್ಟು ತಂದಿದ್ದವು. ಈ ಎರಡೂ ಘಟನೆಗಳನ್ನು ನಿರ್ವಹಿಸಿದ ರೀತಿ ಅವರ ಸರ್ಕಾರ ಟೀಕೆಗಳನ್ನು ಎದುರಿಸುವಂತೆ ಮಾಡಿತ್ತು. ಬಿಜೆಪಿಗೆ ನಿಕಟವರ್ತಿಗಳಾಗಿರುವ ಬಲಪಂಥೀಯ ಸಂಘಟನೆಗಳೂ ಸಹ ವಾಜಪೇಯಿ ಅವರನ್ನು ಟೀಕಿಸಿದವು. ವಾಜಪೇಯಿ ಅವರು ಬಿಜೆಪಿಯ ಸಾಂಸ್ಕೃತಿಕ ಹಾಗೂ ಆರ್ಥಿಕ ಅಜೆಂಡಾವನ್ನು ಮುನ್ನೆಲೆಗೆ ತಂದಿಲ್ಲ ಎಂದು ಪಕ್ಷದಿಂದಲೇ ಆಕ್ಷೇಪಗಳನ್ನು ಎದುರಿಸಬೇಕಾಯಿತು. ಆದರೆ ತಮ್ಮ ಸರ್ಕಾರ ಯಾವುದೇ ರಾಜಕೀಯ ಬೆದರಿಕೆ ಇಲ್ಲವೇ ಸಾರ್ವಜನಿಕರ ಆಕ್ರೋಶ ಎದುರಿಸದಂತೆ ಮುನ್ನಡೆಸುವಲ್ಲಿ ವಾಜಪೇಯಿ ಯಶಸ್ಸು ಕಂಡಿದ್ದರು.



ಏಪ್ರಿಲ್ 1999ರಲ್ಲಿ ಅವರು ಲೋಕಸಭೆಯಲ್ಲಿ ಕೇವಲ 1 ಮತ ಕಡಿಮೆ ಪಡೆದ ಕಾರಣಕ್ಕಾಗಿ ಪ್ರಧಾನಮಂತ್ರಿ ಹುದ್ದೆಗೆ ರಾಜೀನಾಮೆ ನೀಡಬೇಕಾಯಿತು. ಅವರ ನೇತೃತ್ವದ ಹಂಗಾಮಿ ಸರ್ಕಾರ ಇದ್ದ ಸಮಯದಲ್ಲಿ ಪಾಕಿಸ್ತಾನವು ಕಾರ್ಗಿಲ್‌ನಲ್ಲಿ ನುಸುಳುವಿಕೆ ನಡೆಸಿತು. ಈ ಬಿಕ್ಕಟ್ಟನ್ನು ಅವರು ದಕ್ಷವಾಗಿ ನಿಭಾಯಿಸಿದ್ದರು. ನಂತರ ನಡೆದ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಇನ್ನಷ್ಟು ಬಹುಮತ ಪಡೆದು ಅಧಿಕಾರಕ್ಕೆ ಬಂದಿತ್ತು. ಇದರಿಂದಾಗಿ ಅವರು ಪೂರ್ಣಾವಧಿಯ ಸರ್ಕಾರ ನಡೆಸಲು ಸಾಧ್ಯವಾಯಿತು.

1957ರಲ್ಲಿ ಮೊದಲ ಬಾರಿಗೆ ಲೋಕಸಭೆಗೆ ಕಾಲಿರಿಸಿದ್ದ ವಾಜಪೇಯಿ ಉತ್ತಮ ಸಂಸದೀಯ ಪಟುವಾಗಿದ್ದರು. ಸಂಸದೀಯ ಪ್ರಜಾಪ್ರಭುತ್ವದ ಬೇರುಗಳು ಗಟ್ಟಿ ಮಾಡಲು ತಮ್ಮದೇ ಆದ ನೆರವು ನೀಡಿದ್ದರು. ಪ್ರಧಾನಮಂತ್ರಿಯಾಗಿ ಅವರು ಉತ್ತಮ ಆಡಳಿತವನ್ನು ಮುನ್ನೆಲೆಗೆ ತಂದಿದ್ದರು ಎಂದು ವಾಜಪೇಯಿ ಅವಧಿಯಲ್ಲಿ ಅವರ ಮಾಧ್ಯಮ ಸಲಹೆಗಾರರಾಗಿದ್ದ ಅಶೋಕ್ ಟಂಡನ್ ಹೇಳಿದ್ದಾರೆ.

ಸುಶಾಸನ ವಾಜಪೇಯಿ ಅವರು ನೀಡಿದ ಕೊಡುಗೆಯಾಗಿದೆ. ಅವರು ಭಿನ್ನ ಹಿನ್ನೆಲೆಯ ಪಕ್ಷಗಳನ್ನು ಮೈತ್ರಿಕೂಟದಲ್ಲಿ ಹೊಂದಿದ್ದರು. ಹಾಗೂ ಅವರನ್ನು ಜೊತೆಯಾಗಿ ಮುನ್ನಡೆಸಿದರು. ಪ್ರತಿಯೊಂದು ಕ್ಷೇತ್ರದಲ್ಲಿ ದೇಶಕ್ಕೆ ನೆರವಾಗುವ ನೀತಿಗಳನ್ನು ಅಳವಡಿಸಿಕೊಂಡಿದ್ದರು. ಇದಕ್ಕೆ ಸರ್ವ ಶಿಕ್ಷ ಅಭಿಯಾನ, ಪ್ರಧಾನಮಂತ್ರಿ ಗ್ರಾಮೀಣ ಸಡಕ್ ಯೋಜನೆ ಹಾಗೂ ಸ್ವರ್ಣ ಚತುಷ್ಕೋನ ಹೆದ್ದಾರಿ ಯೋಜನೆಗಳು ಉದಾಹರಣೆಗಳಾಗಿವೆ ಎಂದು ಟಂಡನ್ ಹೇಳಿದ್ದಾರೆ.

ಸುಧಾರಣೆ, ಬಂಡವಾಳ ಹಿಂತೆಗೆತ ಹಾಗೂ ಮೂಲಭೂತ ಸೌಲಭ್ಯಗಳ ಯೋಜನೆಗಳ ಕಾರಣದಿಂದಾಗಿ ಭಾರತ ಶೇ. 7 ರಿಂದ 8ರ ದರದ ಪ್ರಗತಿ ಕಾಣಲು ಸಾಧ್ಯವಾಯಿತು. ವಾಜಪೇಯಿ ಸರ್ಕಾರ 2003ರಲ್ಲಿ ವಿತ್ತೀಯ ಶಿಸ್ತಿನ ಎಫ್‌ಆರ್‌ಬಿಎಂ ಕಾಯ್ದೆ ಜಾರಿಗೆ ತಂದಿತ್ತು.

ಆದರೆ ಅವರ ಸುಧಾರಣೆಯ ಫಲ ದೊರೆಯುವುದು ಸ್ವಲ್ಪ ತಡವಾಯಿತು. ಮತ್ತು ಇದರ ಜೊತೆಗೆ ಬಿಜೆಪಿ ರಾಜಕೀಯವಾಗಿ ಇಟ್ಟ ತಪ್ಪು ಹೆಜ್ಜೆಗಳ ಕಾರಣದಿಂದಾಗಿ ಚುನಾವಣೆಯಲ್ಲಿ ಹಿನ್ನಡೆ ಕಾಣಬೇಕಾಯಿತು. ಉತ್ತರ ಪ್ರದೇಶದಲ್ಲಿ ಬಿಜೆಪಿ ಇಟ್ಟ ತಪ್ಪು ಹೆಜ್ಜೆ ಹಾಗೂ ಗ್ರಾಮೀಣ ಬಿಕ್ಕಟ್ಟನ್ನು ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಚಾರದಲ್ಲಿ ಸಶಕ್ತವಾಗಿ ಬಳಸಿಕೊಂಡ ಕಾರಣದಿಂದ 2004ರಲ್ಲಿ ವಾಜಪೇಯಿ ಸರ್ಕಾರ ಆಘಾತಕಾರಿ ಸೋಲು ಕಾಣಬೇಕಾಯಿತು.

ಈ ನಡುವೆ ಅವರ ಆರೋಗ್ಯದಲ್ಲೂ ಸಮಸ್ಯೆಗಳು ಕಾಣಿಸಿಕೊಂಡಿದ್ದವು. 2007ರಲ್ಲಿ ಅವರು ತಮ್ಮ ಪಕ್ಷದ ಪರವಾಗಿ ಉತ್ತರ ಪ್ರದೇಶ ವಿಧಾನಸಭೆಯಲ್ಲಿ ಕೊನೆಯ ಬಾರಿ ಪ್ರಚಾರಕ್ಕೆ ಕಾಣಿಸಿಕೊಂಡಿದ್ದರು. ಅನಾರೋಗ್ಯದಿಂದಾಗಿ ಅವರು ಸಾರ್ವಜನಿಕ ಜೀವನದಿಂದ ಹಿಂದೆ ಸರಿದಿದ್ದರು. 2018ರಲ್ಲಿ ಅವರು ಇಹಲೋಕ ಅಗಲಿದ್ದರು.

2015ರಲ್ಲಿ ಅವರಿಗೆ ಭಾರತರತ್ನ ಪ್ರಶಸ್ತಿ ನೀಡಿದ್ದ ಮೋದಿ ಸರ್ಕಾರ, ವಾಜಪೇಯಿ ಜನ್ಮದಿನವನ್ನು ಸುಶಾಸನಾ ದಿನವಾಗಿ ಆಚರಿಸಿಕೊಳ್ಳುತ್ತಾಬಂದಿದೆ.

ವಾಜಪೇಯಿ ಅವರು ಪೂರ್ಣಕಾಲಿಕ ಆರ್‌ಎಸ್‌ಎಸ್ ಸದಸ್ಯರಾಗಿದ್ದರು. 1951ರಲ್ಲಿ ಅವರನ್ನು ಜನಸಂಘಕ್ಕೆ ಕಳುಹಿಸಲಾಗಿತ್ತು. ಆಗಷ್ಟೇ ಸ್ಥಾಪನೆಗೊಂಡಿದ್ದ ಜನಸಂಘದಲ್ಲಿ ವಾಜಪೇಯಿ ಕೊನೆವರೆಗೂ ನಿಷ್ಠರಾಗಿ ಉಳಿದಿದ್ದರು. ಆದರೂ ಜನಸಂಘದ ಕೆಲ ಕ್ರಮಗಳು ತಮಗೆ ಇಷ್ಟವಾಗದಿದ್ದಾಗ ಅದನ್ನು ತಿಳಿಸಲು ಹಿಂಜರಿಯುತ್ತಿರಲಿಲ್ಲ.

ಬಿಜೆಪಿಯ ಇನ್ನೋರ್ವ ಹಿರಿಯ ನಾಯಕ ಎಲ್.ಕೆ. ಅದ್ವಾನಿ ಅವರು ವಾಜಪೇಯಿಗೆ ರಾಜಕೀಯ ಜೀವನವಿಡೀ ಜೊತೆಯಾಗಿದ್ದರು. ಆದರೆ ಅದ್ವಾನಿ ಕಠಿಣ ಸೈದ್ಧಾಂತಿಕ ನಿಲುವು ಹೊಂದಿದ್ದರೆ, ವಾಜಪೇಯಿ ಮೃದು ಧೋರಣೆ ಹೊಂದಿದ್ದರು. ಅವರ ಈ ಮೃದು ಧೋರಣೆಯೇ ಮೈತ್ರಿ ಸರ್ಕಾರ ಮುನ್ನಡೆಸುವಲ್ಲಿ ನೆರವಾಯಿತು.

1992ರಲ್ಲಿ ಬಾಬ್ರಿ ಮಸೀದಿ ಧ್ವಂಸಗೊಂಡ ಸಂದರ್ಭದಲ್ಲಿ ವಾಜಪೇಯಿ ಅವರು ಪಕ್ಷಕ್ಕಿಂತ ಭಿನ್ನ ನಿಲುವು ತಳೆದಿದ್ದರು. ಅವರ ಈ ನಿಲುವು ಹಾಗೂ ಮುತ್ಸದ್ಧಿತನ ಮುಂದೆ ಬಿಜೆಪಿಗೆ ಸಾಕಷ್ಟು ನೆರವಾಯಿತು.

ಬಿಜೆಪಿಯ ಸೈದ್ಧಾಂತಿಕ ವಿಷಯಗಳಾದ ರಾಮಮಂದಿರ ನಿರ್ಮಾಣ, 370 ವಿಧಿ ರದ್ಧತಿ ಹಾಗೂ ಏಕರೂಪದ ನಾಗರಿಕ ಸಂಹಿತೆಗಳ ವಿಷಯಗಳನ್ನು ಮೈತ್ರಿ ಅಜೆಂಡಾದಿಂದ ಬದಿಗಿರಿಸುವಲ್ಲಿ ವಾಜಪೇಯಿ ಯಶಸ್ವಿಯಾಗಿದ್ದರು. ಇದರಿಂದಾಗಿ ದೇಶಾದ್ಯಂತದ ಪ್ರಾಂತೀಯ ಪಕ್ಷಗಳು ಬಿಜೆಪಿ ಜೊತೆ ಕೈಜೋಡಿಸಲು ಸಾಧ್ಯವಾಯಿತು.

ಪಾಕಿಸ್ತಾನದ ಜೊತೆ ಸಂಬಂಧ ಸುಧಾರಿಸಲು ಅವರು 1999ರ ಫೆಬ್ರವರಿಯಲ್ಲಿ ಲಾಹೋರ್ ಪ್ರವಾಸ ಕೈಗೊಂಡಿದ್ದರು. 2001ರಲ್ಲಿ ಪಾಕಿಸ್ತಾನದ ಆಗಿನ ಅಧ್ಯಕ್ಷ ಪರ್ವೇಜ್ ಮುಷರಫ್ ಜೊತೆ ಆಗ್ರಾ ಶೃಂಗ ಸಭೆ ಸಹ ನಡೆಸಿದ್ದರು. ಆದರೆ ವಾಜಪೇಯಿ ಪ್ರಯತ್ನಗಳು ಫಲ ನೀಡಲಿಲ್ಲ. ಆದರೂ ಇನ್ಸಾನಿಯತ್, ಜಮೂರಿಯತ್, ಕಾಶ್ಮೀರಿಯತ್ ಎಂಬ ಘೋಷಣೆಗಳೊಂದಿಗೆ ಜಮ್ಮು ಮತ್ತು ಕಾಶ್ಮೀರದ ಸಮಸ್ಯೆಗಳನ್ನು ಬಗೆಹರಿಸಲು ಅವರು ಪ್ರಯತ್ನ ನಡೆಸಿದ್ದು ಮೆಚ್ಚುಗೆ ಪಡೆದಿತ್ತು. ಇದು ಕಾಶ್ಮೀರದ ಸಮಸ್ಯೆಗಳನ್ನು ಬಗೆಹರಿಸಲು ನೆರವಾಗಿತ್ತು. ಮುಸ್ಲಿಮರೇ ಬಹುಸಂಖ್ಯಾತರಾಗಿರುವ ಕಾಶ್ಮೀರ ಕಣಿವೆಯಲ್ಲೂ ವಾಜಪೇಯಿ ತಮ್ಮ ಅಭಿಮಾನಿಗಳನ್ನು ಪಡೆದಿದ್ದರು. 2018ರ ಸ್ವಾತಂತ್ರ ಭಾಷಣದ ವೇಳೆಯೂ ಪ್ರಧಾನಿ ನರೇಂದ್ರ ಮೋದಿ ಅವರು ವಾಜಪೇಯಿ ಅವರ ಘೋಷಣೆಗಳನ್ನು ಸ್ಮರಿಸಿದ್ದರು.

ವಾಜಪೇಯಿ ಅತ್ಯುತ್ತಮ ಭಾಷಣಕಾರರೂ ಆಗಿದ್ದರು. ತಮಿಳುನಾಡಿನ ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಸಿ.ಎನ್. ಅಣ್ಣಾದೊರೈ ಅವರಿಗೆ ಹಿಂದಿ ಹೆಚ್ಚು ತಿಳಿದಿರಲಿಲ್ಲ. ಆದರೂ ಅವರು ವಾಜಪೇಯಿ ಭಾಷಣ ಕೇಳಲೆಂದು ಲೋಕಸಭೆಗೆ ಧಾವಿಸಿ ಬರುತ್ತಿದ್ದರು ಎಂದು ಟಂಡನ್ ಸ್ಮರಿಸಿದ್ದಾರೆ.


ಆಜೀವ ಅವಿವಾಹಿತರಾಗಿದ್ದ ವಾಜಪೇಯಿ, 1957ರಲ್ಲಿ ಉತ್ತರ ಪ್ರದೇಶದ ಬಲರಾಮಪುರದಿಂದ ಲೋಕಸಭೆಗೆ ಮೊದಲ ಬಾರಿ ಆಯ್ಕೆಯಾಗಿದ್ದರು. ಸಂಸತ್ತಿನಲ್ಲಿ ಅವರ ಮೊದಲ ಭಾಷಣ ಆಗಿನ ಪ್ರಧಾನಮಂತ್ರಿ ಜವಾಹರ ಲಾಲ್ ನೆಹರು ಸೇರಿದಂತೆ ಹಲವು ಹಿರಿಯರು ಹಾಗೂ ಸಹೋದ್ಯೋಗಿಗಳ ಮೆಚ್ಚುಗೆಗೆ ಪಾತ್ರವಾಗಿತ್ತು. ವಾಜಪೇಯಿ ಅವರನ್ನು ವಿದೇಶಿ ನಿಯೋಗವೊಂದಕ್ಕೆ ಪರಿಚಯಿಸಿದ ನೆಹರು, ಈ ಹುಡುಗ ಮುಂದೊಮ್ಮೆ ದೇಶದ ಪ್ರಧಾನಮಂತ್ರಿಯಾಗಲಿದ್ದಾರೆ ಎಂದು ಹೇಳಿದ್ದರು.

1977ರಲ್ಲಿ ಜನತಾ ಪಾರ್ಟಿ ಸರ್ಕಾರ ಅಧಿಕಾರಕ್ಕೆ ಬಂದಾಗ ವಾಜಪೇಯಿ ವಿದೇಶಾಂಗ ಸಚಿವರಾಗಿದ್ದರು. ಆಗ ನೆಹರು ಚಿತ್ರವನ್ನು ದಕ್ಷಿಣ ಬ್ಲಾಕ್‌ನಿಂದ ತೆಗೆದಿದ್ದಕ್ಕೆ ವಾಜಪೇಯಿ ಆಕ್ಷೇಪಿಸಿದ್ದರು ಹಾಗೂ ಮತ್ತೆ ನೆಹರು ಚಿತ್ರ ಅಳವಡಿಸುವಂತೆ ಮಾಡಿದ್ದರು. ಇದು ಪಕ್ಷ ಮೀರಿ ಚಿಂತಿಸುವ ಅವರ ಗುಣಕ್ಕೆ ಸಾಕ್ಷಿಯಾಗಿತ್ತು. ಸಾರ್ವಜನಿಕ ಜೀವನದಲ್ಲಿ ದೊಡ್ಡ ಮನಸ್ಸು ಹಾಗೂ ವಿಶಾಲ ಹೃದಯ ಇರಬೇಕು ಎಂಬುದು ವಾಜಪೇಯಿ ನಿಲುವಾಗಿತ್ತು. ಅವರು ತಾವು ಬರೆದ ಕವಿತೆಯ ಸಾಲಾದ 'ಛೋಟೆ ಮನ್ ಸೆ ಕೋಯಿ ಬಡಾ ನಹೀ ಹೋತಾ, ಟೂಟೆ ಮನ್‌ಸೆ ಕೋಯಿ ಕಡಾ ನಹೀ ಹೋತಾ' ಎಂಬಂತೆ ಬದುಕಿದ್ದರು.

ಸರ್ವಸಮ್ಮತಿ ಹಾಗೂ ಮಾತುಕತೆಯಲ್ಲಿ ನಂಬಿಕೆ ಇರಿಸಿದ್ದ ವಾಜಪೇಯಿ ಅವರು, ಸಂಸದರು ಸದನದ ಬಾವಿಗೆ ನುಗ್ಗಿ ಕಲಾಪಕ್ಕೆ ಅಡ್ಡಿಪಡಿಸುವ ರೀತಿಯ ಅಸಂಸದೀಯ ಚಟುವಟಿಕೆಗಳಿಗೆ ತೊಡಗಬಾರದು ಎಂದಿದ್ದರು.

ಆದರೆ ಇಂದು ಸಂಸದರು ವಾಜಪೇಯಿ ಅವರನ್ನು ನೆನಪಿಸಿಕೊಳ್ಳುತ್ತಾರೆಯೇ ಹೊರತು ಅವರ ಮಾರ್ಗದಲ್ಲಿ ನಡೆಯುತ್ತಿಲ್ಲ ಎಂದು ಟಂಡನ್ ಹೇಳುತ್ತಾರೆ.

# ಜ.4 ರಂದು ರಾಜ್ಯ ಮಟ್ಟದ ಯುವಜನೋತ್ಸವ



ದಾವಣಗೆರೆ, ಡಿ. 24 - ಯುವ ಜನಸೇವಾ ಹಾಗೂ ಕ್ರೀಡಾ ಇಲಾಖೆಯಿಂದ ನಡೆಸುವ ರಾಜ್ಯ ಮಟ್ಟದ ಯುವಜನೋತ್ಸವ ಕಾರ್ಯಕ್ರಮವನ್ನು ಬರುವ ಜನವರಿ 4 ಮತ್ತು 5 ರಿಂದ ನಗರದಲ್ಲಿ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಿಳಿಸಿದರು.

ಜಿಲ್ಲಾಡಳಿತ ಭವನದ ತುಂಗಭದ್ರಾ ಸಭಾಂಗಣದಲ್ಲಿ ಯುವಜನೋತ್ಸವ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ನಿನ್ನೆ ಏರ್ಪಾಡಾಗಿದ್ದ ಸಿದ್ದತಾ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಜ್ಯ ಮಟ್ಟದ ಕಾರ್ಯಕ್ರಮ ಇದಾಗಿದ್ದು ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಯುವ ಸ್ಪರ್ಧಾಳುಗಳು ಭಾಗವಹಿಸುವರು. ಈ ಸ್ಪರ್ಧೆಯಲ್ಲಿ ಜಾನಪದ ನೃತ್ಯ, ಜಾನಪದ ಗೀತೆ, ವಿಜ್ಞಾನ ವಸ್ತು ಪ್ರದರ್ಶನ, ಕವನ ರಚನೆ, ಪ್ರಬಂಧ, ಕಥೆ ಬರೆಯುವುದು, ಚಿತ್ರಕಲೆ, ಘೋಷಣಾ ಸ್ಪರ್ಧೆಗಳು ನಡೆಯಲಿವೆ.

ನಗರದ ಬಿಐಇಟಿ ಕಾಲೇಜಿನ ಎಸ್.ಎಸ್.ಎಂ ಸಾಂಸ್ಕೃತಿಕ ಭವನ, ಬಾಪೂಜಿ ಎಂ.ಬಿ.ಎ. ಕಾಲೇಜು ಸಭಾಂಗಣ, ಎಂಬಿಎ ಮೈದಾನದ ಎಸ್.ಎಸ್.ನ್ಯಾಷನಲ್ ಪಬ್ಲಿಕ್ ಸ್ಕೂಲ್, ಎಂ.ಬಿ.ಎ ಕಾಲೇಜಿನ ಕೊಠಡಿ, ಲಲಿತ ಕಲಾ ಮಹಾವಿದ್ಯಾಲಯ ಸೇರಿದಂತೆ ಎಂಬಿಎ ಮೈದಾನದಲ್ಲಿ ಕಾರ್ಯಕ್ರಮಗಳು ನಡೆಯಲಿವೆ.

**ಸಮಿತಿಗಳ ರಚನೆ :** ರಾಜ್ಯ ಮಟ್ಟದ ಯುವ ಜನೋತ್ಸವವನ್ನು ಅದ್ದೂರಿಯಾಗಿ ನಡೆಸಲು ಸಿದ್ದತೆಗಾಗಿ ವೇದಿಕೆ, ಸಾಂಸ್ಕೃತಿಕ, ಸಾರಿಗೆ, ಪ್ರಚಾರ, ವಸತಿ, ಸ್ವಾಗತ, ನೋಂದಣಿ ಸೇರಿದಂತೆ ಎಲ್ಲಾ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಡೆಸಲು ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಎಲ್ಲಾ ಸಮಿತಿಗಳು ಸಿದ್ದತೆ ನಡೆಸಿದ್ದು ಆದಷ್ಟು ಬೇಗ ಕಾರ್ಯಕ್ರಮದ ಲಾಂಛನವನ್ನು ಬಿಡುಗಡೆ ಮಾಡಲಾಗುತ್ತದೆ ಎಂದರು.

ರಾಜ್ಯ ಮಟ್ಟದ ಕಾರ್ಯಕ್ರಮ ಇದಾಗಿರುವುದರಿಂದ ಶಿಷ್ಟಾಚಾರದನ್ವಯ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ.

ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ನಾಗರಿಕರು ಕಾರ್ಯಕ್ರಮ ವೀಕ್ಷಣೆಗಾಗಿ ನಗರ ಸಾರಿಗೆಯಿಂದ ಬಸ್ ವ್ಯವಸ್ಥೆ ಕೈಗೊಳ್ಳಲಾಗುತ್ತದೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಅಪರ ಜಿಲ್ಲಾಧಿಕಾರಿ ಪಿ.ಎನ್. ಲೋಕೇಶ್, ಪಾಲಿಕೆ ಆಯುಕ್ತ ರೇಣುಕಾ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

# ಸಾರಿಗೆ ನಿಗಮದಲ್ಲಿ 9 ಸಾವಿರ ಖಾಲಿ ಹುದ್ದೆ ಭರ್ತಿಗೆ ಸರ್ಕಾರದ ಅನುಮತಿ

ಬೆಂಗಳೂರು, ಡಿ.24- ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಖಾಲಿ ಇರುವ 9,000 ವಿವಿಧ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಇಂದಿಲ್ಲಿ ತಿಳಿಸಿದ್ದಾರೆ.

ಪ್ರಯಾಣಿಕರಿಗೆ ಉತ್ತಮ ಸಾರಿಗೆ ಸೌಲಭ್ಯ ಕಲ್ಪಿಸುವ ಉದ್ದೇಶದಿಂದ ನಾಲ್ಕು ನಿಗಮಗಳಲ್ಲೂ ಪಾರದರ್ಶಕವಾಗಿ ಪ್ರತ್ಯೇಕ ನೇರ ನೇಮಕಾತಿ ನಡೆಯಲಿದೆ.

ನಗರದಲ್ಲಿ ಸಾರಿಗೆ ನಿಗಮದ 20 ಹೊಸ ಅಂಬಾರಿ ಉತ್ಸವ್ ಸ್ಲೀಪರ್ ಬಸ್‌ಗಳ ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಹೊಸ ಹುದ್ದೆಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿರುವುದಲ್ಲದೆ, ನಿಗಮದ ಮಾರ್ಗಸೂಚಿಯಂತೆ ನೇಮಕಾತಿ ಪ್ರಕ್ರಿಯೆ ನಡೆಯಲಿದೆ.



ಈಗಾಗಲೇ ಕೆಲವೆಡೆ ಚಾಲಕರು ಮತ್ತು ನಿರ್ವಾಹಕರನ್ನು ಮೊದಲ ಹಂತದಲ್ಲಿ ಭರ್ತಿ ಮಾಡುವ ಕೆಲಸ ಆರಂಭಗೊಂಡಿದೆ.

ನಿಗಮಕ್ಕೆ 3,000ಕ್ಕೂ ಹೆಚ್ಚು ವಿವಿಧ ಮಾದರಿ ಬಸ್‌ಗಳು ಸೇರ್ಪಡೆಯಾಗಲಿದ್ದು, ಅದಕ್ಕೆ ತಕ್ಕಂತೆ ನೌಕರರ ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಿದ್ದೇವೆ ಎಂದರು.

ಕಳೆದ ಕೆಲವು ದಿನಗಳ ಹಿಂದೆ ನಿಗಮಕ್ಕೆ 20 ವೋಲ್ವೊ ಬಸ್‌ಗಳು ಸೇರ್ಪಡೆಗೊಂಡವು, ಇದೀಗ ಅದೇ ಪ್ರಮಾಣದಲ್ಲಿ ಅಂಬಾರಿ ಉತ್ಸವ್ ಸ್ಲೀಪರ್ ಬಸ್‌ಗಳೂ ಸೇರ್ಪಡೆಗೊಳ್ಳುತ್ತಿವೆ.

ಅಂಬಾರಿ ಉತ್ಸವ್ ಸ್ಲೀಪರ್ ಬಸ್ 40 ಬರ್ತ್‌ಗಳನ್ನು ಒಳಗೊಂಡಿರುತ್ತದೆ, ಇದು ವಾಯುಗತಿ ಶಾಸ್ತ್ರ ವಿನ್ಯಾಸ ಹಾಗೂ ಉತ್ತಮ ಇಂಧನ ದಕ್ಷತೆ ಹೊಂದಿರುತ್ತವೆ. ವಿದ್ಯುತ್ ಚಾಲಿತ 750 ಬಸ್‌ಗಳ ಖರೀದಿಗೆ ಸಂಪುಟ ಒಪ್ಪಿಗೆ ನೀಡಿದ್ದು, ಅವೂ ಸೇರಲಿವೆ.

ಪರಿಸರ ಸಂರಕ್ಷಣೆ ದೃಷ್ಟಿಯಿಂದ ಬಸ್‌ಗಳನ್ನು ನಗರ ಪ್ರದೇಶಗಳಲ್ಲಿ ಸಂಚಾರಕ್ಕೆ ಅನುವು ಮಾಡಿಕೊಡಲಾಗುವುದು.

ಹೊಸದಾಗಿ ಬರುತ್ತಿರುವ ಬಸ್‌ಗಳನ್ನು ಮೈಸೂರು, ದಾವಣಗೆರೆ, ಶಿವಮೊಗ್ಗ ಅಲ್ಲದೆ, ಜಿಲ್ಲಾ ಕೇಂದ್ರಗಳ ನಡುವೆಯೂ ಸಂಚಾರಕ್ಕೆ ಬಿಡಲಾಗುವುದು ಎಂದರು.

# ಅಣು ವಿದ್ಯುತ್ ಘಟಕದಲ್ಲಿ 5 ಶತಕೋಟಿ ಡಾಲರ್ ಲಂಚ

### ಬಾಂಗ್ಲಾದಿಂದ ಪದಚ್ಯುತ ಪ್ರಧಾನಿ ಹಸೀನಾ ವಿರುದ್ಧ ತನಿಖೆ

ಢಾಕಾ, ಡಿ. 24- ರೂಪುರ್ ಅಣು ವಿದ್ಯುತ್ ಘಟಕದಲ್ಲಿ 5 ಶತಕೋಟಿ ಡಾಲರ್‌ಗಳ ಕಬಳಿಕೆ ನಡೆದಿದೆ ಎಂಬ ಆರೋಪಗಳ ಹಿನ್ನೆಲೆಯಲ್ಲಿ ಬಾಂಗ್ಲಾ ದೇಶದ ಪದಚ್ಯುತ ಪ್ರಧಾನಿ ಶೇಖ್ ಹಸೀನಾ ಹಾಗೂ ಅವರ ಕುಟುಂಬದವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ದಳ ವಿಚಾರಣೆ ಆರಂಭಿಸಿದೆ.

ರಷ್ಯಾದ ಸರ್ಕಾರಿ ಸ್ವಾಮ್ಯದ ಉದ್ಯಮ ವಾದ ರೊಸಾಟಂ, ರೂಪುರ್‌ನಲ್ಲಿ ವಿದ್ಯುತ್ ಘಟಕ ನಿರ್ಮಾಣದಲ್ಲಿ ಭಾಗಿಯಾಗಿತ್ತು. ಈ ಯೋಜನೆಯಲ್ಲಿ ಭಾರತೀಯ ಕಂಪನಿಗಳೂ ಭಾಗಿಯಾಗಿವೆ. ಬಾಂಗ್ಲಾದ ರಾಜಧಾನಿ ಢಾಕಾದಿಂದ 160 ಕಿ.ಮೀ. ದೂರದಲ್ಲಿರುವ ರೂಪರ್‌ನಲ್ಲಿ ರಷ್ಯಾ ವಿನ್ಯಾಸಗೊಳಿಸಿರುವ ಅಣು ಘಟಕವನ್ನು ಸ್ಥಾಪಿಸಲಾಗುತ್ತಿದೆ. ಇದು ಬಾಂಗ್ಲಾದ ಪ್ರಥಮ ಅಣು ವಿದ್ಯುತ್ ಘಟಕವಾಗಿದೆ. ಈ ಯೋಜನೆಯಲ್ಲಿ ಭ್ರಷ್ಟಾಚಾರ ನಡೆದಿದೆ ಎಂಬ ಆರೋಪವನ್ನು ರೊಸಾಟಂ ಕಂಪನಿ ತಳ್ಳಿ ಹಾಕಿದೆ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹಸೀನಾ ಅವರಲ್ಲದೇ ಅವರ ಪುತ್ರ ಸಜೀಬ್ ವಜೀದ್ ಜೋಯಿ ಹಾಗೂ ತುಲಿಪ್ ಸಿದ್ದಿಕ್ ಅವರನ್ನು ಪ್ರಶ್ನಿಸಲಾಗಿದೆ ಎಂದು ಬಿ.ಟಿ. ನ್ಯೂಸ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಈ ಪ್ರಕರಣದಲ್ಲಿ ಭ್ರಷ್ಟಾಚಾರ ನಿಗ್ರಹ ದಳ ಏಕೆ ಸುಮ್ಮನಿದೆ? ಎಂದು ಹೈಕೋರ್ಟ್ ಎರಡು ದಿನಗಳ ಹಿಂದೆ ಪ್ರಶ್ನಿಸಿತ್ತು. ಹಸೀನಾ, ಜೋಯಿ ಹಾಗೂ ಟುಲಿಪ್ ಅವರು ಅಣು ಘಟಕದ 5 ಶತಕೋಟಿ ಡಾಲರ್‌ಗಳನ್ನು ಮಲೇಷಿಯಾದ ಬ್ಯಾಂಕಿಗೆ ವರ್ಗಾಯಿಸಿದ್ದಾರೆ ಎಂದು ಆರೋಪಿಸಲಾಗಿತ್ತು.

# 29 ರಿಂದ ಶ್ರೀಮದ್ ಭಾಗವತ ಪುರಾಣ ಪ್ರವಚನ

ದಾವಣಗೆರೆ, ಡಿ.24- ನಗರದ ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 3ನೇ ಮುಖ್ಯರಸ್ತೆ, 6ನೇ ತಿರುವಿನಲ್ಲಿರುವ ಆದರ್ಶ ಯೋಗ ಪ್ರತಿಷ್ಠಾನ- ಶ್ರೀ ಮಹಮ್ಮಾಯಿ ವಿಶ್ವಯೋಗ ಮಂದಿರ ಹಾಗೂ ಯೋಗ ಚಿಕಿತ್ಸಾ ಕೇಂದ್ರದಲ್ಲಿ ಇದೇ ದಿನಾಂಕ 29 ರ ಭಾನುವಾರದಿಂದ ಬರುವ ಜನವರಿ 5 ರವರೆಗೆ ಪೂಜ್ಯ ಶ್ರೀ ಕುದುಕುಂಜಿ ಮಹಾಬಲರಾವ್ ಪುಣ್ಯಸ್ಮರಣೆ ನಿಮಿತ್ತ 'ಶ್ರೀಮದ್ ಭಾಗವತ ಪುರಾಣ ಪ್ರವಚನ ಸಪ್ತಾಹ'ವನ್ನು ಹಮ್ಮಿಕೊಳ್ಳಲಾಗಿದೆ.

ಭಾಗವತ ಪುರಾಣ ಪ್ರವಚನವು ಪ್ರತಿದಿನ ಸಂಜೆ 6-30 ರಿಂದ 8-00 ಗಂಟೆಯ ವರೆಗೆ ನಡೆಯಲಿದ್ದು, ನಾಡಿನ ಹಿರಿಯ ಪ್ರವಚನಕಾರರೂ, ಆಧ್ಯಾತ್ಮಿಕ ಚಿಂತಕರೂ ಆದ ಶ್ರೀ ಗೋಪಾಲಾಚಾರ್ ಮಣ್ಣೂರ್ ಇವರು ಉಪನ್ಯಾಸ ನೀಡುವರು.

ಆಸಕ್ತರು ಭಾಗವಹಿಸಿ ಅಪರೂಪವಾಗಿ ನಡೆಯುವ ಈ ಪ್ರವಚನ ಸಪ್ತಾಹ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕೆಂದು ಪ್ರತಿಷ್ಠಾನದ ಮುಖ್ಯಸ್ಥರಾದ ಯೋಗ ಗುರು ರಾಘವೇಂದ್ರ ಗುರೂಜಿ ತಿಳಿಸಿದ್ದಾರೆ. ವಿವರಕ್ಕೆ 94484-22829 ಸಂಪರ್ಕಿಸಬಹುದು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ:**
**ದಾವಣಗೆರೆ ವಿಭಾಗ: ದಾವಣಗೆರೆ.**

ಸಂಖ್ಯೆ: ಕರಾಸಾ/ದಾವಿ/ಸಂಚಾರ/ವಾಣಿಜ್ಯ/2760/2024–25 ದಿನಾಂಕ: 23.12.2024

**ಇ–ಟೆಂಡರ್ ಪ್ರಕಟಣೆ ಸಂಖ್ಯೆ: 11/2024–25**

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ **ಸ್ಮಾರ್ಟ್ ಸಿಟಿ ಅಡಿಯಲ್ಲಿ ನೂತನವಾಗಿ ನಿರ್ಮಾಣವಾಗಿರುವ ದಾವಣಗೆರೆ ಬಸ್ ನಿಲ್ದಾಣದ** ಔಷಧಿ ಮಳಿಗೆ ಸಂಖ್ಯೆ–15, ಬಟ್ಟೆ (Cloth Center) ಮಳಿಗೆ ಸಂಖ್ಯೆ–16, ದ್ವಿ ಮತ್ತು ನಾಲ್ಕು ಚಕ್ರದ ವಾಹನ ನಿಲುಗಡೆ ಸಂಖ್ಯೆ–20 ಹಾಗೂ **ಬೇತೂರು ರಸ್ತೆಯಲ್ಲಿರುವ ಬಸ್ ನಿಲ್ದಾಣದ** ಉಪಹಾರ ಗೃಹ ಮಳಿಗೆ ಸಂಖ್ಯೆ–7 ಮತ್ತು ದ್ವಿ–ಚಕ್ರ ವಾಹನ ಮಳಿಗೆ ಸಂಖ್ಯೆ–11 ಇವುಗಳಿಗೆ ಪರವಾನಗಿದಾರರನ್ನು ಆಯ್ಕೆ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿ: **23.12.2024** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹಾಗೂ ಹೆಚ್ಚಿನ ವಿವರಗಳಿಗಾಗಿ ವಿಭಾಗೀಯ ಕಛೇರಿ, ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗ–577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ. ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗೀಯ ಸಂಚಾರ ಅಧಿಕಾರಿ –7760990452, ಸಹಾಯಕ ಸಂಚಾರ ಅಧೀಕ್ಷಕರು–7022030183.**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ

ವಾಸಾಸಂಇ/ವಾ.ಪ್ರ/3969/ಎಂಎಎ/24–25



**ಸಾರ್ವಜನಿಕ ಪ್ರಕಟಣೆಗೆ ಮರು ಉತ್ತರ**

**ದಿನಾಂಕ : 17.12.2024ರ ಮಂಗಳವಾರದಂದು ಜನತಾವಾಣಿ ದಿನಪತ್ರಿಕೆಯ 3ನೇ ಪುಟದಲ್ಲಿ ಶ್ರೀ ಅಜಯ್ ಸಿ. ಮೇಲ್ಮನವಿದಾರರ ಪರ ವಕೀಲರು ಕೊಟ್ಟಂತಹ ಸಾರ್ವಜನಿಕ ಪ್ರಕಟಣೆಗೆ ಈ ಕೆಳಕಂಡ ಅನುಸೂಚಿತ ಸ್ವತ್ತಿನ ಮಾಲಿಕರಾದ ನಾವುಗಳು ಪ್ರತಿ ಉತ್ತರವನ್ನು ಕೊಡುತ್ತಿದ್ದೇವೆ.**

ಈ ಮೂಲಕ ದಾವಣಗೆರೆ ಮಹಾಗನರದ ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ, **ಕಾಕಬಾಳ ವಾಸಿ ಗಂಗವ್ವ ಕೋಂ ಸಾಸ್ವಿಹಳ್ಳಿ ತಿಮ್ಮಣ್ಣ ಬಿನ್ ನರಸಿಂಹಣ್ಣ ಇವರ ವಂಶಸ್ಥರಾದ** ಹಾಗೂ ಹಾಲಿ ಕುಂದುವಾಡ ಗ್ರಾಮದಲ್ಲಿ ವಾಸ ಮಾಡುತ್ತಿರುವ ಲೋಕೇಶ್, ಕುಮಾರಿ ಶಿಲ್ಪ, ಹನುಮಂತಪ್ಪ ಮತ್ತು ಚಂದ್ರಪ್ಪ ಇವರುಗಳು ಶಾರದಮ್ಮ, ಹನುಮಂತಪ್ಪ, ರಾಮಪ್ಪ, ಶಾರದಮ್ಮ, ನಿಂಗಪ್ಪ, ರಾಮಚಂದ್ರ ಶಾನಭೋಗ, ಕೆ.ಎಂ. ನಿಂಗಪ್ಪ, ತಿಮ್ಮರಾಜು, ಕೃಷ್ಣಪ್ಪ, ಬಸಪ್ಪ, ಹನುಮಂತಪ್ಪ, ಸಿದ್ಧಪ್ಪ, ಚನ್ನಪ್ಪ, ನಾಗಪ್ಪ ಹನುಮಂತಪ್ಪ, ನರಸಿಂಹಪ್ಪ, ಐ. ರಾಜಶೇಖರಪ್ಪ, ಐ. ಬಸವರಾಜಪ್ಪ, ಐ. ರುದ್ರಪ್ಪ ಮತ್ತು ಐ. ಪ್ರಭಾಕರ (ಪೌತಿ) ಇವರ ಪತ್ನಿ ಬಸಮ್ಮ ಈ ರೀತಿಯಾಗಿರುವ ನಮ್ಮಗಳ ಮೇಲೆ ಈ ಕೆಳಗೆ ತಿಳಿಸಲಾದ ಅನುಸೂಚಿತ ಸ್ವತ್ತಿನ ಮೇಲೆ ಒಂದು ಅಸಲು ದಾವೆ ಸಂಖ್ಯೆ . 98/2012ನ್ನು ಸಲ್ಲಿಸಿದ್ದು ಸದರಿ ದಾವೆಯನ್ನು ಘನ ನ್ಯಾಯಾಲಯವು ವಜಾ ಮಾಡಿ ನಮ್ಮ ಪರವಾಗಿ ತೀರ್ಪು ನೀಡಿರುತ್ತದೆ. ಹಾಗೂ ಮತ್ತೊಂದು ಅಸಲು ದಾವೆ ಸಂಖ್ಯೆ 144/2011 ಈ ದಾವೆಯಲ್ಲಿಯೂ ಸಹ ಘನ ನ್ಯಾಯಾಲಯವು ಸದರಿ ದಾವೆಯು ಸದರಿ ನ್ಯಾಯಾಲಯದ ವ್ಯಾಪ್ತಿಯಲ್ಲಿ ಬಾರದೇ ಇರುವುದರಿಂದ ಸದರಿ ದಾವೆಯನ್ನು ವಾಪಸ್ಸು ಪಡೆಯಲು ಆದೇಶ ಮಾಡಿರುತ್ತದೆ. ಮತ್ತು ಸದರಿ ದಾವೆಯನ್ನು ಮೇಲ್ಕಂಡ ಅಸಲು ದಾವೆ ಸಂಖ್ಯೆ 98/2012ರ ಜೊತೆಗೆ ಒಗ್ಗೂಡಿಸಿ ಒಟ್ಟಾಗಿ ತೀರ್ಪನ್ನು ನೀಡಿರುತ್ತಾರೆ. ಅದೇ ರೀತಿಯಲ್ಲಿ ಸಿವಿಲ್ ಮಿಸ್ಲೇನಿಯಸ್ ಸಂಖ್ಯೆ 09/2012ರ ಪ್ರಕರಣವನ್ನು ಸಹ ಸಲ್ಲಿಸಿದ್ದು, ಸದರಿ ಪ್ರಕರಣವು ವಜಾ ಆಗಿರುತ್ತದೆ. ಈ ಮೇಲ್ಕಂಡ ಎಲ್ಲಾ ದಾವೆಗಳ ಸೋಲನ್ನು ಕಂಡ ನಂತರ ಮೇಲ್ಕಾಣಿಸಿದ ವಾದಿಗಳು ಹಾಲಿ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಗಳಲ್ಲಿ ರೆಗ್ಯುಲರ್ ಅಪೀಲು ಸಂಖ್ಯೆ 80/2018ರ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ದಾವೆಯು ಹಾಲಿ ನಡೆಯುತ್ತಿದ್ದು, ಸದರಿ ಅಪೀಲಿನಲ್ಲಾಗಲಿ ಅಥವಾ ಈ ಹಿಂದೆ ಸಲ್ಲಿಸಿದ ಅಸಲು ದಾವೆಗಳಲ್ಲಾಗಲಿ ಯಾವ ಘನ ನ್ಯಾಯಾಲಯಗಳು ತಾತ್ಕಾಲಿಕ ತಡೆಯಾಜ್ಞೆಗಳನ್ನು ಕೊಟ್ಟಿರುವುದಿಲ್ಲ. ಮುಖ್ಯವಾಗಿ ಸಮಸ್ತ ನಾಗರಿಕರಿಗೆ ತಿಳಿಯಪಡಿಸುವುದೇನೆಂದರೆ ಈ ಹಿಂದೆ ವಾದಿಗಳ ತಂದೆಯವರು ಮತ್ತು ತಾತಂದಿರು ಸಹ ಸೇರಿಕೊಂಡು ಘನ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ಅನುಸೂಚಿತ ಸ್ವತ್ತಿನ ಬಗ್ಗೆ ಒಂದು ಮೇಲ್ಮನವಿ ಸಂಖ್ಯೆ 1316/2005ನ್ನು ಸಹ ಸಲ್ಲಿಸಿದ್ದು ಈ ಮೇಲ್ಮನವಿಯಲ್ಲಿ ಘನ ಉಚ್ಚ ನ್ಯಾಯಾಲಯವು ಅಪೀಲುದಾರರಾದ ನಿಮ್ಮಗಳಿಗೆ ಈ ಕೆಳ ಕಾಣಿಸಿದ ಅನುಸೂಚಿತ ಸ್ವತ್ತಿನಲ್ಲಿ ಕೇವಲ 12 ಗುಂಟೆ ಮಾತ್ರ (1947ನೇ ವರ್ಷದಲ್ಲಿ ನೊಂದಾಯಿತ ದಾನ ಪತ್ರದ ಮೂಲಕ) ಹಕ್ಕುದಾರಿಕೆ ಪಡೆದಿದ್ದು ಉಳಿದ ಜಮೀನಿನ ಸ್ವತ್ತಿನಲ್ಲಿ ಯಾವುದೇ ರೀತಿಯ ಹಕ್ಕು ಬಾಧ್ಯತೆಗಳು ಇರುವುದಿಲ್ಲವೆಂದು ತೀರ್ಪು ನೀಡಿರುತ್ತಾರೆ. ಇದಲ್ಲದೇ ಮೇಲ್ಕಾಣಿಸಿದ ಸದರಿಯವರ ತಂದೆಯವರು ಮತ್ತು ತಾತಂದಿರು ಈ ಹಿಂದೆ ಸದರಿ ಅನುಸೂಚಿತ ಸ್ವತ್ತಿಗೆ ಸಂಬಂಧಿಸದಂತೆ ಯಾವುದೇ ನ್ಯಾಯಾಲಯದ ದಾವೆಗಳಲ್ಲಿ ಗೆದ್ದಿರುವುದಿಲ್ಲ ಮತ್ತು ಎಲ್ಲಾ ದಾವೆಗಳಲ್ಲಿ ಸೋತಿರುತ್ತಾರೆ. ಸದರಿ ಅನುಸೂಚಿತ ಸ್ವತ್ತು ಕುಂದುವಾಡ ವಾಸಿ ಮೇಲು ಸಕ್ಕರೆ ಮನೆತನದ ತಿಮ್ಮಣ್ಣ ಬಿನ್ ನರಸಿಂಹಣ್ಣ ಇವರು ಖರೀದಿ ಮಾಡಿದ ಸ್ವತ್ತಾಗಿದ್ದು, ನಂತರ ಅವರ ಮಕ್ಕಳು ಹಾಗೂ ಅವರ ಮೊಮ್ಮಕ್ಕಳು 1947ನೇ ವರ್ಷದಲ್ಲಿ ನೊಂದಾಯಿತ ಪಾಲು ವಿಭಾಗ ಮಾಡಿಕೊಂಡ ನಂತರ ಅವರ ಹಕ್ಕಿನಲ್ಲಿ ಬಂದಿರುವ ಸ್ವತ್ತನ್ನು ನಮ್ಮಗಳಿಗೆ ನೊಂದಾಯಿತ ಪತ್ರಗಳ ಮೂಲಕ ಮಾರಾಟ ಮಾಡಿರುವುದು ಸತ್ಯವಾದ ಸಂಗತಿಯಾಗಿರುತ್ತದೆ. ಈರೀತಿ ನ್ಯಾಯಾಲಯದಲ್ಲಿ ನಡೆದ ಎಲ್ಲಾ ವಿಷಯಗಳನ್ನು ಮುಚ್ಚಿಟ್ಟು ಇಲ್ಲ ಸಲ್ಲದ ಸುಳ್ಳು ಕಾರಣಗಳನ್ನು ನೀಡಿ ಸದರಿ ಮೇಲ್ಮನವಿದಾರರು ಅವರ ವಕೀಲರಾದ ಶ್ರೀಯುತ ಅಜಯ್ ಸಿ. ಇವರು ಕೊಟ್ಟಂತಹ ಸಾರ್ವಜನಿಕ ಪ್ರಕಟಣೆಯು ಸುಳ್ಳಿನಿಂದ ಕೂಡಿರುತ್ತದೆ. ಕಾರಣ ಸಮಸ್ತ ಸಾರ್ವಜನಿಕರಲ್ಲಿ ಮನವಿ ಮಾಡಿಕೊಳ್ಳುವುದೇನಂದರೆ, ಮೇಲ್ಮನವಿದಾರರ ಪ್ರಕಟಣೆಯಲ್ಲಿ ಹೇಳಿರುವ ಅಂಶಗಳನ್ನು ಪರಿಗಣಿಸಬಾರದೆಂದು ಈ ಕೆಳಕಂಡ ಅನುಸೂಚಿತ ಸ್ವತ್ತಿನ ಸಂಪೂರ್ಣವಾದ ಮಾಲೀಕರು, ಖಾತೆದಾರರು ಹಾಗೂ ಅನುಭವದಾರರಾಗಿರುವ ನಾವುಗಳು ಈ ಮೂಲಕ ಸತ್ಯಾಂಶಗಳನ್ನು ಸಾರ್ವಜನಿಕರ ಗಮನಕ್ಕೆ ತಿಳಿಸುತ್ತಿದ್ದೇವೆ.

ಅನುಸೂಚಿತ ಸ್ವತ್ತು ಕುಂದುವಾಡ ಗ್ರಾಮ, ದಾವಣಗೆರೆ ತಾಲ್ಲೂಕಿನಲ್ಲಿರುವ, ಸರ್ವೆ ನಂ. 159, ವಿಸ್ತೀರ್ಣ 12 ಎಕರೆ, 03 ಗುಂಟೆ ಆಕಾರ, ರೂ. 4.00/- ವಿಸ್ತೀರ್ಣದಲ್ಲಿ ನಮ್ಮಗಳಿಗೆ ಸೇರಿದ ಸ್ವತ್ತು 04 ಎಕರೆ, 14 ಗುಂಟೆ, ಜಮೀನಿಗೆ ಸೇರಿದ **ಚಕ್ಕುಬಂದಿ : ಪೂರ್ವಕ್ಕೆ :** ದೊಗ್ಗಳ್ಳಿ ನಿಂಗಪ್ಪನವರ ಜಮೀನು, **ಪಶ್ಚಿಮಕ್ಕೆ :** ಐ. ರಾಜಶೇಖರಪ್ಪ ಮತ್ತು ಸಹೋದರರಿಗೆ ಸೇರಿದ ಜಮೀನು, **ಉತ್ತರಕ್ಕೆ** ಕೆರೆ ಏರಿ, **ದಕ್ಷಿಣಕ್ಕೆ :** ಕರಿಬಸಪ್ಪನವರಿಗೆ ಸೇರಿದ ಜಮೀನು.

ದಿನಾಂಕ : 23.12.2024
ಸ್ಥಳ : ದಾವಣಗೆರೆ

**ಸಹಿ/- ದೊಗ್ಗಳ್ಳಿ ವಿಜಯ್ ಪ್ರಕಾಶ್**
ಎದುರುದಾರರ ಪರ ವಕೀಲರು, ದಾವಣಗೆರೆ 577 001
KAR 47/1984. ದೂರವಾಣಿ : 94483 39010

**ಸಹಿ/- ಎದುರುದಾರರು**
(ಐ. ಬಸವರಾಜಪ್ಪ ಮತ್ತು ಸಹೋದರರು


# ಕೊಂಡಜ್ಜಿ ಗ್ರಾ.ಪಂ. ಅಧ್ಯಕ್ಷರಾಗಿ ರತ್ನಮ್ಮ ಉಪಾಧ್ಯಕ್ಷರಾಗಿ ಕಡತಿ ನಿಂಗಪ್ಪ ಆಯ್ಕೆ



ಮಲೇಬೆನ್ನೂರು, ಡಿ. 24- ಹರಿಹರ ತಾಲ್ಲೂಕಿನ ಕೊಂಡಜ್ಜಿ ಗ್ರಾಮ ಪಂಚಾಯತಿ ನೂತನ ಅಧ್ಯಕ್ಷರಾಗಿ ರತ್ನಮ್ಮ ಗಂಗಪ್ಪ ತೋಟಿಗೇರ ಮತ್ತು ಉಪಾಧ್ಯಕ್ಷರಾಗಿ ಕಡತಿ ನಿಂಗಪ್ಪ ಅವರು ಮಂಗಳವಾರ ನಡೆದ ಚುನಾವಣೆಯಲ್ಲಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ರತ್ನಮ್ಮ 9 ಮತ ಪಡೆದು ಆಯ್ಕೆಯಾದರೆ, ಪ್ರತಿ ಸ್ಪರ್ಧಿ ವನಜಾಕ್ಷಮ್ಮ 8 ಮತ ಪಡೆದು ಪರಾಭವಗೊಂಡರು.

ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ನಿಂಗಪ್ಪ 9 ಮತ ಪಡೆದು ಆಯ್ಕೆಯಾದರೆ, ಪ್ರತಿ ಸ್ಪರ್ಧಿ ಭರಮಣ್ಣ 8 ಮತ ಪಡೆದು ಪರಾಭವಗೊಂಡರು. ಕರಿಯಮ್ಮ ರಾಜೀನಾಮೆಯಿಂದ ಅಧ್ಯಕ್ಷ ಸ್ಥಾನ ಮತ್ತು ಪರಮೇಶ್ವರಪ್ಪ ರಾಜೀನಾಮೆಯಿಂದ ಉಪಾಧ್ಯಕ್ಷ ಸ್ಥಾನ ತೆರವಾಗಿದ್ದವು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಉಪವಿಭಾಗದ ಎಇಇ ಬಿ.ಕೆ. ಗಿರೀಶ್ ಅವರು ಚುನಾವಣಾಧಿಕಾರಿ ಯಾಗಿದ್ದರು. ಪಿಡಿಓ ಜಿ.ಆರ್. ಸುನೀಲ್ ಹಾಗೂ ಸಿಬ್ಬಂದಿ ವರ್ಗದವರು ಸಹಕರಿಸಿದರು.


**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ದಾವಣಗೆರೆ ವಿಭಾಗ: ದಾವಣಗೆರೆ**

ಸಂ: ಕರಾಸಾ:ದಾವಿ:ಸಂ:ವಾ:2759:2024–25 ದಿನಾಂಕ: 23.12.2024

**ಇ–ಟೆಂಡರ್ ಪ್ರಕಟಣೆ ಸಂಖ್ಯೆ: 10/2024–25** (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದಲ್ಲಿರುವ ತಳ ಅಂತಸ್ತು (ಪಾರ್ಕಿಂಗ್ ಸ್ಥಳ), ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತು ಒಟ್ಟು ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ "As is where is basis" ಆಧಾರದಲ್ಲಿ ಏಕೈಕ ಪರವಾನಿಗೆಗೆ 06 ವರ್ಷದ ಅವಧಿಗೆ (ಪ್ರತಿ ವರ್ಷ ಶೇ. 05ರಷ್ಟು ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆ ನೀಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್: ksrtc.karnataka.gov.in ನಿಂದ ದಿನಾಂಕ: **23.12.2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13.01.2025ರ ಸಂಜೆ 5.00 ಗಂಟೆವರೆಗೆ.** ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017, 794/2018 ಮತ್ತು 809/2021 ಹಾಗೂ ಅದರ ತಿದ್ದುಪಡಿ ಆದೇಶದಂತೆ ಇ–ಟೆಂಡರ್ ವಿವರ.

| ಕ್ರ.ಸಂ. | ಬಸ್ ನಿಲ್ದಾಣದ ಹೆಸರು | ಮಳಿಗೆಯ ವಿವರ | ವಿಸ್ತೀರ್ಣ (ಚ.ಅ) | ಪರವಾನಿಗೆ ಅವಧಿ | ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ (ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ) | ಡಿ.ಡಿ. ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ) | ಕೆಪಿಪಿ ಪೋರ್ಟಲ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ) | ಡಿಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿಎಸ್‌ಟಿ (ರೂ.ಗಳಲ್ಲಿ) |
|---|---|---|---|---|---|---|---|---|
| 01 | ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣ | ಶಾಪಿಂಗ್ ಮಾಲ್ ಏರಿಯಾ | 130862.37 | 06 ವರ್ಷ | 54,87,000/– | 1,64,60,500/– | 500/– | 3540/– |

ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ಅಧೀಕ್ಷಕಿ – 7022030183**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ

ವಾಸಾಸಂಇ/ವಾ.ಪ್ರ/3968/ಎಂಎಎ/24–25

# ನೈಜೀರಿಯಾದಲ್ಲಿ ಹಸಿದವರಿಗೆ ನೆರವು ನೀಡುವುದೇ ಸಾವಿನೊಂದಿಗೆ ಚೆಲ್ಲಾಟ



**ಆಫ್ರಿಕಾದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ನೈಜೀರಿಯಾದಲ್ಲಿ ಕ್ರಿಸ್‌ಮಸ್ ರಜೆಯ ಅವಧಿ ಜೀವಗಳಿಗೆ ಅತ್ಯಂತ ಅಪಾಯಕಾರಿಯಾಗಿ ಪರಿಣಿಸುತ್ತಿದೆ. ನೈಜೀರಿಯಾದಲ್ಲಿ ಹಸಿವು ವ್ಯಾಪಕವಾಗಿದೆ. ಇಲ್ಲಿ ಪ್ರತಿಯೊಬ್ಬರು ಹಸಿದಿದ್ದಾರೆ.**



ಅಬುಜಾ,, ಡಿ. 24- ಕಳೆದ ಒಂದು ವಾರದಲ್ಲಿ ನೈಜೀರಿಯಾದಲ್ಲಿ ಆಹಾರಕ್ಕಾಗಿ ನಡೆಸಲಾದ ನೂಕು ನುಗ್ಗಲಿನಲ್ಲಿ ಕನಿಷ್ಠ 67 ಜನ ಸಾವನ್ನಪ್ಪಿದ್ದಾರೆ. ಈ ಪೀಳಿಗೆಯ ಅತ್ಯಂತ ಭೀಕರ ಬದುಕಿನ ಸಮಸ್ಯೆ ಎದುರಿಸುತ್ತಿರುವ ಕುಟುಂಬಗಳಿಗೆ ನೆರವು ಒದಗಿಸುವುದು ಹರಸಾಹಸವಾಗುತ್ತಿದೆ.

ಕಳೆದ ಬುಧವಾರ ಓಯೋ ಪ್ರಾಂತ್ಯದಲ್ಲಿ ಸಂಭವಿಸಿದ ನೂಕು ನುಗ್ಗಲಿನಲ್ಲಿ ಕನಿಷ್ಟ 35 ಮಕ್ಕಳು ಸಾವನ್ನಪ್ಪಿದ್ದರು. ಶನಿವಾರ ಅನಮ್ರ ರಾಜ್ಯದಲ್ಲಿ ಸಂಭವಿಸಿದ ನೂಕು ನುಗ್ಗಲಿನಲ್ಲಿ 22 ಜನ ಮೃತಪಟ್ಟಿದ್ದರು. ರಾಜಧಾನಿ ಅಬುಜಾದಲ್ಲಿ 10 ಜನ ಸಾವನ್ನಪ್ಪಿದ್ದರು.

ಆಫ್ರಿಕಾದಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ನೈಜೀರಿಯಾದಲ್ಲಿ ಕ್ರಿಸ್‌ಮಸ್ ರಜೆಯ ಅವಧಿ ಜೀವಗಳಿಗೆ ಅತ್ಯಂತ ಅಪಾಯಕಾರಿಯಾಗಿ ಪರಿಣಿಸುತ್ತಿದೆ. ನೈಜೀರಿಯಾದಲ್ಲಿ ಹಸಿವು ವ್ಯಾಪಕವಾಗಿದೆ. ಇಲ್ಲಿ ಪ್ರತಿಯೊಬ್ಬರು ಹಸಿದಿದ್ದಾರೆ ಎಂದು ಜನರು ಹೇಳುತ್ತಿದ್ದಾರೆ.

ಹಣ ಉಳಿಸಲು ಹಾಗೂ ಹೂಡಿಕೆ ಸೆಳೆಯಲು ಸರ್ಕಾರ ರೂಪಿಸಿರುವ ನೀತಿಗಳೇ ಆರ್ಥಿಕ ಬಿಕ್ಕಟ್ಟಿಗೆ ಕಾರಣವಾಗಿವೆ ಎಂದು ಹೇಳಲಾಗುತ್ತಿದೆ. ದೇಶದಲ್ಲಿ ಹಣದುಬ್ಬರ ದರ ಶೇ. 34.6ಕ್ಕೆ ತಲುಪಿದ್ದು ಇದು 28 ವರ್ಷಗಳಲ್ಲೇ ಅತಿ ಹೆಚ್ಚಾಗಿದೆ. ನೈಜೀರಿಯಾದ ಹಣವಾದ ನೈರಾ ಡಾಲರ್ ಎದುರು ದಾಖಲೆಯ ಕುಸಿತ ಕಾಣುತ್ತಿದೆ.

ದೇಶದ 210 ದಶಲಕ್ಷ ಜನರ ಪೈಕಿ ಕನಿಷ್ಟ ಶೇ. 63ರಷ್ಟು ಜನ ಬಡವರಿದ್ದಾರೆ ಎಂದು ಸರ್ಕಾರದ ಅಂಕಿ - ಅಂಶಗಳು ತಿಳಿಸುತ್ತಿವೆ. ಉದ್ಯೋಗ ಸೃಷ್ಟಿಸಲು ಸರ್ಕಾರ ಪರದಾಡುತ್ತಿದೆ. ಹತಾಶೆಗೊಂಡ ಜನ ಪ್ರತಿಭಟನೆ ನಡೆಸಲು ಮುಂದಾದರೆ ಬರ್ಬರವಾಗಿ ಹತ್ತಿಕ್ಕಲಾಗುತ್ತಿದೆ. ಕಳೆದ ಆಗಸ್ಟ್ ತಿಂಗಳಲ್ಲಿ ದೇಶಾದ್ಯಂತ ಪ್ರತಿಭಟನೆಗಳು ನಡೆದಾಗ ಭದ್ರತಾ ಪಡೆಗಳು 20ಕ್ಕೂ ಹೆಚ್ಚು ಜನರನ್ನು ಹೊಡೆದುರುಳಿಸಿದ್ದವು.

ಸಾಮಾನ್ಯ ನೈಜೀರಿಯಾ ವ್ಯಕ್ತಿಯ ಕೈಗೆ ಆಹಾರ ಸಿಗುತ್ತಿಲ್ಲ. ದೇಶದ 97ರಷ್ಟು ಜನರು ತಮ್ಮ ಆದಾಯದ ಶೇ. 63ರಷ್ಟನ್ನು ಆಹಾರಕ್ಕಾಗಿ ವೆಚ್ಚ ಮಾಡುತ್ತಿದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಈ ಸಮಸ್ಯೆ ಮತ್ತಷ್ಟು ಬಿಗಡಾಯಿಸುತ್ತಿದೆ ಎಂದು ಲಾಗೋಸ್‌ನ ಎಸ್‌ಬಿಎಂ ಇಂಟಲಿಜೆಂಟ್ ಸಂಶೋಧನಾ ಸಂಸ್ಥೆಯ ವ್ಯವಸ್ಥಾಪಕ ಸಹಭಾಗಿ ಚತಾ ನ್ವಾಂಜೆ ಹೇಳಿದ್ದಾರೆ.

ನೈಜೀರಿಯಾದಲ್ಲಿ ಕಾಲ್ತುಳಿತಕ್ಕೆ ಸಿಲುಕಿ ಸಾವುಗಳು ಸಂಭವಿಸುವುದು ಹೊಸದೇನೂ ಅಲ್ಲ. ಈ ದೇಶದಲ್ಲಿ ಸಾರ್ವಜನಿಕ ಸುರಕ್ಷತಾ ಕ್ರಮಗಳನ್ನು ಪಾಲನೆ ಮಾಡುವ ಅಭ್ಯಾಸ ಇಲ್ಲ. ಇದರ ನಡುವೆ ಹಸಿವಿನಿಂದ ಹತಾಶೆಗೊಂಡಿರುವ ಜನರು ಗುಂಪು ಸೇರಿದಾಗ ನಿಯಂತ್ರಿಸುವುದು ಇನ್ನಷ್ಟು ಕಠಿಣವಾಗುತ್ತದೆ ಎಂದು ವಿಶ್ಲೇಷಕರು ಹೇಳಿದ್ದಾರೆ.

ಆಹಾರ ವಿತರಣೆ ಆರಂಭವಾಗುವ ಮುಂಚೆಯೆ ಅಬುಜಾ ಹಾಗೂ ಅನಮ್ರಗಳಲ್ಲಿ ನೂಕು ನುಗ್ಗಲು ನಡೆದಿದ್ದವು ಎಂದು ಪ್ರತ್ಯಕ್ಷ ದರ್ಶಿಗಳು ಹಾಗೂ ಪೊಲೀಸರು ಹೇಳಿದ್ದಾರೆ.

ಅವಧಿಗೆ ಮೊದಲೇ ಮುಂದಿರಬೇಕು ಎಂದು ಜನ ನೂಕು ನುಗ್ಗಲು ನಡೆಸಿದ್ದರು. ಈ ಘಟನೆಗಳ ಹಿನ್ನೆಲೆಯಲ್ಲಿ ಅಬುಜಾದ ಚರ್ಚ್‌ಗಳು ಆಹಾರ ಚೀಲ ವಿತರಣೆ ಕಾರ್ಯಕ್ರಮಗಳನ್ನು ರದ್ದುಗೊಳಿಸಿವೆ.

ಈ ರೀತಿಯ ಕಾರ್ಯಕ್ರಮಗಳನ್ನು ಆಯೋಜಿಸುವವರು ಭದ್ರತೆಗೆ ಆದ್ಯತೆ ನೀಡುವುದಿಲ್ಲ ಎಂದು ಅಬುಜಾದ ಬ್ಯಾರಿಕೇಡ್ ಎಕ್ಸಿಕ್ಯೂಟಿವ್ ಪ್ರೊಟೆಕ್ಷನ್ ಸೆಕ್ಯೂರಿಟಿ ಸಂಸ್ಥೆಯ ಅಡೆಮೊಲ್ ತಿಳಿಸಿದ್ದಾರೆ.

ಈ ನಡುವೆ ಜನರಿಗೆ ನೆರವು ನೀಡಲು ಹಲವಾರು ಸಂಘಟನೆಗಳು ಹಾಗೂ ವ್ಯಕ್ತಿಗಳು ಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದಾರೆ. ಇಂತಹ ಆಯೋಜಕರು ರಕ್ಷಣಾ ವೃತ್ತಿಪರರ ಸಲಹೆ ಹಾಗೂ ನೆರವು ಪಡೆದಲ್ಲಿ ಸಮಸ್ಯೆ ಬಗೆಹರಿಸಬಹುದು ಎಂದು ಅಡೆಮೊಲ್ ಹೇಳಿದ್ದಾರೆ.

ನೆರವು ಕಾರ್ಯಕ್ರಮಗಳು ಆಯೋಜಿಸುವಾಗ ಲೋಪಗಳು ಉಂಟಾದರೆ ಸಹಿಸುವುದಿಲ್ಲ ಎಂದು ನೈಜೀರಿಯಾ ಅಧ್ಯಕ್ಷ ಬೋಲಾ ಟಿಂಬು ಹೇಳಿದ್ದಾರೆ. ನೆರವು ಕಾರ್ಯಕ್ರಮಗಳ ಆಯೋಜಿಸಲು ಮುಂಚೆಯೇ ಅನುಮತಿ ಪಡೆಯುವುದು ಕಡ್ಡಾಯ ಎಂದು ಪೊಲೀಸರು ಹೇಳಿದ್ದಾರೆ. ಆದರೆ ಈ ರೀತಿಯ ನಿಯಮಗಳು ಹೊಸದೇನೂ ಅಲ್ಲ, ಇವುಗಳನ್ನು ಸಮರ್ಪಕವಾಗಿ ಜಾರಿಗೆ ತಂದೇ ಇಲ್ಲ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ.

ಜನರು ವರ್ಷವಿಡೀ ಆದಾಯದ ಕೊರತೆಯಿಂದ ಬಳಲಿದ್ದಾರೆ. ಎಲ್ಲಾದರೂ ಆಹಾರ ವಿತರಣೆ ನಡೆಯುತ್ತದೆ ಎಂದರೆ ಅಲ್ಲಿಗೆ ಹೋಗುವುದು ಸಹಜವಾಗಿದೆ. ನಮ್ಮಲ್ಲಿ ಸರದಿಯಲ್ಲಿ ಕಾಯುವ ಸಂಪ್ರದಾಯವಂತೂ ಇಲ್ಲವೇ ಇಲ್ಲ ಎನ್ನಬಹುದು. ಇದೆಲ್ಲವು ಕಾಲ್ತುಳಿತದ ಸಮಸ್ಯೆಗೆ ಆಹ್ವಾನ ನೀಡುತ್ತವೆ ಎಂದು ವಾಂಜೆ ಹೇಳಿದ್ದಾರೆ.



## ಕನಕ ಜಯಂತಿ ಯಶಸ್ವಿಗೆ ಕರೆ

ಜಗಳೂರು, ಡಿ.24- ದಾವಣಗೆರೆಯಲ್ಲಿ ಬರುವ ಜನವರಿ 5 ರಂದು ನಡೆಯಲಿರುವ 537 ನೇ ಜಯಂತ್ಯೋತ್ಸವ ಕಾರ್ಯಕ್ರಮಕ್ಕೆ ಅಧಿಕ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸುವಂತೆ ಕುರುಬ ಸಮಾಜದ ಮುಖಂಡ ಮಾಜಿ ಮೇಯರ್ ಗೋಣೆಪ್ಪ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ತಾಲೂಕಿನಾದ್ಯಂತ ಪ್ರವಾಸ ಕೈಗೊಂಡು ಕುರುಬ ಸಮಾಜದ ಬಂಧುಗಳಿಗೆ ಆಹ್ವಾನಿಸಲಾಗಿದೆ. ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸೇರಿದಂತೆ ವಿವಿಧ ಗಣ್ಯರುಗಳು ಭಾಗವಹಿಸಲಿದ್ದಾರೆ.ಶೋಷಿತ ಸಮುದಾಯಗಳ ಜನಜಾಗೃತಿ ಸಮಾವೇಶ ಜರುಗಲಿದೆ ಎಂದು ಹೇಳಿದರು.

ಮುಖಂಡ ಕೆ.ಪಿ.ಪಾಲಯ್ಯ ಮಾತನಾಡಿ, ಶೋಷಿತ ವರ್ಗಗಳು ಜಾಗೃತರಾಗಬೇಕಿದೆ. ಭಕ್ತ ಕನಕದಾಸರು ಜಾತಿಗೆ ಸೀಮಿತವಲ್ಲ ಪ್ರತಿಯೊಬ್ಬರೂ ದಾರ್ಶನಿಕ ಆದರ್ಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಬಿಳಿಚೋಡು ಒಮ್ಮಣ್ಣ , ಮಡ್ರಳ್ಳಿ ರೇವಣಸಿದ್ದಪ್ಪ, ಎಸ್.ಎಲ್. ಆನಂದಪ್ಪ, ಹದಡಿ ಜಿ.ಸಿ. ನಿಂಗಪ್ಪ, ಹಾಲೇಕಲ್ಲು ಎಸ್.ಟಿ. ಅರವಿಂದ್, ಇಟ್ಟಿಗುಡಿ ಮಂಜುನಾಥ್, ಬಿ. ಲಿಂಗರಾಜ್, ಕೆ. ರೇವಣ್ಣ, ಹಾಲೇಕಲ್ಲು ಗೋಣೆಪ್ಪ, ಮಂಜು ಕೊಗ್ಗನೂರು, ವಿನಯ್ ಜೋಗಪ್ಪನವರ್, ಬಿ.ಹೆಚ್. ನವೀನ್ ಕುಮಾರ್ ಮತ್ತಿತರರು ಪತ್ರಿಕಾ ಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

## ಅಸ್ಪೃಶ್ಯತೆ ನಿವಾರಣೆ ಕುರಿತು ಬೀದಿ ನಾಟಕ



**ಜಿ.ಬೇವಿನಹಳ್ಳಿ**

ಮಲೇಬೆನ್ನೂರು, ಡಿ. 24 - ಜಿ.ಪಂ. ದಾವಣಗೆರೆ ಮತ್ತು ಸಮಾಜ ಕಲ್ಯಾಣ ಇಲಾಖೆ, ಹರಿಹರ ಹಾಗೂ ಜಿಗಳಿ ಗ್ರಾ.ಪಂ. ಇವರ ಸಹಯೋಗದಲ್ಲಿ ಜಿ.ಬೇವಿನಹಳ್ಳಿ ಗ್ರಾಮದಲ್ಲಿ ಚನ್ನಗಿರಿಯ 'ಸುವರ್ಣ ಕರ್ನಾಟಕ ಜನ ಜ್ಯಾಗೃತಿ' ಕಲಾ ತಂಡದಿಂದ ಅಸ್ಪ ಶ್ಯತೆ ನಿವಾರಣೆ ಮತ್ತು ಎಸ್ಸಿ -ಎಸ್ಟಿ ದೌರ್ಜನ್ಯ ಕಾಯ್ದೆ ಬಗ್ಗೆ ಬೀದಿ ನಾಟಕ ಹಾಗೂ ಜಾಗೃತಿ ಗೀತೆಗಳ ಮೂಲಕ ಜನರಲ್ಲಿ ಅರಿವು ಮೂಡಿಸಲಾಯಿತು.

ಕಲಾವಿದರಾದ ಜಿ ಎನ್. ಹೇಮಂತ್, ದ್ವಾರಕೀಶ್, ಮಲ್ಲೇಶಪ್ಪ, ರಾಮು, ವಿನೋದ, ಸುಪ್ರಿಯ, ಸುಲೋಚನ, ರಾಧಿಕ ಮತ್ತು ಗ್ರಾ ಪಂ ಸಿಬ್ಬಂದಿ ಹಾಗೂ ಆನಂದಗೌಡ ಭಾಗವಹಿಸಿದ್ದರು.

## ಸಂದರ್ಶನಕ್ಕಾಗಿ ಪೊಲೀಸ್‌ಗೆ ಬೆದರಿಕೆ ಹಾಕಿದ ಯೂಟ್ಯೂಬರ್ ಬಂಧನ

ಸಂಭಲ್ (ಉತ್ತರ ಪ್ರದೇಶ), ಡಿ. 24- ತನಗೆ ಸಂದರ್ಶನ ನೀಡುವಂತೆ ಪೊಲೀಸ್ ಅಧಿಕಾರಿಗೆ ಬೆದರಿಕೆ ಹಾಕಿದ ಆರೋಪದ ಯೂಟ್ಯೂಬರ್ ಓರ್ವನನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಸಂಭಲ್ ವೃತ್ತಾಧಿಕಾರಿ ಅನುಜ್‌ಕುಮಾರ್ ಚೌಧರಿ ಅವರ ಸಂದರ್ಶನ ಪಡೆಯಲು ಯೂಟ್ಯೂಬರ್ ಮಷ್ಕೂರ್ ರಜಾ ದಾದ ಪ್ರಯತ್ನ ನಡೆಸಿದ್ದರು. ಇದಕ್ಕಾಗಿ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ಡಿಜಿಪಿ ಪ್ರಶಾಂತ್ ಕುಮಾರ್ ಹೆಸರು ಬಳಸಿದ್ದರು. ನವೆಂಬರ್ 24ರಂದು ಸಂಭಲ್‌ನಲ್ಲಿ ನಡೆದ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಚೌಧರಿ ಸಂದರ್ಶನ ನೀಡಬೇಕೆಂದು ದಾದಾ ಬಯಸಿದ್ದರು. ಆದರೆ ಸಂದರ್ಶನಕ್ಕೆ ಪೊಲೀಸ್ ಅಧಿಕಾರಿ ನಿರಾಕರಿಸಿದಾಗ ಬೆದರಿಕೆ ಹಾಕಿದ್ದರು ಎಂದು ಪೊಲೀಸರು ಹೇಳಿದ್ದಾರೆ.

## ರೈಲುಗಳ ಸೇವೆಗಳಲ್ಲಿ ಬದಲಾವಣೆ



**ಭಾಗಶಃ ರದ್ದು:** ಜನವರಿ 2 ಮತ್ತು 9, 2025 ರಂದು ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು ವಿಶೇಷ (06571) ರೈಲು ಹಿರೇಹಳ್ಳಿ-ತುಮಕೂರು ನಿಲ್ದಾಣಗಳ ನಡುವೆ, ತುಮಕೂರು-ಕೆಎಸ್‌ಆರ್ ಬೆಂಗಳೂರು ಮೆಮು ವಿಶೇಷ (06572) ರೈಲು ತುಮಕೂರು-ಹಿರೇಹಳ್ಳಿ ನಿಲ್ದಾಣಗಳ ನಡುವೆ, ತಾಳಗುಪ್ಪ-ಬೆಂಗಳೂರು ಡೈಲಿ ಸೂಪರ್ ಫಾಸ್ಟ್ ಎಕ್ಸ್ ಪ್ರೆಸ್ (20652) ರೈಲು ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ, ಕೆಎಸ್‌ಆರ್ ಬೆಂಗಳೂರು-ಧಾರವಾಡ ಸಿದ್ಧಗಂಗಾ ಡೈಲಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ (12725) ರೈಲು ಕೆಎಸ್‌ಆರ್ ಬೆಂಗಳೂರು-ಅರಸೀಕೆರೆ ನಿಲ್ದಾಣಗಳ ನಡುವೆ, ಧಾರವಾಡ-ಕೆಎಸ್‌ಆರ್ ಬೆಂಗಳೂರು ಸಿದ್ಧಗಂಗಾ ಡೈಲಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ (12726) ರೈಲು ಅರಸೀಕೆರೆ-ಕೆಎಸ್‌ಆರ್ ಬೆಂಗಳೂರು ನಿಲ್ದಾಣಗಳ ನಡುವೆ ಮತ್ತು ತುಮಕೂರು-ಯಶವಂತಪುರ ಮೆಮು ವಿಶೇಷ (06201) ರೈಲು ತುಮಕೂರು-ಹಿರೇಹಳ್ಳಿ ನಿಲ್ದಾಣಗಳ ನಡುವೆ ಭಾಗಶಃ ರದ್ದುಗೊಳ್ಳಲಿವೆ.

**ರೈಲುಗಳ ಮಾರ್ಗ ಬದಲಾವಣೆ:** ರೈಲು ಸಂಖ್ಯೆ 19668 ಮೈಸೂರು-ಉದಯಪುರ ಸಿಟಿ ಸಾಪ್ತಾಹಿಕ ಎಕ್ಸ್‌ಪ್ರೆಸ್ ರೈಲು ಜನವರಿ 2 ಮತ್ತು 9, 2025 ರಂದು ಮೈಸೂರಿನಿಂದ ಹೊರಡುವ ಈ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ಮತ್ತು ದಾವಣಗೆರೆ ನಿಲ್ದಾಣಗಳ ಮೂಲಕ ಚಲಿಸಲಿದೆ.

ಜನವರಿ 2 ಮತ್ತು 9, 2025 ರಂದು ರೈಲು ಸಂಖ್ಯೆ 17326 ಮೈಸೂರು-ಬೆಳಗಾವಿ ವಿಶ್ವಮಾನವ ಡೈಲಿ ಎಕ್ಸ್ ಪ್ರೆಸ್ ರೈಲು ಯಶವಂತಪುರ, ನೆಲಮಂಗಲ, ಹಾಸನ ಮತ್ತು ಅರಸೀಕೆರೆ ನಿಲ್ದಾಣಗಳ ಮೂಲಕ ಸಂಚರಿಸಲಿದೆ. ಈ ರೈಲು ತುಮಕೂರು ಮತ್ತು ತಿಪಟೂರು ನಿಲ್ದಾಣಗಳಲ್ಲಿ ತನ್ನ ನಿಯಮಿತ ನಿಲುಗಡೆ ತಪ್ಪಿರುತ್ತದೆ.

**ರೈಲುಗಳ ನಿಯಂತ್ರಣ:** ಡಿಸೆಂಬರ್ 31, 2024 ಮತ್ತು ಜನವರಿ 7, 2025 ರಂದು ಬಿಕಾನೇರ್ ನಿಲ್ದಾಣದಿಂದ ಪ್ರಾರಂಭವಾಗುವ ರೈಲು ಸಂಖ್ಯೆ 16588 ಬಿಕಾನೇರ್-ಯಶವಂತಪುರ ದ್ವಿ-ಸಾಪ್ತಾಹಿಕ ಎಕ್ಸ್ ಪ್ರೆಸ್ ರೈಲು ಮಾರ್ಗ ಮಧ್ಯದಲ್ಲಿ 120 ನಿಮಿಷ ನಿಯಂತ್ರಿಸಲಾಗುವುದು.

ಜನವರಿ 2 ಮತ್ತು 9 ರಂದು ತಮ್ಮ ಮೂಲ ನಿಲ್ದಾಣದಿಂದ ಹೊರಡುವ ರೈಲು ಸಂಖ್ಯೆ 12629 ಯಶವಂತಪುರ-ಹಜರತ್ ನಿಜಾಮುದ್ದೀನ್ ದ್ವಿ-ಸಾಪ್ತಾಹಿಕ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯದಲ್ಲಿ 50 ನಿಮಿಷ, ರೈಲು ಸಂಖ್ಯೆ 20651 ಕೆಎಸ್‌ಆರ್ ಬೆಂಗಳೂರು-ತಾಳಗುಪ್ಪ ಡೈಲಿ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯದಲ್ಲಿ 10 ನಿಮಿಷ, ರೈಲು ಸಂಖ್ಯೆ 17325 ಬೆಳಗಾವಿ - ಮೈಸೂರು ವಿಶ್ವಮಾನವ ಡೈಲಿ ಎಕ್ಸ್‌ಪ್ರೆಸ್ ರೈಲು ಮಾರ್ಗ ಮಧ್ಯದಲ್ಲಿ 30 ನಿಮಿಷ ಮತ್ತು ರೈಲು ಸಂಖ್ಯೆ 07345 ಚಾಮರಾಜನಗರ-ತುಮಕೂರು ದೈನಂದಿನ ಪ್ಯಾಸೆಂಜರ್ ರೈಲು ಮಾರ್ಗ ಮಧ್ಯದಲ್ಲಿ 120 ನಿಮಿಷಗಳ ಕಾಲ ನಿಯಂತ್ರಿಸಲಾಗುವುದು.

**ಸಮಯ ಮರು ನಿಗದಿ :** ರೈಲು ಸಂಖ್ಯೆ 17309 ಯಶವಂತಪುರ-ವಾಸ್ಕೋ ಡಗಾಮಾ ಡೈಲಿ ಎಕ್ಸ್‌ಪ್ರೆಸ್ ಜನವರಿ 2 ಮತ್ತು 9 ರಂದು ಯಶವಂತಪುರ ನಿಲ್ದಾಣದಿಂದ 30 ನಿಮಿಷ ತಡವಾಗಿ ಹೊರಡಲಿದೆ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಡಾ. ಮಂಜುನಾಥ ಕನಮಡಿ ತಿಳಿಸಿದ್ದಾರೆ.

## ನಿಷ್ಠೆಯಿಂದ ಭಗವಂತನ ಅನುಗ್ರಹ ಪ್ರಾಪ್ತಿ

**(1ನೇ ಪುಟದಿಂದ)** ಆಶೀರ್ವಚನ ನೀಡಿದರು.

ಮನೆಯಲ್ಲಿ ಕುಟುಂಬ ಸದಸ್ಯರ ಮೇಲೆ ಹೇಗೆ ಪ್ರೀತಿ ತೋರುವಿರೋ ಅದೇ ರೀತಿ ಗುರು ಹಾಗೂ ದೇವರ ಮೇಲೂ ತೋರಿಸಬೇಕು. ಶ್ರದ್ಧಾ ಭಕ್ತಿಯಿಂದ ಭಗವಂತನ್ನು ಆರಾಧಿಸಬೇಕು ಎಂದು ಸ್ವಾಮೀಜಿ ಹೇಳಿದರು.

ಗಜೇಂದ್ರ ಮೋಕ್ಷ ಪೌರಾಣಿಕ ಕಥೆಯಲ್ಲಿ ಆನೆಯೊಂದರ ಕಾಲನ್ನು ಮೊಸಳೆ ಹಿಡಿದಿರುತ್ತದೆ. ಆಗ ಆನೆಯು ಕಾಪಾಡುವಂತೆ ಭಗವಂತನನ್ನು ನೆನೆಯುತ್ತದೆ. ತನ್ನ ವಾಹನವನ್ನೂ ಏರದೆ, ಭಗವಂತ ಅತಿ ಶೀಘ್ರದಲ್ಲಿ ಆಗಮಿಸಿ ಆನೆಗೆ ಮೋಕ್ಷ ನೀಡುತ್ತಾನೆ. ಹೀಗೆ ಭಗವಂತ ಬರಬೇಕಾದರೆ ಮನಸ್ಸಿನಲ್ಲಿ ದೃಢ ಭಕ್ತಿ ಇರಬೇಕು ಎಂದು ಉದಾಹರಿಸಿದರು.

ರೋಗಿಯೊಬ್ಬ ವೈದ್ಯರ ಬಳಿ ಹೋದಾಗ ಅವರು ನೀಡುವ ಔಷಧಿಯನ್ನು ವಿಶ್ವಾಸದಿಂದಲೇ ಹೇಗೆ ಸೇವಿಸುತ್ತಾನೋ. ಹಾಗೆಯೇ ದೇವರ ಮನೆ ವಿಶ್ವಾಸ ಹೊಂದಬೇಕು. ಈ ವಿಶ್ವಾಸವೇ ಸಂಕಷ್ಟಗಳಿಂದ ನಮ್ಮನ್ನು ಪಾರು ಮಾಡುತ್ತದೆ ಎಂದು ಹೇಳಿದರು.

ನಾವುಗಳು ಇಲ್ಲಿಗೆ ಬಂದಾಗ ಆದರ, ಭಕ್ತಿಯಿಂದ ಸತ್ಕರಿಸುತ್ತೀರಿ. ಹಾಗೆಯೇ ನೀವುಗಳೂ ಸಹ ಸೋದೆಗೆ ಆಗಮಿಸಬೇಕು. ಮನೆ ದೇವರು, ಗುರು ಮಠವನ್ನು ಎಂದಿಗೂ ಮರೆಯಬಾರದು. ಯಾವುದೇ ಮಠವು ಭಕ್ತರಿಂದ ಬೆಳ್ಳಿ, ಬಂಗಾರ ಹಣ ನಿರೀಕ್ಷಿಸುವುದಿಲ್ಲ. ಶ್ರದ್ಧೆ, ಭಕ್ತಿಯಿಂದ ಆಗಮಿಸಿ ಸೇವೆ ಮಾಡಬೇಕು ಎಂದರು.

ದೈವಜ್ಞ ಸಮಾಜದ ಮುಖಂಡರುಗಳಾದ ನಲ್ಲೂರು ಎಸ್.ರಾಜಕುಮಾರ್, ಪ್ರಕಾಶ್ ಎಲ್. ದೈವಜ್ಞ, ರಾಮದಾಸ್, ರಾಮಚಂದ್ರ ರಾಯ್ಕರ್, ಅಣ್ಣಪ್ಪ ಎ.ಶೇಠ್, ಚಿತ್ನಾಳ್ ಮಂಜುನಾಥ್, ಎಂ.ಜಿ. ಎಸ್. ಸುಬ್ಬರಾಯ, ಎಂ.ಜಿ.ಎಸ್. ಸುರೇಂದ್ರ, ಸತೀಶ್ ಭಟ್, ಗಣೇಶ್ ಬುರುಡೆ, ನಲ್ಲೂರು ಎಸ್. ರಾಘವೇಂದ್ರ ಇತರರು ಉಪಸ್ಥಿತರಿದ್ದರು.

## ಅಶ್ಲೀಲ ಪದ : ಪ್ರಕರಣ ಸಿಬಿಐಗೆ

**(1ನೇ ಪುಟದಿಂದ)** ತನಿಖೆ ನಡೆಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಭಾಪತಿ ಅವರನ್ನು ಕೋರುವುದಾಗಿ ತಿಳಿಸಿದ್ದರು.

ಇದರ ನಡುವೆ ಲಕ್ಷ್ಮೀ ಹೆಬ್ಬಾಳ್ಕರ್ ಬೆಂಬಲಿಗರು, ತಮ್ಮ ಹತ್ಯೆಗೆ ಸಂಚು ರೂಪಿಸಿದ್ದರು ಮತ್ತು ಹಲ್ಲೆ ನಡೆಸಿದ್ದಾರೆಂದು ರವಿ ಅವರು ನೀಡಿದ ದೂರು ದಾಖಲುಗೊಂಡಿದೆ.

ಅಶ್ಲೀಲ ಪದ ಬಳಸಿದ ಆರೋಪದ ದಿನವೇ ರವಿ ಅವರನ್ನು ಬೆಳಗಾವಿ ಪೊಲಿಸರು ಬಂಧಿಸಿದ್ದರು, ಮರುದಿನವೇ ಹೈಕೋರ್ಟ್ ಜಾಮೀನು ನೀಡಿ ತಕ್ಷಣ ಬಿಡುಗಡೆ ಮಾಡುವಂತೆ ಆದೇಶಿಸಿತ್ತು.

## ಮಂತ್ರಾಲಯಕ್ಕೆ ಭಕ್ತರ ದಂಡು

**(1ನೇಪುಟದಿಂದ)** ಜನರಿಂದಆಫ್‌ಲೈನ್‌ಬುಕಿಂಗ್‌ನೋಡಿಕೊಳ್ಳುವುದೂ ಅನಿವಾರ್ಯವಾಗಿದೆ ಎಂದು ಹೇಳಿದ್ದಾರೆ.

ಇದೇ ಸಮಯದಲ್ಲಿ, ಪ್ರೋಟೋಕಾಲ್ ಮಾನದಂಡ ಗಳ ಪ್ರಕಾರ ನಾವು ವಿವಿಐಪಿಗಳನ್ನು ನೋಡಿಕೊಳ್ಳಬೇಕಾಗಲಿದೆ. ಪೀಕ್ ದಿನಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸಲು ಭಕ್ತರು ಕೊನೆಯ ಗಂಟೆಯ ವಿನಂತಿ, ಶಿಫಾರಸು ಪತ್ರಗಳಿಗೆ ಸ್ಪಂದಿಸುವುದು ಕಷ್ಟವಾಗಲಿದೆ. ಭಕ್ತರು ಹಾಗೂ ಶಿಷ್ಯರು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

## ಚರ್ಮ ವಸ್ತುಗಳ ಮೇಲೆ ಭಾರೀ ರಿಯಾಯಿತಿ

ದಾವಣಗೆರೆ, ಡಿ.24- ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಪ್ರಯುಕ್ತ ಲಿಡಕರ್ ನಿಗಮದಿಂದ ಜನವರಿ 5 ರವರೆಗೆ ಚರ್ಮದ ಪಾದರಕ್ಷೆ, ಶೂ, ಬೆಲ್ಟ್, ಪರ್ಸ್, ಟ್ರಾವಲ್ ಬ್ಯಾಗ್, ಲ್ಯಾಪ್‌ಟಾಪ್ ಬ್ಯಾಗ್, ಮಹಿಳೆಯರ ಪರ್ಸ್, ವ್ಯಾನಟಿ ಬ್ಯಾಗ್‌ಗಳ ಮೇಲೆ ಶೇ.20 ರಿಂದ 40 ರಿಯಾಯಿತಿ ಇರುತ್ತದೆ ಎಂದು ಲಿಡಕರ್ ನಿಗಮದ ವ್ಯವಸ್ಥಾಪಕರು ತಿಳಿಸಿದ್ದಾರೆ.

## ಯಾದವ ಹಾಸ್ಟೆಲ್‌ಗೆ ಅರ್ಜಿ ಆಹ್ವಾನ

ದಾವಣಗೆರೆ, ಡಿ.24- ನಗರದ ಯಾದವ ವಿದ್ಯಾರ್ಥಿ ನಿಲಯದಲ್ಲಿ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಪಿಯುಸಿ ಮೇಲ್ಪಟ್ಟು ವಿದ್ಯಾಭ್ಯಾಸ ಮಾಡುವ ಯಾದವ ಸಮಾಜದ ವಿದ್ಯಾರ್ಥಿಗಳು ಉಚಿತ ವಸತಿ ಸೌಲಭ್ಯಕ್ಕೆ ಅರ್ಹರಾಗಿದ್ದಾರೆ. ಮಾಹಿತಿಗೆ 9845619207, 9880164534 ಹಾಗೂ 9880515495 ಸಂಪರ್ಕಿಸಿ.


**ಕಮರ್ಷಿಯಲ್ ಸೈಟು ಮಾರಾಟಕ್ಕಿದೆ**
ಓಲ್ಡ್ ಪಿ.ಬಿ. ರೋಡ್ ಹತ್ತಿರ, ದಕ್ಷಿಣ 50x150, ಜಿಎಂಐಟಿ, ಕಾಲೇಜು ಹತ್ತಿರ, ಉತ್ತರ 85x360 ಮಾರಾಟಕ್ಕಿವೆ.
**ಐಗೂರು ವಿಜಯಕುಮಾರ್**
**99457 02495**

**ಬೇಕಾಗಿದ್ದಾರೆ**
**ಹೋಟೆಲ್‌ನಲ್ಲಿ ಕ್ಲೀನಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.**
ಸಮಯ : ಮಧ್ಯಾಹ್ನ 3 ರಿಂದ ರಾತ್ರಿ 9.30
**ಮೊ. 82176 84224**

**ಗೋದಾಮು ಬಾಡಿಗೆಗೆ**
ನಗರದ KSRTC ಬಸ್ ಸ್ಟ್ಯಾಂಡ್ ಎದುರು, ತರಕಾರಿ ಹೋಲ್‌ಸೇಲ್ ಮಾರ್ಕೆಟ್ ಪಕ್ಕದ (KOF)ನಲ್ಲಿ 14,800 ಚ.ಅ. ಮತ್ತು 29,800 ಚ.ಅ. ಬಾಡಿಗೆಗೆ ದೊರೆಯುತ್ತದೆ.
**87625 88632**

**ಸೈಟುಗಳು, ಮನೆಗಳು ಮಾರಾಟಕ್ಕಿವೆ**
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್‌ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
**97315 12365**

**ಹೊಸ 2 BHK ಮನೆ ಸಿಂಗಲ್ ರೂಂ ಬಾಡಿಗೆಗಿದೆ**
2 BHK 1ನೇ ಫ್ಲೋರ್, ಹನಗವಾಡಿ ಬಡಾವಣೆ, ಹೊಸ ಕುಂದವಾಡ ಸರ್ವೀಸ್ ರಸ್ತೆ, ಸ್ವಾದ ಕೆಫೆ ಹಿಂಭಾಗ, ದಾವಣಗೆರೆ.
**99011 20921**

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
**ಆರ್ಚೀಸ್ ಗ್ಯಾಲರಿ**
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
**ಮೊ : 96324-33166**

**ಬೇಕಾಗಿದ್ದಾರೆ**
ಬೆಂಗಳೂರಿನ ಪ್ರಸಿದ್ಧ ಉತ್ತರ ಕರ್ನಾಟಕದ ಹೋಟೆಲ್‌ನಲ್ಲಿ ಬೆಣ್ಣೆದೋಸೆ ಭಟ್ಟರು ಮತ್ತು ಕೆಲಸ ಮಾಡಲು ಮಹಿಳೆಯರು ಹಾಗೂ ಪುರುಷರು ಸಪ್ಲೇಯರ್ಸ್ ಮತ್ತು ಅಡುಗೆ ಕೆಲಸದವರು, ಅಕೌಂಟ್ಸ್ ಪರಿಣತಿ ಹೊಂದಿದವರು ಹಾಗೂ ಮ್ಯಾನೇಜರ್ ಬೇಕಾಗಿದ್ದಾರೆ. ಊಟ,ವಸತಿ ಯೊಂದಿಗೆ ಉತ್ತಮ ಸಂಬಳ + ESI,PF ಕೊಡಲಾಗುವುದು.
**97399 98521, 73497 65221**

**Required**
**Lady candidate for Office work**
Good English communication with computer knowledge
P J Extension, Davangere.
**99006 66122**

**ಸಂಸ್ಕಾರ ತೀರ್ಥ ಯಾತ್ರೆ**
**ದಿ. 28 ಮತ್ತು 29 ಡಿಸೆಂಬರ್ 2024**
ಇಸ್ಕಾನ್ ಮೈಸೂರು ಶ್ರೀ ಶ್ರೀ ಕೃಷ್ಣ ಬಲರಾಮರ ರಥ ಯಾತ್ರೆ ಇತರ ಪ್ರವಾಸಿ ಸ್ಥಳಗಳು ಚಾಮುಂಡಿ ಬೆಟ್ಟ, ಮೇಲುಕೋಟೆ, ಶ್ರೀರಂಗಪಟ್ಟಣ ಮುಂತಾದವು ಆಸಕ್ತಿ ಇರುವವರು ಕರೆ ಮಾಡಿ
**88672 80721**

**Avoid Mosquiteos**
Mosquito Nets for doors & windows
**Sri Gowri Enterprises**
#7C2, 4th cross Near Shaneshwara Temple Karur Industrial Area, P.B Road, Davanagere -577006
**72049 94628**

**HOSPITAL MATTRESS AVAILABLE**
We make all types of sofa cushion fowler mattress ,Semifowler, Pediatric ,Attender,Labour cot, Plain cot mattress we supply by taking order in good quality Swapna cushion works behind Vitthal temple Maharaj pet DVG.
**98445 81966**

**ಬೇಕಾಗಿದ್ದಾರೆ**
**PCMB Lecturers for KCET, NEET Coaching**
**ಸಮೃದ್ಧಿ ಅಕಾಡೆಮಿ, ದಾವಣಗೆರೆ.**
**96202 62361**
**81472 62361**

**ಬೇಕಾಗಿದ್ದಾರೆ**
**ಅಕೌಂಟೆಂಟ್/ Tally**
ಅನುಭವವಿರುವವರು ಬೇಕಾಗಿದ್ದಾರೆ.
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:
**89515 59474**

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
**99863 61250**
**80739 48857**

**ಬಾಡಿಗೆಗೆ ಇದೆ**
Transport Office, Nursing Home, Gowden, School or Collegeಗೆ ಸೂಕ್ತವಾಗಿ ಹಾಗೂ ಮಾರ್ಕೆಟ್‌ಗೆ ಹತ್ತಿರವಾಗಿ ಇರುವ ವ್ಯವಸ್ಥಿತವಾಗಿ ಕಟ್ಟಲಾಗಿರುವ ಪಾರ್ಕಿಂಗ್‌ಗೆ ಅನುಕೂಲವಾಗಿರುವ 7466 sq.feet ನಲ್ಲಿ ಕಟ್ಟಲಾಗಿರುವ 9 ಮಳಿಗೆಗಳು ಕೆ.ಆರ್. ರಸ್ತೆ ದಾವಣಗೆರೆಯಲ್ಲಿ ಬಾಡಿಗೆಗೆ ಸಿಗುತ್ತವೆ. ಸುಸಜ್ಜಿತವಾದ ಕಟ್ಟಡವನ್ನು ಒಳಗೊಂಡಿರುತ್ತವೆ. ಸಂಪರ್ಕಿಸಿ
**89718 20636**
**99002 80022**

**ಬೇಕಾಗಿದ್ದಾರೆ**
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ.
ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ.
**ಆಸಕ್ತರು ಸಂಪರ್ಕಿಸಿ.**
**98861 66432**

**ವೃದ್ಧಾಶ್ರಮ**
**ಶ್ರೀ ಮಾತಾ ಟ್ರಸ್ಟ್, ಶಾಸ್ತ್ರಿಹಳ್ಳಿ**
ತುಂಬಿಗೆರೆ ಪೋಸ್ಟ್, ದಾವಣಗೆರೆ ತಾ।।, ಈ ಸಂಸ್ಥೆ ನಡೆಸುತ್ತಿರುವ ವೃದ್ಧಾಶ್ರಮವನ್ನು ಸೇರಲು ಬಯಸುವ 50 ವರ್ಷ ಮೇಲ್ಪಟ್ಟವರು ಸಂಪರ್ಕಿಸಿ :
**99001 42052, 97319 93770**

**2BHK ಮನೆ ಬಾಡಿಗೆಗಿದೆ**
ಆಂಜನೇಯ ಬಡಾವಣೆ, 17ನೇ ಕ್ರಾಸ್, # 4391/3, ದಶರಥ ರಾಮೇಶ್ವರ ನಿಲಯ, 1ನೇ ಮಹಡಿ, ನೂತನ - ಸಿದ್ದೇಶ್ವರ ಕಾಲೇಜ್ ಹತ್ತಿರ, **(ಸಸ್ಯಹಾರಿಗೆ ಮಾತ್ರ)**
**ಜೆ.ಬಿ. ರಾಜಪ್ಪ**
**94816 88641**

**ಸೈಟು ಮಾರಾಟಕ್ಕಿದೆ**
30x30 ದಕ್ಷಿಣ, 30x35 ಉತ್ತರ, ಹೊಸ ಸರ್.ಎಂ.ವಿ. ಕಾಲೇಜ್ ಹಿಂಭಾಗ,
**83106 43453**
**70266 11468**

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
**94484 39639**

**REQUIRED**
**Accountant for Construction office**
minimum 4 to 5 years experience in GST & Tally
**8050222047, 8951938228**

**TUITIONS**
CBSE / ICSE Boards
Class 8th, 9th, 10th
**CRASH COURSES FOR**
NEET / CET / IIT - JEE
PUC I / PUC II / PCMB
*NEET Long Term / Supplementary Exams*
**97398 65711, 94822 44114**

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**ಬೇಕಾಗಿದ್ದಾರೆ**
ಆಸ್ಪತ್ರೆಯಲ್ಲಿ ನರ್ಸ್‌ಗಳು ಬೇಕಾಗಿದ್ದಾರೆ ನುರಿತ ಅನುಭವವುಳ್ಳ ANM ಮತ್ತು GNM ಆದವರು. ಈ ಕೆಳಗಿನ ಮೊಬೈಲ್ ನಂಬರ್ ಗೆ ತಮ್ಮ ಬಯೋಡೇಟಾ ದೊಂದಿಗೆ ಸಂಪರ್ಕಿಸಿ.
**98450 35710**

**FLAT FOR LEASE**
3 BHK, Sqft : 1888
**AM Apartment**
**Nainika Prime Rose**
Vidyanagar Last city bus stop Davangere.
**89519 38228, 80502 22181**

**ಹುಡುಗರು ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಆರ್ಡರ್, ಸಪ್ಲೈಯರ್, ಮತ್ತು ಕ್ಲೀನಿಂಗ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
**94812 47552**

**ಸೈಟ್ ಮಾರಾಟಕ್ಕಿದೆ**
40x54 ದಕ್ಷಿಣ ಮುಖ. ಇಪ್ಪತ್ತು ಡೋ.ನಂ. ಇರುವ ಸೈಟ್, ಹದಡಿ ರಸ್ತೆ, ಪ್ರಗತಿ ಕಾಂಕ್ರೀಟ್ ಪಕ್ಕದ ರಸ್ತೆ, ಶ್ರೀನಿವಾಸ ನಗರ, 4ನೇ ಕ್ರಾಸ್, ದಾವಣಗೆರೆ. ಗೌಡ್ರು
**83105 03746**

**ಮನೆ ಕೆಲಸಕ್ಕೆ ಬೇಕಾಗಿದ್ದಾರೆ**
ಆಕರ್ಷಕ ಸಂಬಳ ನೀಡಲಾಗುವುದು.
ಸಂಪರ್ಕಿಸಿ :
**94496 43555**

**ಬೇಕಾಗಿದ್ದಾರೆ**
ದಾವಣಗೆರೆ ನಗರದ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಕಾರ್ಯ ನಿರ್ವಹಿಸಲು ಸ್ಟಾಫ್ ನರ್ಸ್ ಹುದ್ದೆಗೆ ANM ಅಥವಾ GNM ಆದ ಮಹಿಳಾ ಅಭ್ಯರ್ಥಿಗಳು ಕೂಡಲೇ ಬೇಕಾಗಿದ್ದಾರೆ. ಬಯೋಡೇಟಾ ದೊಂದಿಗೆ. ಸಂಪರ್ಕಿಸಿ :
**81474 28147**

**Change of Name**
**I Mohammed Rahamath Ulla** Age about 51 years, Resident of #512, Azad Nagar Main Road, Davangere, Karnataka, India577 001. do hereby solemnly affirm on the oath as follows. That I am permanet resident of above mentioned address.
Earlier my name is worngly mentioned as Mohamed **Rahmath Ulla**, so i have changed my name before the B. Lingaraj, Notary bublic, Davangere as **Mohammed Rahamath Ulla,** In Future Henceforth all my Transactions and dealings will be in my new name.
**MOHAMMED RAHAMATH ULLA**

**WANTED FACULTY**
**Sushrutha Arogya Prathistana, Sushrutha Institute of Pharmacy Davangere City**
* M.Pharm - 2 * B.Pharm - 2
Office Accountant (B.Com., / M.com., with Computer Knowledge) -1
**please send Resume to email/whatsapp No.**
Contact :
**9916067627, 7019051299**

**ಕುಕ್ ಬೇಕಾಗಿದ್ದಾರೆ ಬೆಂಗಳೂರಿನಲ್ಲಿ**
ವೆಜ್ & ನಾನ್ ವೆಜ್ ಗೊತ್ತಿರುವ 10 ವರ್ಷ ಅನುಭವವಿರುವವರು ಬೇಕಾಗಿದ್ದಾರೆ. ವಯಸ್ಸು 25 ರಿಂದ 35, ಸಂಬಳ 15,000 ಊಟ, ವಸತಿ ಉಚಿತ. ಸಂಪರ್ಕಿಸಿ :
**97400 98047**

**TUITIONS**
**IGCSE, ICSE, CBSE and State Board from class**
5th to 12th MCC 'A' blcok, Davangere.
**98444 92888**

**ಮನೆ ಲೀಜ್‌ಗಿದೆ**
# 3100/51, ನೂತನ ಕಾಲೇಜ್ ರಸ್ತೆ, 7ನೇ ಮುಖ್ಯರಸ್ತೆ, 34ನೇ ವಾರ್ಡ್, 7ನೇ C ಶಿವಶಕ್ತಿ ಬ್ಲಾಕ್, ಅಳತೆ 30x50 ಅಡಿ, ವಿವೇಕಾನಂದ ಬಡಾವಣೆ, ದಾವಣಗೆರೆ ಉತ್ತರಾಭಿಮುಖ, 1ನೇ ಮಹಡಿ ಡಬಲ್ ಬೆಡ್ ರೂಂ, 2ನೇ ಮಹಡಿ, 3 ಬೆಡ್ ರೂಂ ಮನೆ ಮುನ್ಸಿಪಲ್/ಬೋರ್‌ವೆಲ್ ಇದೆ.
**95387 32909, 98444 56243**

**ವಾಟರ್ ಲೀಕೇಜ್**
**(ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
**95387 77582**
ಕೆಲಸ 100% ಗ್ಯಾರಂಟಿ.

ಶ್ರೀ ಗುರು ಶಾಂತವೀರೇಶ್ವರ ಸೇವಾ ಸಮಿತಿ (ರಿ.)
**ವೀರಶೈವ/ಲಿಂಗಾಯತ ವಧು-ವರರ ಅನ್ವೇಷಣಾ ಕೇಂದ್ರ**
(ಕಳೆದ 21ನೇ ವರ್ಷಗಳ ಸೇವೆಯಲ್ಲಿ)
ದಾವಣಗೆರೆ, ಶಿವಮೊಗ್ಗ, ಸಾಗರ, ಬೆಂಗಳೂರು ಹಾಗೂ 10 ಶಾಖಾ ಕಛೇರಿ ಹೊಂದಿರುವ ನಮ್ಮಲ್ಲಿ ಎಲ್ಲಾ ತರಹದ ವೀರಶೈವ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
**ಮೊ: 94481 59303, 80509 52637**

**ಸಾಲಗಳಿಗಾಗಿ ಸಂಪರ್ಕಿಸಿ**
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
**73385 80345, 99455 22287**

# ನಗರದಲ್ಲಿ ಇಂದಿನಿಂದ ಸಿದ್ದಗಂಗಾ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮಾಚರಣೆ

ದಾವಣಗೆರೆ, ಡಿ.24- ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ನಾಳೆ ದಿನಾಂಕ 25ರಿಂದ 28ರ ವರೆಗೆ ಸಂಸ್ಥೆಯ 55ನೇ ವಾರ್ಷಿಕ ಸಂಭ್ರಮಾಚರಣೆ ನಾಲ್ಕು ದಿನಗಳ ಕಾಲ ನಡೆಯಲಿದೆ ಎಂದು ಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೋಜಾ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾಳೆ ದಿನಾಂಕ 25ರ ಇಂದು ಸಂಜೆ 5.30ಕ್ಕೆ ಮನೋವೈದ್ಯ ಪದ್ಮಶ್ರೀ ಡಾ.ಸಿ.ಆರ್. ಚಂದ್ರಶೇಖರ್ ಅವರು ಕಾರ್ಯಕ್ರಮವನ್ನು ಉದ್ಘಾಟಿಸುವರು ಎಂದು ಹೇಳಿದರು. ಇದೇ ವೇಳೆ ರಾಜ್ಯಮಟ್ಟದ ಪ್ರತಿಷ್ಠಿತ ಎಂ. ಎಸ್.ಎಸ್ ಕ್ವಿಜ್ ವಿಜೇತರಣೆ, 2024ನೇ ಸಾಲಿನ 10ನೇ ತರಗತಿ ಸ್ಟೇಟ್ ಮತ್ತು ಸಿಬಿಎಸ್‌ಇ ಬೋರ್ಡ್ ಪರೀಕ್ಷೆಯಲ್ಲಿ 90ಕ್ಕಿಂತ ಹೆಚ್ಚು ಅಂಕ ಪಡೆದವರಿಗೆ 'ಸಿದ್ಧಗಂಗಾ ಪ್ರತಿಭಾ ಪುರಸ್ಕಾರ' ಮತ್ತು ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್ ಹೇಮಂತ್, ನಿರ್ದೇಶಕ ಡಾ. ಜಯಂತ್, ಕಾಲೇಜಿನ ಪ್ರಾಚಾರ್ಯೆ ವಾಣಿಶ್ರೀ, ಸಿ.ಬಿ.ಎಸ್.ಇ ಪ್ರಾಚಾರ್ಯೆ ಗಾಯತ್ರಿ ಚಿಮ್ಮಡ್, ಪ್ರೌಢ ಶಾಲೆಯ ಮುಖ್ಯಶಿಕ್ಷಕಿ ಕೆ.ಎಸ್ ರೇಖಾರಾಣಿ ಹಾಗೂ ರಾಮ್ ಮನೋಹರ್ ಇದ್ದರು.

# ಸೊಪ್ಪಿನ ಮಾರುಕಟ್ಟೆಗೆ ನಗರದಲ್ಲೇ ಸ್ಥಳ ಕಲ್ಪಿಸಿ

ದಾವಣಗೆರೆ, ಡಿ.24- ಇಲ್ಲಿನ ಕೆ.ಆರ್. ಮಾರುಕಟ್ಟೆಯಲ್ಲಿನ ಸೊಪ್ಪಿನ ಸಂತೆಯನ್ನು ಎ.ಪಿ.ಎಂ.ಸಿಗೆ ಸ್ಥಳಾಂತರ ಮಾಡುವುದರಿಂದ ಸೊಪ್ಪಿನ ಮಾರಾಟಗಾರರಿಗೆ ತೊಂದರೆ ಆಗಲಿದೆ ಎಂದು ಸಂಚಾರಿ ಸೊಪ್ಪಿನ ಗಾಡಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ರವಿ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೊಪ್ಪಿನ ಮಾರಾಟಗಾರರಲ್ಲಿ ಶೇ.80ರಷ್ಟು ಮಹಿಳೆಯರೇ ಇದ್ದು, ಇದರಲ್ಲಿ ವಯೋವೃದ್ಧರು ಹಾಗೂ ವಿಧವೆಯರು ಸೊಪ್ಪಿನ ವ್ಯಾಪಾರದಿಂದಲೇ ಜೀವನ ನಡೆಸುತ್ತಿದ್ದಾರೆ. ಹಾಗಾಗಿ ಮಾರುಕಟ್ಟೆ ಸ್ಥಳಾಂತರದಿಂದ ಇವರೆಲ್ಲರಿಗೂ ನಿತ್ಯ ತೊಂದರೆ ಆಗಲಿದೆ ಎಂದರು.

ಈಗಾಗಲೇ ಜಿಲ್ಲಾಧಿಕಾರಿಗಳು ಜ.10ರ ಒಳಗಾಗಿ ಸೊಪ್ಪಿನ ಮಾರುಕಟ್ಟೆ ಸ್ಥಳಾಂತರಿಸಲು ಗಡುವು ನೀಡಿದ್ದಾರೆ. ಪ್ರತಿ ನಿತ್ಯ ಐದಾರು ಕಿ.ಮೀ ಸಂಚರಿಸುವುದರಿಂದ ದುಡಿಮೆಗಿಂತ ಆಟೋ ವೆಚ್ಚವೇ ಹೆಚ್ಚಾಗುತ್ತದೆ ಎಂದು ತಮ್ಮ ಅಳಲು ತೋಡಿದರು.

ಸಚಿವರು ಹಾಗೂ ಅಧಿಕಾರಿಗಳು, ಸೊಪ್ಪಿನ ವ್ಯಾಪಾರಸ್ಥರ ಹಿತ ಕಾಪಾಡುವ ನಿಟ್ಟಿನಲ್ಲಿ ಪ್ರಸ್ತುತ ಸೂಚಿಸಿದ ಎತ್ತಿನ ಸಂತೆಯ ಸ್ಥಳ ಹೊರತು ಪಡಿಸಿ, ಪಾಲಿಕೆ ವ್ಯಾಪ್ತಿಯ ನಗರದ ಭಾಗದಲ್ಲೇ ಸೂಕ್ತ ಜಾಗ ಕಲ್ಪಿಸಬೇಕೆಂದು ಮನವಿ ಮಾಡಿದರು.

ತೆರವುಗೊಂಡ ತಾತ್ಕಾಲಿಕ ಬಸ್ ನಿಲ್ದಾಣದಲ್ಲಿ ಸೊಪ್ಪಿನ ವ್ಯಾಪಾರಸ್ಥರಿಗೆ ಸ್ಥಳಾವಕಾಶ ನೀಡಿದರೆ ಎಲ್ಲರಿಗೂ ಅನುಕೂಲ ಆಗಲಿದೆ ಎಂದು ಸಚಿವರಿಗೆ ವಿನಂತಿಸಿದರು.

ಈ ವೇಳೆ ಸಂಘದ ನಿರ್ದೇಶಕ ಹೊನ್ನಪ್ಪ, ಪ್ರಧಾನ ಕಾರ್ಯದರ್ಶಿ ಹೆಚ್.ಸಿ. ಮಲ್ಲಪ್ಪ, ಸದಸ್ಯೆ ಹೊನ್ನಮ್ಮ, ನಿಂಗಪ್ಪ ಸುದ್ದಿಗೋಷ್ಠಿಯಲ್ಲಿ ಇದ್ದರು.

# ಅಮಿತ್ ಷಾ ವಜಾಗೊಳಿಸಲು ಜಿಲ್ಲಾ ಕಾಂಗ್ರೆಸ್ ಆಗ್ರಹ



ದಾವಣಗೆರೆ, ಡಿ.24- ಸಂವಿಧಾನ ಶಿಲ್ಪಿ ಡಾ. ಅಂಬೇಡ್ಕರ್ ಅವರನ್ನು ಅವಮಾನಿಸಿದ ಅಮಿತ್ ಷಾ, ಕೂಡಲೇ ತಮ್ಮ ಹುದ್ದೆಗೆ ರಾಜಿನಾಮೆ ನೀಡಬೇಕೆಂದು ಒತ್ತಾಯಿಸಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ನಗರದ ಅಂಬೇಡ್ಕರ್ ವೃತ್ತದಲ್ಲಿ ಮಂಗಳವಾರ ಸಂಜೆ ಪ್ರತಿಭಟನೆ ನಡೆಯಿತು.

ಪ್ರತಿಭಟನಾ ಸ್ಥಳಕ್ಕೆ ಧಾವಿಸಿದ ಪಕ್ಷದ ಮುಖಂಡರು, ಕಾರ್ಯಕರ್ತರು, ಮಹಿಳಾ ಕಾರ್ಯಕರ್ತೆಯರು ಹಾಗೂ ದಲಿತ ಸಮಾಜ ಸಂಘಟನೆ, ಮುಖಂಡರು ಕೇಂದ್ರ ಗೃಹ ಸಚಿವರ ವಿರುದ್ಧ ಘೋಷಣೆ ಕೂಗುವ ಮೂಲಕ ಆಕ್ರೋಶ ಹೊರಹಾಕಿದರು.

ಇದೇ ವೇಳೆ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಹಾಗೂ ಮೇಯರ್ ಕೆ. ಚಮನ್‌ಸಾಬ್ ಅವರು ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿದರು.

ಈ ವೇಳೆ ಮಾತನಾಡಿದ ಪ್ರಭಾ ಮಲ್ಲಿಕಾರ್ಜುನ್ ಅವರು, ಕಳೆದ ನ.26ನೇ ತಾರೀಖಿನಂದು ಸಂವಿಧಾನದ 75ನೇ ವರ್ಷದ ದಿನ ಆಚರಿಸಿದ್ದೇವೆ. ಇಂತಹ ಸುಸಂದರ್ಭದಲ್ಲಿ ರಾಜ್ಯಭವನದಲ್ಲಿ ಸಂವಿಧಾನ ಶಿಲ್ಪಿಗೆ ಅವಮಾನಿಸಿದ್ದನ್ನು ಗಂಭೀರವಾಗಿ ಖಂಡಿಸುತ್ತೇನೆ ಎಂದರು.

ಸಮಾಜದಲ್ಲಿನ ಎಲ್ಲರಿಗೂ ಸಮಾನತೆ ಹಾಗೂ ಸಮಾನ ಹಕ್ಕು ಕೊಟ್ಟಿರುವುದೇ ಅಂಬೇಡ್ಕರ್ ಬರೆದ ಸಂವಿಧಾನ. ಆದರೆ ಅಮಿತ್ ಷಾ ಅವರು ಸಂವಿಧಾನ ಶಿಲ್ಪಿಗೆ ಅವಮಾನಿಸುವ ಕಾರ್ಯಮಾಡಿದ್ದಾರೆ. ಹಾಗಾಗಿ ಷಾ ಅವರು ಕೂಡಲೇ ತಮ್ಮ ಕೇಂದ್ರ ಸಚಿವ ಸಂಪುಟಕ್ಕೆ ರಾಜಿನಾಮೆ ನೀಡಬೇಕು ಎಂದು ಆಗ್ರಹಿಸಿದರು.

ಅಂಬೇಡ್ಕರ್, ಅಂಬೇಡ್ಕರ್ ಎಂದು ಐದು ಬಾರಿ ಅವರ ಹೆಸರನ್ನು ಅವಮಾನಿಸುವ ರೀತಿಯಲ್ಲಿ ಉಚ್ಛಾರ ಮಾಡಿದ್ದಾರೆ. ಹಾಗಾಗಿ ದೇಶದ ಜನತೆಯ ಮುಂದೆ ಅವರು ಬಹಿರಂಗವಾಗಿ ಕ್ಷಮೆಯಾಚಿಸುವಂತೆ ಹಾಗೂ ಸಚಿವ ಸಂಪುಟದಿಂದ ವಜಾಗೊಳಿಸಬೇಕೆಂದು ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸುತ್ತೇವೆ ಎಂದರು.

ಜಿಲ್ಲಾಧ್ಯಕ್ಷ ಹೆಚ್.ಬಿ. ಮಂಜಪ್ಪ ಮಾತನಾಡಿ, ಅಮಿತ್ ಷಾ ಅಂಬೇಡ್ಕರ್ ಅವರ ಬಗ್ಗೆ ಅಗೌರವ ತೋರಿದ್ದಾರೆ. ಹಾಗಾಗಿ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಬೇಕು ಎಂದು ಒತ್ತಾಯಿಸಿದರು.

ಬಿಜೆಪಿಯವರು ಹಿಂದಿನಿಂದಲೂ ಅಂಬೇಡ್ಕರ್ ಅವರನ್ನು ವಿರೋಧ ಮಾಡುತ್ತಲೇ ಬಂದಿದ್ದಾರೆ. ಇವರಿಗೆ ಸಂವಿಧಾನ, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಬಗ್ಗೆ ಗೌರವವಿಲ್ಲ. ಜನಗಳ ಮಧ್ಯೆ ಜಾತಿ ವಿಷ ಬೀಜ ಬಿತ್ತಿ ಜಗಳ ಹಚ್ಚುತ್ತಿದ್ದಾರೆ. ಇಂತಹ ಪಕ್ಷವನ್ನು ರಾಜ್ಯದಿಂದ ಓಡಿಸಿದ್ದೇವೆ. ಕೇಂದ್ರದಲ್ಲೂ ಈ ಪಕ್ಷವನ್ನು ಜನರು ತಿರಸ್ಕರಿಸಬೇಕು ಎಂದು ಆಕ್ರೋಶ ವ್ಯಕ್ತಪಡಿಸಿದರು.

ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಪಾಲಿಕೆ ಉಪಮೇಯರ್ ಸೋಗಿ ಶಾಂತ ಕುಮಾರ್, ಜಿಲ್ಲಾ ಕಾಂಗ್ರೆಸ್ ಸಾಮಾಜಿಕ ನ್ಯಾಯ ಸಮಿತಿ ಅಧ್ಯಕ್ಷ ಆರ್. ಪರಮೇಶ್, ಮುಖಂಡರುಗಳಾದ ನಂದಿಗಾವಿ ಶ್ರೀನಿವಾಸ್, ಕೆ.ಜಿ. ಶಿವಕುಮಾರ್, ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಡೊಲಿ ಚಂದ್ರು, ಅನಿತಾಬಾಯಿ, ಆಶಾ ಉಮೇಶ್, ಸುಧಾ ಇಟ್ಟಿಗುಡಿ, ಮೀನಾಕ್ಷಿ ಜಗದೀಶ್, ಅಬ್ದುಲ್ ಲತೀಫ್ ಹಾಗೂ ದಾಕ್ಷಾಯಿಣಮ್ಮ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.





## ಗಾಳಿ ದುರ್ಗಾಂಬಿಕಾ ದೇವಸ್ಥಾನದಲ್ಲಿ ಕಾರ್ತಿಕ

ದಾವಣಗೆರೆ ನಗರದ ವೆಂಕಾ ಭೋವಿ ಕಾಲೋನಿಯಲ್ಲಿರುವ ಶ್ರೀ ಗಾಳಿ ದುರ್ಗಾಂಬಿಕಾ ದೇವಿ ದೇವಸ್ಥಾನದಲ್ಲಿ ಇಂದು ರಾತ್ರಿ ಕಡೇ ಕಾರ್ತಿಕೋತ್ಸವವು ಭಕ್ತರ ಶ್ರದ್ಧಾ - ಭಕ್ತಿಯೊಂದಿಗೆ ನಡೆಯಿತು.

# ಚುನಾವಣಾ ನಿಯಮಗಳ ತಿದ್ದುಪಡಿ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಕಾಂಗ್ರೆಸ್ ಅರ್ಜಿ

ನವದೆಹಲಿ, ಡಿ. 24- ಚುನಾವಣಾ ನಿಯಮಗಳಿಗೆ ಇತ್ತೀಚೆಗೆ ತಂದಿರುವ ತಿದ್ದುಪಡಿಗಳನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಕಾಂಗ್ರೆಸ್ ರಿಟ್ ಅರ್ಜಿಯನ್ನು ಸಲ್ಲಿಸಿದೆ.

ಚುನಾವಣೆ ಸಂದರ್ಭದಲ್ಲಿ ಬಳಸಲಾಗುವ ಸಿಸಿಟಿವಿ ಕ್ಯಾಮರಾ ಹಾಗೂ ವೆಬ್ ಕಾಸ್ಟಿಂಗ್ ಸೇರಿದಂತೆ ಕೆಲ ಎಲೆಕ್ಟ್ರಾನಿಕ್ ದಾಖಲೆಗಳನ್ನು ಸಾರ್ವಜನಿಕರು ಪಡೆಯುವುದರ ಮೇಲೆ ಕೇಂದ್ರ ಸರ್ಕಾರ ನಿರ್ಬಂಧ ಹೇರಿತ್ತು. ಈ ದೃಶ್ಯಗಳ ದುರ್ಬಳಕೆ ತಡೆಯಲು ಕ್ರಮ ತೆಗೆದುಕೊಂಡಿರುವುದಾಗಿ ಸರ್ಕಾರ ತಿಳಿಸಿತ್ತು.

ಈ ಬದಲಾವಣೆಯ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ಚುನಾವಣಾ ಪ್ರಕ್ರಿಯೆಯ ಪ್ರಾಮಾಣಿಕತೆ ವೇಗವಾಗಿ ಕರಗುತ್ತಿದೆ. ಇದನ್ನು ಮತ್ತೆ ನೆಲೆಗೊಳಿಸಲು ಸುಪ್ರೀಂ ಕೋರ್ಟ್ ಕ್ರಮ ತೆಗೆದುಕೊಳ್ಳುವ ಆಶಾ ಭಾವನೆ ಇದೆ ಎಂದಿದ್ದಾರೆ.

ಚುನಾವಣಾ ಆಯೋಗವು ಸಂವಿಧಾನಿಕ ಸಂಸ್ಥೆಯಾಗಿದೆ. ಮುಕ್ತ ಹಾಗೂ ನ್ಯಾಯಸಮ್ಮತ ಚುನಾವಣೆ ನಡೆಸಲು ಚುನಾವಣಾ ಆಯೋಗ ರೂಪಿಸಲಾಗಿದೆ. ಸಾರ್ವಜನಿಕರ ಸಹಭಾಗಿತ್ವ ಇಲ್ಲದೇ ಏಕಪಕ್ಷೀಯವಾಗಿ ಚುನಾವಣೆಗಳನ್ನು ನಡೆಸಲು ಸಾಧ್ಯವಾಗದು. ಮಹತ್ವದ ಕಾನೂನನ್ನು ಸರ್ಕಾರ ತಿದ್ದುಪಡಿ ಮಾಡಿದೆ ಎಂದವರು ಆಕ್ಷೇಪಿಸಿದ್ದಾರೆ.

## ಹಿರೇತೊಗಲೇರಿಯಲ್ಲಿ ಇಂದು ಮಹೇಶ್ವರ ಜಾತ್ರೆ

ದಾವಣಗೆರೆ ತಾಲ್ಲೂಕು ಹಿರೇತೊಗಲೇರಿ ಗ್ರಾಮದಲ್ಲಿ ಇಂದು ಶ್ರೀ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಇಂದು ನೆರವೇರಲಿದೆ. ಸಂಜೆ ದೇವರನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯ ಮೂಲಕ ಶ್ರೀ ಬಸವೇಶ್ವರ ಸ್ವಾಮಿಯನ್ನು ಗುಡಿದುಂಬಿಸಿಕೊಳ್ಳಲಾಗುವುದು.

## ಬಸವನಾಳು ಗ್ರಾಮದಲ್ಲಿ ಇಂದು ಮಹೇಶ್ವರ ಜಾತ್ರೆ

ದಾವಣಗೆರೆ ತಾಲ್ಲೂಕಿನ ಬಸವನಾಳು ಗ್ರಾಮದಲ್ಲಿ ಇಂದು ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನೆರವೇರಲಿದೆ. ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

# ಸೊಪ್ರೊಶೈನ್ ಕಾನ್ಸೆಪ್ಟ್ ಶಾಲೆಯ ಸೈಮನ್ ಫ್ರಾನ್ಸಿಸ್ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ



ದಾವಣಗೆರೆ, ಡಿ.24- ತಾಲ್ಲೂಕಿನ ತರಳಬಾಳು ನಗರ 6ನೇ ಮೈಲಿಕಲ್ಲಿನಲ್ಲಿರುವ ಸೊಪ್ರೊಶೈನ್ ಕಾನ್ಸೆಪ್ಟ್ ಶಾಲೆಯ ಪ್ರಾಂಶುಪಾಲ ಸೈಮನ್ ಫ್ರಾನ್ಸಿಸ್ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿ ದೊರೆತಿದೆ. ಬೆಂಗಳೂರಿನಲ್ಲಿ ಈಚೆಗೆ ನಡೆದ ಎಜುಕೇಷನ್ ಟುಡೇ ಸ್ಕೂಲ್ ಮೆರಿಟ್ ಅವಾರ್ಡ್ಸ್ ಕಾರ್ಯಕ್ರಮದಲ್ಲಿ ಸೈಮನ್ ಫ್ರಾನ್ಸಿಸ್ ಅವರ ಸಾಧನೆಗೆ ಈ ಪ್ರಶಸ್ತಿ ದೊರೆತಿದೆ.

## ದೀಕ್ಷಿತ್‌ಗೆ ಸಂತಾಪ

ದಾವಣಗೆರೆ, ಡಿ.24- ಬ್ರಾಹ್ಮಣ ಸಮಾಜ ಸೇವಾ ಸಂಘದ ನಿರ್ದೇಶಕರೂ, ಶಂಕರ ಸೇವಾ ಸಂಘದ ಮಾಜಿ ಕಾರ್ಯದರ್ಶಿಗಳೂ ಆಗಿದ್ದ ಉಮಾಕಾಂತ ದೀಕ್ಷಿತ್ ಅವರು ಮೊನ್ನೆ ನಿಧನರಾಗಿದ್ದು, ಅವರಿಗೆ ಬ್ರಾಹ್ಮಣ ಸಮಾಜ ಸೇವಾ ಸಂಘ, ಬ್ರಾಹ್ಮಣ ವಿದ್ಯಾರ್ಥಿ ನಿಲಯ ಸಂತಾಪ ವ್ಯಕ್ತಪಡಿಸಿದೆ.

## 27ರಂದು ಕಾಳಿಕಾದೇವಿ ಕಾರ್ತಿಕೋತ್ಸವ

ದಾವಣಗೆರೆ, ಡಿ.24- ಶ್ರೀ ಕಾಳಿಕಾದೇವಿ ಕಾರ್ತಿಕೋತ್ಸವ 27ರ ಶುಕ್ರವಾರದಂದು ಸಂಜೆ 8 ಗಂಟೆಗೆ ನಡೆಯಲಿದೆ.

ವಿಶ್ವಕರ್ಮದ ಸಮಾಜದ ಹಾಗೂ ದೊಡ್ಡಬಾತಿ ಗ್ರಾಮಸ್ಥರು ಪಾಲ್ಗೊಳ್ಳಬೇಕೆಂದು ವಿನಂತಿಸಲಾಗಿದೆ.

# ಬಿಜೆಪಿಯಲ್ಲಿ ಒಳ ಒಪ್ಪಂದ ಮಾಡಿಕೊಂಡವರ ಹೆಸರು ಬಹಿರಂಗ ಪಡಿಸಿ : ಯಶವಂತರಾವ್

ದಾವಣಗೆರೆ, ಡಿ.24- ಜಿಲ್ಲೆಯಲ್ಲಿ ಕಾಂಗ್ರೆಸ್-ಬಿಜೆಪಿ ನಡುವೆ ಒಳಒಪ್ಪಂದ ಆಗಿದೆ ಎಂಬ ಹೇಳಿಕೆಯನ್ನು ಚನ್ನಗಿರಿ ಶಾಸಕ ಬಸವರಾಜ್ ಶಿವಗಂಗಾ ನೀಡಿದ್ದು, ಬಿಜೆಪಿಯಲ್ಲಿ ಯಾರು ಒಳಒಪ್ಪಂದ ಮಾಡಿಕೊಂಡಿದ್ದಾರೆ ಎಂಬುದನ್ನು ಹೆಸರು ಸಹಿತ ಬಹಿರಂಗ ಪಡಿಸಬೇಕೆಂದು ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಯಶವಂತರಾವ್ ಜಾಧವ್ ಒತ್ತಾಯಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿಯ ಎಲ್ಲಾ ಮುಖಂಡರು, ಕಾರ್ಯಕರ್ತರು ಹೊಂದಾಣಿಕೆ ರಾಜಕೀಯ ಮಾಡುತ್ತಿಲ್ಲ. ನಿಮ್ಮ ಹೇಳಿಕೆ ಯಿಂದ ಜಿಲ್ಲೆಯ ಜನ ಬಿಜೆಪಿಯನ್ನು ಅನುಮಾನದಿಂದ ನೋಡುವ ಹಾಗೆ ಮಾಡುವುದು ಬೇಡ. ಆದ್ದರಿಂದ ಕಾಂಗ್ರೆಸ್ ಸಚಿವರೊಂದಿಗೆ ಒಳ ಒಪ್ಪಂದ ಮಾಡಿಕೊಂಡ ಬಿಜೆಪಿಯ ಮುಖಂಡರು ಹಾಗೂ ಕಾರ್ಯಕರ್ತರು ಹೆಸರು ಬಹಿರಂಗಪಡಿಸಬೇಕು ಎಂದರು.


ಬಿಜೆಪಿಯಲ್ಲಿ ಕೆಲವರು ಸ್ವಪಕ್ಷಕ್ಕೆ ದ್ರೋಹ ಬಗೆದು ತಮಗೆ ತಾವೇ ಪ್ರಾಮಾಣಿಕರೆಂದು ತಾವೇ ಶಹಬ್ಬಾಸ್‌ಗಿರಿ ಪಡೆದುಕೊಳ್ಳುತ್ತಿದ್ದಾರೆ. ಅವರ ಮುಖವಾಡ ಕಳಚ ಬೇಕಾಗಿದೆ. ಪಕ್ಷದ ತತ್ವ ಸಿದ್ಧಾಂತ ಬಲಿಕೊಟ್ಟವರ ಬಣ್ಣ ಬಯಲು ಮಾಡಲು ಚನ್ನಗಿರಿ ಶಾಸಕರು ಹೆಸರು ತಿಳಿಸಬೇಕೆಂದರು.

ಬಿಜೆಪಿಯಲ್ಲಿ ಕೆಲವರು ಹೆಳವರ ವೃತ್ತಿಯ ರೀತಿಯಲ್ಲಿ ರಾಜಕಾರಣ ಮಾಡುತ್ತಿದ್ದಾರೆ. ಹೆಳವರು ತಮ್ಮ ಹೊಟ್ಟೆಪಾಡಿಗಾಗಿ ಹಿಂದಿನದ್ದನ್ನು ತಿಳಿಸುವ ವೃತ್ತಿ ಮಾಡಿದರೆ, ಬಿಜೆಪಿಯಲ್ಲಿರುವ ಹೆಳವರು ತಮ್ಮ ಸ್ವಾರ್ಥ ರಾಜಕೀಯಕ್ಕಾಗಿ ಯಡಿಯೂರಪ್ಪ, ರವೀಂದ್ರನಾಥ್ ಅವರ ಬಗ್ಗೆ ಹೇಳಿ, ಅವರು ಹಾಗೆ ಪಕ್ಷ ಕಟ್ಟಿದರು, ಹೀಗೆ ಪಕ್ಷ ಕಟ್ಟಿದರು ಎನ್ನುತ್ತ ಹೊರಟಿದ್ದಾರೆ. ಹೀಗೆ ಹೇಳುವವರೆಲ್ಲ ಆಗ ಎಲ್ಲಿದ್ದರು ಎಂದು ಕೇಳಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ ಎಂದರು.

ಸುಳ್ಳು ಬಹಳ ದಿನ ಉಳಿಯುವುದಿಲ್ಲ. ಬಯಲಿಗೆ ಬಂದೇ ಬರುತ್ತದೆ. ಒಮ್ಮೆ ಕಾಂಗ್ರೆಸ್‌ನ ಸಚಿವರೇ ತಮ್ಮ ಬಿಜೆಪಿ ಮುಖಂಡರೋರ್ವರು ಬಂದಿದ್ದರು ಎಂಬುದನ್ನು ಬಹಿರಂಗಪಡಿಸಿದ್ದಾರೆ. ಇನ್ನೊಮ್ಮೆ ಅವರೇ ಒಳ ಒಪ್ಪಂದ ಬಯಲಿಗೆಳೆಯುತ್ತಾರೆ ಎಂದು ಜಾಧವ್ ಹೇಳಿದರು.

ಅಣಬೇರು ಶಿವಮೂರ್ತಿ, ನೀಲಗುಂದ ರಾಜು, ಗೋವಿಂದರಾಜ್, ಟಿಂಕರ್ ಮಂಜಣ್ಣ, ಗುರು ಸೋಗಿ, ಶಿವನಗೌಡ ಪಾಟೀಲ್ ಇತರರು ಸುದ್ದಿಗೋಷ್ಠಿಯಲ್ಲಿದ್ದರು.

## ನಗರದಲ್ಲಿ ಇಂದು ಕಾಯಿಪೇಟೆ ಬಸವೇಶ್ವರ ಮಹೇಶ್ವರ ಜಾತ್ರೆ



ಕಾಯಿಪೇಟೆಯ ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಂಘದ ವತಿಯಿಂದ ಇಂದು ಪೂಜಾ ಇಂಟರ್‌ನ್ಯಾಷನಲ್ ಪಕ್ಕದಲ್ಲಿರುವ ಶ್ರೀ ಮಹೇಶ್ವರ ಸ್ವಾಮಿಯ ನಿವೇಶನದಲ್ಲಿ ಶ್ರೀ ಮಹೇಶ್ವರ ಸ್ವಾಮಿಯ ಜಾತ್ರೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶ್ರೀ ಬಸವೇಶ್ವರ ದೇವಸ್ಥಾನ ಸೇವಾ ಸಮಿತಿ ತಿಳಿಸಿದೆ.

## ಬಸಾಪುರದಲ್ಲಿ ಇಂದು ಮಹೇಶ್ವರ ಜಾತ್ರೆ

ದಾವಣಗೆರೆ ಸಮೀಪದ ಬಸಾಪುರ ಗ್ರಾಮದಲ್ಲಿ ಇಂದು ಶ್ರೀ ಮಹೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಲಿದೆ.

ಇಂದು ಬೆಳಿಗ್ಗೆ 11 ಗಂಟೆಯಿಂದ ಇಡೀ ದಿನ ಅನ್ನ ಸಾರು ಮತ್ತು ಅನ್ನ ಮಜ್ಜಿಗೆ ಸಾರು ಪ್ರಸಾದ ಸೇವೆ ನಡೆಯಲಿದೆ ಎಂದು ಮುಖ್ಯ ಟ್ರಸ್ಟಿಗಳಾದ ಯು.ಎಂ. ಸ್ವರೂಪಾನಂದ, ಸಿದ್ಧರಾಮೇಶ್ವರ ಆಲದಹಳ್ಳಿ ತಿಳಿಸಿದ್ದಾರೆ.

## ನಗರದಲ್ಲಿ ಇಂದು ಅನ್‌ಮೋಲ್ ಉತ್ಸವ

ಅನ್‌ಮೋಲ್ ವಿದ್ಯಾಸಂಸ್ಥೆಯಲ್ಲಿ ಇಂದು ಸಂಜೆ 5ಕ್ಕೆ ಅನ್‌ಮೋಲ್ ಉತ್ಸವ 2024 ನಡೆಯಲಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಅಧ್ಯಕ್ಷ ಸಿ.ಜಿ. ದಿನೇಶ್ ವಹಿಸುವರು.

## ಮಲೇಬೆನ್ನೂರಿನಲ್ಲಿ ಮಹೇಶ್ವರಜಾತ್ರೆ



ಮಲೇಬೆನ್ನೂರು, ಡಿ.24 - ಇಲ್ಲಿನ ಶ್ರೀ ಮಹೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಶ್ರೀ ಮಹೇಶ್ವರಸ್ವಾಮಿ ಜಾತ್ರೆಯನ್ನು ಮಲೇಬೆನ್ನೂರು ಕೊಮಾರನಹಳ್ಳಿ ಮತ್ತು ದಿಬ್ಬದಹಳ್ಳಿ ಗ್ರಾಮಗಳ ಭಕ್ತರು ಸೇರಿ ಸಂಭ್ರಮದಿಂದ ಆಚರಿಸಿದರು. ದೇವರಿಗೆ ಹಣ್ಣು -ಕಾಯಿ ಪೂಜೆ ನೆರವೇರಿಸಿದ ನಂತರ ಭಕ್ತರಿಗೆ ಅಕ್ಕಿ ಹುಗ್ಗಿ ಮತ್ತು ಅನ್ನ ,ಹಾಲು, ಬಾಳೆಹಣ್ಣು ಪ್ರಸಾದ ನೀಡಲಾಯಿತು .


Nutana Education Association (R.)

**NUTANA COLLEGE OF EDUCATION**

LIC Colony, Davangere - 577 004, Ph : 08192 263172

**WALK IN INTERVIEW**

APPLICATIONS ARE INVITED FROM THE QUALIFIED CANDIDATS FOR THE FOLLOWING POSTS.

| Sl No | Name Of The Post | Qualification | No. of Posts |
|---|---|---|---|
| 01 | Assistant Professor | M.Ed., M.Sc., Physics, Mathematics NET/SLET | 01 |
| 02 | Assistant Professor | M.Ed., M.Sc., Chemistry, Biology NET/SLET | 01 |
| 03 | Assistant Professor | M.Ed., M.A. Kannada NET/SLET | 01 |
| 04 | Assistant Professor | M.Ed., M.A. English NET/SLET | 01 |
| 05 | Assistant Professor | M.Ed., M.A. History NET/SLET | 01 |

DATE OF INTERVIEW : 09.01.2025, THURSDAY TIME : 11.00 AM, VENUE : COLLEGE PREMISES

Note : 1) The Coandidates have to produce all the original testimonies at the time of interview. 2) M.Ed., & M.Sc., Chemistry, Biology, Physics, Mathematics, English, Kannada and History Minimum 55 % 3) Minimum 5 Years teaching Experience for Assitstant Professor Post 4) TA/DA will be not pay

**Contact Nos. : 94830 16969/81975 69455**

Sd/- N. Parashuramanagowda, President — Sd/- Dr. Divakara Naik K.S., Principal



**ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ದಾವಣಗೆರೆ**

ಕುವೆಂಪು ರಸ್ತೆ, ಕೆ.ಬಿ. ಬಡಾವಣೆ, ದಾವಣಗೆರೆ - 577002

**ನೂತನ ಬ್ಯಾಂಕ್ ಕಟ್ಟಡದ ಶಂಕುಸ್ಥಾಪನೆ ಸಮಾರಂಭದ ಆಹ್ವಾನ ಪತ್ರಿಕೆ**

**ದಿನಾಂಕ : 26.12.2024ರಂದು ಗುರುವಾರ, ಸಮಯ : ಬೆಳಿಗ್ಗೆ 11.00 ಗಂಟೆಗೆ**

**ಸ್ಥಳ : ಶ್ರೀ ರವೀಂದ್ರನಾಥ ಬಡಾವಣೆ, ಸರ್ಕ್ಯೂಟ್ ಹೌಸ್ ಪಕ್ಕ, ಜಿಲ್ಲಾ ಪಂಚಾಯತಿ ಕಛೇರಿ ಎದುರು, ಎನ್.ಹೆಚ್. - 4, ದಾವಣಗೆರೆ**

**ಶಂಕುಸ್ಥಾಪನೆ :** **ಸನ್ಮಾನ್ಯ ಡಾ. ಶಿವಶಂಕರಪ್ಪನವರು,** ಮಾಜಿ ಸಚಿವರು, ಹಾಲಿ ಶಾಸಕರು, ದಾವಣಗೆರೆ ವಿಧಾನಸಭಾ ಕ್ಷೇತ್ರ
**ಸನ್ಮಾನ್ಯ ಶ್ರೀ ಎಸ್.ಎ. ರವೀಂದ್ರನಾಥ್‌ರವರು,** ಮಾಜಿ ಸಚಿವರು, ದಾವಣಗೆರೆ

**ಮುಖ್ಯ ಅತಿಥಿಗಳು :** **ಸನ್ಮಾನ್ಯ ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್‌ರವರು**
ಗಣಿ, ಭೂ ವಿಜ್ಞಾನ ಮತ್ತು ತೋಟಗಾರಿಕೆ ಸಚಿವರು ಹಾಗೂ ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ
**ಸನ್ಮಾನ್ಯ ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್‌ರವರು,** ಲೋಕಸಭಾ ಸದಸ್ಯರು, ದಾವಣಗೆರೆ.
**ಸನ್ಮಾನ್ಯ ಶ್ರೀ ಜಿ.ಎಂ. ಸಿದ್ದೇಶ್‌ರವರು,** ಮಾಜಿ ಸಂಸದರು, ದಾವಣಗೆರೆ.
**ಸನ್ಮಾನ್ಯ ಶ್ರೀ ಷಡಕ್ಷರಿ ಕೆ.,** ಶಾಸಕರು ಅಧ್ಯಕ್ಷರು, ರಾಜ್ಯ ಭೂ ಬ್ಯಾಂಕ್ (ಕಾಸ್ಕಾರ್ಡ್)
**ಸನ್ಮಾನ್ಯ ಶ್ರೀ ಕೆ.ಎಸ್. ಬಸವಂತಪ್ಪನವರು,** ಶಾಸಕರು, ಮಾಯಾಕೊಂಡ ವಿಧಾನಸಭಾ ಕ್ಷೇತ್ರ
**ಸನ್ಮಾನ್ಯ ಶ್ರೀ ಕೆ.ಎಸ್. ನವೀನ್‌ಕುಮಾರ್,** ವಿಧಾನ ಪರಿಷತ್ ಸದಸ್ಯರು
**ಸನ್ಮಾನ್ಯ ಶ್ರೀ ಕೆ.ಉಳವಪ್ಪ ತಿ. ದಾಸನೂರ,** ಉಪಾಧ್ಯಕ್ಷರು, ರಾಜ್ಯ ಭೂ ಬ್ಯಾಂಕ್ (ಕಾಸ್ಕಾರ್ಡ್)
**ಸನ್ಮಾನ್ಯ ಶ್ರೀಮತಿ ಬಿ.ಎನ್. ಶೋಭಾ ಉಮೇಶ್ ಕುಮಾರ್,** ನಿರ್ದೇಕರು, ರಾಜ್ಯ ಬ್ಯಾಂಕ್
**ಸನ್ಮಾನ್ಯ ಶ್ರೀ ಸತೀಶ್,** ವ್ಯವಸ್ಥಾಪಕರು, ಕಾಸ್ಕಾರ್ಡ್ ಬ್ಯಾಂಕ್, ಬೆಂಗಳೂರು.
**ಸನ್ಮಾನ್ಯ ದಿನೇಶ್ ಕೆ.ಶೆಟ್ಟಿ,** ಅಧ್ಯಕ್ಷರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.
**ಸನ್ಮಾನ್ಯ ಶ್ರೀ ಚಮನ್ ಸಾಬ್,** ಪೂಜ್ಯ ಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
**ಸನ್ಮಾನ್ಯ ಶ್ರೀ ಸೋಗಿ ಶಾಂತಕುಮಾರ್,** ಉಪಮಹಾಪೌರರು, ಮಹಾನಗರ ಪಾಲಿಕೆ, ದಾವಣಗೆರೆ.
**ಸನ್ಮಾನ್ಯ ಶ್ರೀಮತಿ ರೇಣುಕ** ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ
**ಸನ್ಮಾನ್ಯ ಶ್ರೀ ತಿಮ್ಮಣ್ಣ ಹುಲ್ಮನಿ,** ಆಯುಕ್ತರು, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರ, ದಾವಣಗೆರೆ.

**ಅಧ್ಯಕ್ಷತೆ :** **ಶ್ರೀ ಆರ್.ಜಿ. ಕುಬೇಂದ್ರಪ್ಪನವರು,**
ಅಧ್ಯಕ್ಷರು, ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ., ದಾವಣಗೆರೆ

**ಅತಿಥಿಗಳು :** **ಶ್ರೀ ಮಧು ಶ್ರೀನಿವಾಸ ಟಿ.,** ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ.
**ಶ್ರೀಮತಿ ಮಂಜುಳ,** ಸಹಕಾರ ಸಂಘಗಳ ಉಪನಿಬಂಧಕರು, ದಾವಣಗೆರೆ ಜಿಲ್ಲೆ.
**ಶ್ರೀಮತಿ ಶ್ವೇತಾ ದೇವರಾಜ್,** ಜಿಲ್ಲಾ ವ್ಯವಸ್ಥಾಪಕರು, ಕಾಸ್ಕಾರ್ಡ್ ಬ್ಯಾಂಕ್

**ಪಿ.ಎಲ್.ಡಿ. ಬ್ಯಾಂಕಿನ ಮಾಜಿ ಅಧ್ಯಕ್ಷರು, ಉಪಾಧ್ಯಕ್ಷರು, ನಿರ್ದೇಶಕರು ಹಾಗೂ ಸರ್ವ ಸದಸ್ಯರು, ದಾವಣಗೆರೆ.**

**ಆಡಳಿತ ಮಂಡಳಿ ಸದಸ್ಯರು**

**ಶ್ರೀ ಕುಬೇಂದ್ರಪ್ಪ ಆರ್.ಜಿ** ಅಧ್ಯಕ್ಷರು — **ಶ್ರೀಮತಿ ಜ್ಯೋತಿ ಸಿ.ಯು.** ಉಪಾಧ್ಯಕ್ಷರು

**ನಿರ್ದೇಶಕರುಗಳಾದ**

♦ ಶ್ರೀ ಎ.ಎಂ. ಮಂಜುನಾಥ ♦ ಶ್ರೀ ಜಿ.ಎ ಮಂಜುನಾಥ ♦ ಶ್ರೀ ಕೆ.ಎಂ. ರೇವಣಸಿದ್ದಪ್ಪ ♦ ಶ್ರೀ ಕೆ. ಬಸವರಾಜಪ್ಪ ♦ ಶ್ರೀಮತಿ ಸವಿತ ಟಿ.ಎಂ.
♦ ಶ್ರೀ ರಮೇಶ್ ಬಿ.ಎಸ್. ♦ ಶ್ರೀ ವೈ.ಬಿ. ನಾಗರಾಜ ♦ ಶ್ರೀ ಎಂ.ಪಿ. ದೇವೇಂದ್ರಪ್ಪ ♦ ಶ್ರೀ ರಾಜಪ್ಪ ♦ ಶ್ರೀಮತಿ ರೇಣುಕಮ್ಮ
● ಶ್ರೀ ಆರ್. ನಟರಾಜ, ವ್ಯವಸ್ಥಾಪಕರು ● ಶ್ರೀಮತಿ ಸರ್ವಮಂಗಳ ಕೆ. ಮಳಿಮಠ್ ಪ್ರಭಾರ ವ್ಯವಸ್ಥಾಪಕರು ಹಾಗೂ ಸಿಬ್ಬಂದಿ ವರ್ಗ

**ಸರ್ವರಿಗೂ ಸುಸ್ವಾಗತ**

ದಾವಣಗೆರೆ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ 86 ವರ್ಷಗಳನ್ನು ಪೂರೈಸಿದೆ. ಬ್ಯಾಂಕಿನ ಪ್ರಥಮ ಅಧ್ಯಕ್ಷರಾದ ಡಿ.ಹೆಚ್. ಚಂದ್ರಶೇಖರಯ್ಯನವರೂ ಸೇರಿದಂತೆ ಅನೇಕ ಪ್ರಮುಖರು ಅಧ್ಯಕ್ಷರಾಗಿ ಬ್ಯಾಂಕಿನ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಪ್ರಸ್ತುತ ಅಧ್ಯಕ್ಷರಾಗಿ ಆರ್.ಜಿ. ಕುಬೇಂದ್ರಪ್ಪ (ರಾಮಗೊಂಡನಹಳ್ಳಿ) ಇವರು ಕಾರ್ಯ ನಿರ್ವಹಿಸುತ್ತಿದ್ದಾರೆ. ಬ್ಯಾಂಕಿನ ನೂತನ ಕಟ್ಟಡಕ್ಕೆ ಮಾಜಿ ಸಚಿವರಾದ ಎಸ್.ಎ. ರವೀಂದ್ರನಾಥ, ಹಿರಿಯ ಶಾಸಕರಾದ ಡಾ. ಶಾಮನೂರು ಶಿವಶಂಕರಪ್ಪ, ಮಾಜಿ ಸಂಸದರಾದ ಜಿ.ಎಂ ಸಿದ್ದೇಶ್ವರ ಮತ್ತಿತರರ ಸಹಕಾರದಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸರ್ಕ್ಯೂಟ್ ಹೌಸ್ ಪಕ್ಕದಲ್ಲಿ 0.05 ಗುಂಟೆ ಜಾಗವನ್ನು ನೀಡಲಾಗಿದೆ.

# ಬಸಾಪುರ : ಸಂಭ್ರಮದ ಮಹೇಶ್ವರ ಜಾತ್ರೆ



ದಾವಣಗೆರೆ, ಡಿ.24- ತಾಲ್ಲೂಕಿನ ಬಸಾಪುರ ಗ್ರಾಮದಲ್ಲಿ ಮಂಗಳವಾರ ಮಹೇಶ್ವರ ಜಾತ್ರೆ ವಿಜೃಂಭಣೆಯಿಂದ ನಡೆಯಿತು.

ದಾವಣಗೆರೆ ಸೇರಿದಂತೆ ಸುತ್ತಮುತ್ತಲ ಗ್ರಾಮಗಳ ಭಕ್ತರು ಅಕ್ಕಿ, ಹಾಲು, ಬಾಳೆ ಹಣ್ಣುಗಳಿಂದ ದೇವರಿಗೆ ಪೂಜೆ ಸಲ್ಲಿಸಿ ಪ್ರಸಾದ ಸೇವಿಸಿದರು. ಗ್ರಾಮಸ್ಥರು ಉತ್ಸಾಹದಿಂದ ಪಾಲ್ಗೊಂಡು ಪ್ರಸಾದ ಬಡಿಸುವಲ್ಲಿ ಮಗ್ನರಾಗಿದ್ದರು.

**ಅನ್ನ, ಹಾಲು, ಬಾಳೇಹಣ್ಣು, ಬೋರೆ ಸಕ್ಕರೆ ಪ್ರಸಾದ ಸೇವಿಸಿದ ಸಾವಿರಾರು ಭಕ್ತರು**

ಎರಡು ದಿನಗಳ ಕಾಲ ನಡೆಯುವ ಈ ಜಾತ್ರೆಯಲ್ಲಿ ಮೊದಲ ದಿವಸ ಅನ್ನ, ಹಾಲು, ಬಾಳೇಹಣ್ಣು, ಬೋರೆ ಸಕ್ಕರೆಯನ್ನು ಭಕ್ತರಿಗೆ ಪ್ರಸಾದವಾಗಿ ನೀಡಲಾಯಿತು. ಬೆಳಿಗ್ಗೆಯಿಂದ ರಾತ್ರಿ 8 ಗಂಟೆವರೆಗೂ ಪ್ರಸಾದ ಕಾರ್ಯ ನೆರವೇರಿತು. ಸುಮಾರು 50 ಸಾವಿರಕ್ಕೂ ಹೆಚ್ಚು ಜನ ಪ್ರಥಮ ದಿನದ ಪ್ರಸಾದ ಸೇವಿಸಿದರು. ನಾಳೆ ಎರಡನೇ ದಿನವಾದ ಬುಧವಾರ ಅನ್ನ, ಸಾರು ಪ್ರಸಾದ ಇರಲಿದೆ. ಸಮೀಪದಲ್ಲಿಯೇ ಮಾಡಲಾಗುವ ಬಿಸಿ ಬಿಸಿ ಮಿರ್ಚಿಯನ್ನು ಕೊಂಡು ಭಕ್ತರು ಅನ್ನಸಾರು ಪ್ರಸಾದ ಸೇವಿಸುತ್ತಾರೆ. ಅಂದಾಜು 70 ಸಾವಿರಕ್ಕೂ ಅಧಿಕ ಭಕ್ತರು ಆಗಮಿಸುವ ಸಾಧ್ಯತೆ ಇದೆ.

ಮಂಗಳವಾರ ಬೆಳಿಗ್ಗೆ 7 ಗಂಟೆಗೆ ಮಹೇಶ್ವರ ಸ್ವಾಮಿಯ ಗದ್ದುಗೆ ಸಮೀಪ ಇರುವ ಪುಷ್ಕರಣಿಯಲ್ಲಿ ಸ್ವಾಮೀಜಿಯೊಬ್ಬರು ಮುಳುಗಿ ಮೃತ್ತಿಕೆಯನ್ನು ತಂದರು. ಅದನ್ನು 2 ಬಾಳೆಹಣ್ಣಿನ ಚಿಪ್ಪಿನಲ್ಲಿಟ್ಟು ಪೂಜಿಸಲಾಯಿತು. ನಂತರ ಪುಷ್ಕರಿಣಿಯಲ್ಲಿ ವಿಸರ್ಜಿಸಲಾಯಿತು. ಬಾಳೆಹಣ್ಣಿನ ಒಂದು ಚಿಪ್ಪು ಮುಳುಗಿ, ಮತ್ತೊಂದು ತೇಲಿತು. ಇದರಿಂದಾಗಿ ಸಾಧಾರಣ ಫಲ ಎಂದು ಗ್ರಾಮಸ್ಥರು ಹೇಳಿದರು.

ಈ ಪುಷ್ಕಪಣೆಯಲ್ಲಿ ವಿಸರ್ಜಿಸಿದ ಎರಡೂ ಚಿಪ್ಪುಗಳು ಮುಳುಗಿದರೆ ಗಂಡಾಂತರ, ಎರಡೂ ತೇಲಿ ದರೆ ತುಂಬಾ ಒಳ್ಳೆಯದು. ಎಂದು ಒಂದು ತೇಲಿ ಒಂದು ಮುಳುಗಿದರೆ ಸಾಧಾರಣ ಫಲ ಎಂಬ ನಂಬಿಕೆ ಇದೆ.

ಜಾತ್ರೆಯ ಹಿಂದಿನ ದಿನ ಆನೆಕೊಂಡ ಬಸವೇಶ್ವರ ಸ್ವಾಮಿ ಹಾಗೂ ಬಸಾಪುರದ ಗುರು ಸಿದ್ದೇಶ್ವರ ಸ್ವಾಮಿ ಹಾಗೂ ಹಾಲಸ್ವಾಮಿ ದೇವರುಗಳನ್ನು ಪಲ್ಲಕ್ಕಿ ಮೂಲಕ ಮೆರವಣಿಗೆಯಲ್ಲಿ ಕರೆ ತಂದ ಮೇಲೆಯೇ ಪ್ರಸಾದ ತಯಾರಿಸಲು ಒಲೆ ಹಚ್ಚುವುದು ಇಲ್ಲಿನ ವಾಡಿಕೆಯಾಗಿದೆ. ಜಾತ್ರೆ ಮುಗಿದ ಈ ದೇವರು ಮೂಲ ಸ್ಥಾನಗಳಿಗೆ ತೆರಳುತ್ತವೆ.

# ರೈತರ ಹಿತ ಕಾಪಾಡಿದರೆ ಮಾತ್ರ ದೇಶ ಸಮೃದ್ಧಿ

## ಕೊಪ್ಪ : ರೈತ ದಿನಾಚರಣೆಯಲ್ಲಿ ಶಾಸಕ ಬಿ.ಪಿ.ಹರೀಶ್ ಅಭಿಮತ

ಮಲೇಬೆನ್ನೂರು, ಡಿ.24- ರೈತರು ಕೃಷಿಯಲ್ಲಿ ಆಧುನಿಕ ತಾಂತ್ರಿಕತೆಗಳನ್ನು ಮತ್ತು ಯಂತ್ರೋಪಕರಣಗಳನ್ನು ಬಳಸಿಕೊಂಡು ಉತ್ತಮ ಇಳುವರಿ ಪಡೆಯಬೇಕೆಂದು ಶಾಸಕ ಬಿ.ಪಿ.ಹರೀಶ್ ಹೇಳಿದರು.

ಅವರು, ಮಂಗಳವಾರ ಕೊಪ್ಪ ಗ್ರಾಮದಲ್ಲಿ ಕೃಷಿ ಇಲಾಖೆಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ರೈತರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಣ್ಣಿನ ಮಾದರಿ ಸಂಗ್ರಹಿಸಿ ಪ್ರಯೋಗಲಾಯದ ವರದಿ ಅನುಸಾರ ರೈತರು ತಮ್ಮ ಜಮೀನಿನಲ್ಲಿ ಪೋಷಕಾಂಶಗಳ ನಿರ್ವಹಣೆ ಮಾಡುವುದು ಬಹಳ ಮುಖ್ಯವಾಗಿದೆ.

ಮಣ್ಣಿನ ಆರೋಗ್ಯ ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದ್ದು, ಈ ನಿಟ್ಟಿನಲ್ಲಿ ರೈತರು ಭೂಮಿಯ ಫಲವತ್ತತೆ ಹೆಚ್ಚಿಸಲು ಗಮನ ಹರಿಸಿದರೆ, ಉತ್ತಮ ಬೆಳೆಯಬಹುದೆಂದ ಹರೀಶ್ ಅವರು, ರೈತರಿಗೆ ಸಮರ್ಪಕ ನೀರು ಮತ್ತು ಅವರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆ ಸಿಕ್ಕರೆ ಅವರು ಏನನ್ನೂ ಕೇಳುವುದಿಲ್ಲ ಎಂದು ಬೇರೆ ರೈತರಿಗೆ ಶುಭಾಶಯ ಕೋರಿದರು.

ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಡಾ. ಪ್ರದೀಪ್ ಅವರು, ಭತ್ತ ಮತ್ತು ಅಡಿಕೆ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ ಕುರಿತು ರೈತರಿಗೆ ಮಾಹಿತಿ ನೀಡಿದರು.

ಈ ವೇಳೆ 2024-25ರ ಸಾಲಿನ ತಾಲ್ಲೂಕು ಮಟ್ಟದ ಆತ್ಮ ಪ್ರಶಸ್ತಿಯನ್ನು ಪ್ರಗತಿಪರ ರೈತರಾದ ಕೆ. ಬೇವಿನಹಳ್ಳಿಯ ಬಿ.ಕೆ.ರಾಜಪ್ಪ, ನಂದಿತಾವರೆಯ ಎನ್.ಪಿ.ಬಸವಲಿಂಗಪ್ಪ, ನಿಟ್ಟೂರಿನ ಬಿ.ಜಿ. ಧನುಂಜಯ, ಕೊಕ್ಕನೂರಿನ ರುದ್ರೇಗೌಡ, ಕೆಂಚನಹಳ್ಳಿಯ ಕೆ.ಹೆಚ್.ಪರಮೇಶ್ವರಪ್ಪ ಮತ್ತು 2023-24ನೇ ಸಾಲಿನ ತಾ. ಮಟ್ಟದ ಪ್ರಶಸ್ತಿಯನ್ನು ಹೊಟ್ಟಿಗಾನಹಳ್ಳಿಯ ಶಾಂತವೀರಪ್ಪ, ಸತ್ಯ ನಾರಾಯಣ ಕ್ಯಾಂಪಿನ ಶ್ರೀಮತಿ ಲಕ್ಷ್ಮಿ ಶ್ರೀನಿವಾಸ್, ಕೆಂಚನಹಳ್ಳಿಯ ಕೆ.ಜಿ.ಶಿವಪ್ಪ, ಜಿ.ಟಿ.ಕಟ್ಟೆಯ ಎಸ್.ಜಿ. ಮಲ್ಲಪ್ಪ, ಯಲವಟ್ಟಿಯ ಜಿ.ಹೆಚ್.ಮಂಜಾನಾಯ್ಕ ಹಾಗೂ ಜಿಲ್ಲಾ ಮಟ್ಟದ ಪ್ರಶಸ್ತಿಯನ್ನು ಹಿಂಡಸಘಟ್ಟದ ರಾಮನಗೌಡ, ಹೊಟ್ಟಿಗಾನಹಳ್ಳಿಯ ಶಾಂತಮ್ಮ ಬಸಪ್ಪ ಅವರುಗಳಿಗೆ ನೀಡಿ ಸನ್ಮಾನಿಸಿ, ಗೌರವಿಸಲಾಯಿತು.



ತೊಗರಿ ಬೆಳೆಯಲ್ಲಿ ನಾಟಿ ಪದ್ಧತಿ ಮಾಡಿದ ಕೊಪ್ಪದ ನಾಗರಾಜ್ ಮತ್ತು ಭತ್ತ ಬೆಳೆದ ಹಾಲಿವಾಣದ ಬಾಬಣ್ಣ ಅವರನ್ನೂ ಈ ವೇಳೆ ಸನ್ಮಾನಿಸಲಾಯಿತು.

ಹಾಲಿವಾಣ ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಲಕ್ಷ್ಮಿದೇವಿ, ಎಸ್.ಜಿ.ಮಂಜುನಾಥ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಸಹಾಯಕ ಕೃಷಿ ನಿರ್ದೇಶಕ ಎ.ನಾರನಗೌಡ ಅವರು, ಪ್ರಾಸ್ತಾವಿಕವಾಗಿ ಮಾಡಿ, ರೈತರಿಗೆ ರೈತ ದಿನಾಚರಣೆಯ ಶುಭಾಶಯ ಕೋರಿದರು.

ಗ್ರಾಮದ ಬೀರಪ್ಪ, ಚಂದ್ರಪ್ಪ, ಕೃಷ್ಣಪ್ಪ, ಜೀವನ್, ಪ್ರಗತಿಪರ ಕೃಷಿಕ ಕೊಕ್ಕನೂರಿನ ನಿರಂಜನ್ ಪಾಟೀಲ್ ಸೇರಿದಂತೆ ಇನ್ನೂ ಅನೇಕ ರೈತರು ಭಾಗವಹಿಸಿದ್ದರು.

ಕೃಷಿ ಅಧಿಕಾರಿ ಹೆಚ್.ಆರ್.ಇನಾಯಿತ್ ಸ್ವಾಗತಿಸಿದರು. ಎನ್.ಕೆ.ವಿಕಾಸ್ ವಂದಿಸಿದರು. ರೈತ ಸಂಪರ್ಕ ಕೇಂದ್ರದ ಯೋಗೇಶ್, ರಾಕೇಶ್, ಆನಂದ್, ಗಣೇಶ್ ಮತ್ತಿತರರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

# ದೆಹಲಿ ಗಣರಾಜ್ಯೋತ್ಸವ ಪರೇಡ್‌ಗೆ ಎವಿಕೆ ಕಾಲೇಜಿನ ವೀಣಾ ಆಯ್ಕೆ



ದಾವಣಗೆರೆ, ಡಿ. 24- ಬಾಪೂಜಿ ವಿದ್ಯಾಸಂಸ್ಥೆಯ ಎ.ವಿ. ಕಮಲಮ್ಮ ಮಹಿಳಾ ಕಾಲೇಜಿನ ತೃತೀಯ ಬಿಎ ವ್ಯಾಸಂಗ ಮಾಡುತ್ತಿರುವ ಎನ್‌ಸಿಸಿ ವಿದ್ಯಾರ್ಥಿನಿ ಜೆಯುಓ ಹೆಚ್.ಕೆ. ವೀಣಾ ಅವರು ಜನವರಿ 26ರಂದು ದೆಹಲಿಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಪರೇಡ್‌ಗೆ ಆಯ್ಕೆಯಾಗಿದ್ದಾರೆ.

# ಬೆಲೆ ಏರಿಕೆಯಿಂದ ಜನ ತತ್ತರ ಕುಂಭಕರ್ಣ ನಿದ್ರೆಯಲ್ಲಿ ಸರ್ಕಾರ



ನವದೆಹಲಿ, ಡಿ. 24- ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ದೈನಂದಿನ ಅಗತ್ಯದ ಸಣ್ಣ ವಿಷಯಗಳಿಗೂ ಹೊಂದಾಣಿಕೆ ಮಾಡಿಕೊಳ್ಳುವಂತಾ ಗಿದೆ. ಆದರೆ, ಸರ್ಕಾರ ಮಾತ್ರ ಕುಂಭಕರ್ಣ ನಿದ್ರೆಯಲ್ಲಿದೆ ಎಂದು ಲೋಕಸಭೆಯಲ್ಲಿ ಪ್ರತಿಪಕ್ಷದ ನಾಯಕರಾಗಿರುವ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ಇಲ್ಲಿನ ಗಿರಿ ನಗರ ತರಕಾರಿ ಮಾರುಕಟ್ಟೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಜನರೊಂದಿಗೆ ನಡೆಸಿದ ಸಂವಾದದ ವೀಡಿಯೋ ಅನ್ನು ರಾಹುಲ್ ಗಾಂಧಿ ಸಾಮಾಜಿಕ ಜಾಲತಾಣದ ಮೂಲಕ ಹಂಚಿಕೊಂಡಿದ್ದಾರೆ.

ನಾನು ತರಕಾರಿಗಳ ಬೆಲೆಗಳ ಕುರಿತು ಜನರೊಂದಿಗೆ ಚರ್ಚಿಸಿದೆ. ಬೆಳ್ಳುಳ್ಳಿ ಬೆಲೆ 400 ರೂ.ಗಳಿಗೆ ತಲುಪಿದೆ. ಈ ರೀತಿಯ ಬೆಲೆ ಏರಿಕೆಯಿಂದ ಜನ ಸಾಮಾನ್ಯರು ತತ್ತರಿಸಿದ್ದಾರೆ. ಬೆಲೆ ಈ ರೀತಿ ಹೆಚ್ಚಾದರೆ ಜನ ಏನು ತಿನ್ನಬೇಕು? ಹಾಗೂ ಉಳಿತಾಯ ಹೇಗೆ ಮಾಡಬೇಕು? ಎಂದು ರಾಹುಲ್ ಪ್ರಶ್ನಿಸಿದ್ದಾರೆ.

ಜನರ ಆದಾಯ ಯಥಾಸ್ಥಿತಿಯಲ್ಲಿದೆ. ಆದರೆ ಬೆಲೆಗಳು ಹೆಚ್ಚಾಗುತ್ತಿವೆ. ಹೀಗಾದರೆ ಉಳಿತಾಯ ಹೇಗೆ ಸಾಧ್ಯ? ಜನ ಸಾಮಾನ್ಯರು ಈ ರೀತಿ ಕಷ್ಟಪಡುತ್ತಿದ್ದಾರೆ ಸರ್ಕಾರ ಮಾತ್ರ ಕುಂಭಕರ್ಣ ನಿದ್ರೆಯಲ್ಲಿದೆ ಎಂದವರು ಟೀಕಿಸಿದ್ದಾರೆ.

# ಗೋ ರಕ್ಷಕರ ವಿರುದ್ಧ ದನದ ವ್ಯಾಪಾರಿಗಳ ಮುಷ್ಕರ

ಪಣಜಿ, ಡಿ. 24- ಗೋ ರಕ್ಷಕ ಗುಂಪುಗಳಿಂದ ಹಿಂಸಾಚಾರ ಹೆಚ್ಚಾಗಿದೆ ಎಂದು ಗೋವಾದ ದನದ ವ್ಯಾಪಾರಿಗಳು ಆರೋಪಿಸಿದ್ದು ಮುಷ್ಕರ ಆರಂಭಿಸಿದ್ದಾರೆ. ಇದರಿಂದಾಗಿ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂದರ್ಭದಲ್ಲಿ ಗೋವಾದ ಜನರು ಸಮಸ್ಯೆ ಎದುರಿಸಬೇಕಿದೆ.

ಕುರೈಷಿ ಮಾಂಸ ವ್ಯಾಪಾರಿಗಳ ಒಕ್ಕೂಟದ ಹೆಸರಿನಲ್ಲಿ ವ್ಯಾಪಾರಿಗಳು ಸೋಮವಾರದಿಂದ ಮುಷ್ಕರಕ್ಕೆ ಕರೆ ನೀಡಿದ್ದಾರೆ.

ಅಕ್ರಮವಾಗಿ ಗೋ ಮಾಂಸ ಮಾರಲಾಗುತ್ತಿದೆ ಎಂದು ಹಿಂದೂ ಸಂಘಟನೆಗಳು ಮಾಂಸದ ಅಂಗಡಿಗಳ ಮೇಲೆ ದಾಳಿ ನಡೆಸುತ್ತಿವೆ. ಇತ್ತೀಚೆಗೆ ಮಾರ್ಗೋವಾದಲ್ಲಿ ದಾಳಿ ನಡೆಸಲಾಗಿತ್ತು. ಇಂತಹ ಸಂಘಟನೆಗಳ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಒಕ್ಕೂಟದ ಸದಸ್ಯ ಅಬ್ದುಲ್ ಬೇಪಾರಿ ಒತ್ತಾಯಿಸಿದ್ದಾರೆ.

ಹಲವು ದೂರುಗಳನ್ನು ನೀಡಿದರೂ ಪೊಲೀಸರು ಕ್ರಮ ತೆಗೆದುಕೊಂಡಿಲ್ಲ. ಸರ್ಕಾರ ನಮ್ಮ ಸುರಕ್ಷತೆಯ ಭರವಸೆ ನೀಡುವವರೆಗೂ ಮುಷ್ಕರ ನಡೆಯಲಿದೆ ಎಂದವರು ಹೇಳಿದ್ದಾರೆ.

# ಅವಧಿ ಮೀರಿದ ಕುರುಕಲ ತಿಂಡಿ ಮಾರಾಟ ಘಟನೆ: ಗುಂಪು ಘರ್ಷಣೆ

ದಾವಣಗೆರೆ, ಡಿ.24- ಅವಧಿ ಮುಗಿದ ಕುರುಕಲು ತಿಂಡಿ ಮಾರಾಟ ಮಾಡಿರುವುದನ್ನು ಪ್ರಶ್ನಿಸಿದ ವಿಚಾರದಲ್ಲಿ ಶುರುವಾರ ಗಲಾಟೆ ಗುಂಪು ಘರ್ಷಣೆ ನಡೆದಿದೆ.

20 ರೂ. ಕುರುಕಲು ತಿಂಡಿಗೆ ನಡೆದ ಮಾರಾಮಾರಿಯಲ್ಲಿ ಹತ್ತು ಜನರು ಗಾಯಗೊಂಡ ಘಟನೆ ಚನ್ನಗಿರಿ ತಾಲ್ಲೂಕಿನ ಹೊನ್ನೇಬಾಗಿ ಗ್ರಾಮದಲ್ಲಿ ನಡೆದಿದೆ. ಹೊನ್ನೇಬಾಗಿ ಗ್ರಾಮದ ಅತೀಫ್ ಉಲ್ಲಾ ಹಾಗೂ ಸದ್ದಾಂ ಕುಟುಂಬಗಳ ನಡುವೆ ಈ ಘರ್ಷಣೆ ಉಂಟಾಗಿದೆ. 25ಕ್ಕೂ ಹೆಚ್ಚು ಜನರ ವಿರುದ್ಧ ಚನ್ನಗಿರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸದ್ದಾಂ ಕುಟುಂಬದ ಮಕ್ಕಳು ಅತೀಫ್ ಉಲ್ಲಾ ಕಿರಾಣಿ ಅಂಗಡಿಯಲ್ಲಿ ಕುರುಕಲು ತಿಂಡಿ ಖರೀದಿಸಿದ್ದಾರೆ. ಅವಧಿ ಮುಗಿದ ಕುರುಕಲು ತಿಂಡಿ ಮಾರಾಟ ಮಾಡಿರುವುದನ್ನು ಸದ್ದಾಂ ಪ್ರಶ್ನಿಸಿದ್ದರು. ಈ ವಿಚಾರವಾಗಿ ಅತೀಫ್ ಮತ್ತು ಸದ್ದಾಂ ನಡುವೆ ವಾಗ್ವಾದ ನಡೆದಿತ್ತು. ಅವಧಿ ಮೀರಿದ ತಿಂಡಿ ಮಾರಾಟ ಮಾಡಿದ ಆರೋಪದ ಮೇರೆಗೆ ಚನ್ನಗಿರಿ ಠಾಣೆಯಲ್ಲಿ ಸದ್ದಾಂ ದೂರು ದಾಖಲಿಸಿದ್ದರು.

ಇದರಿಂದ ಆಕ್ರೋಶಗೊಂಡ ಅತೀಫ್ ಕುಟುಂಬದ ಸದಸ್ಯರು ಸದ್ದಾಂ ನಡೆಸುತ್ತಿದ್ದ ಬೀದಿಬದಿ ಹೋಟೆಲ್ ಮೇಲೆ ಭಾನುವಾರ ದಾಳಿ ನಡೆಸಿದ್ದಾರೆ. ಎರಡು ಕುಟುಂಬದ ಸದಸ್ಯರು ದೊಣ್ಣೆ ಹಿಡಿದು ಬಡಿದಾಡಿಕೊಂಡಿದ್ದಾರೆ. ಗಲಾಟೆ ಬಿಡಿಸಲು ಪ್ರಯತ್ನಿಸಿದ ಗ್ರಾಮಸ್ಥರು ಕೂಡ ಗಾಯಗೊಂಡಿದ್ದಾರೆ. ಮಾಹಿತಿ ತಿಳಿದು ಸ್ಥಳಕ್ಕೆ ಧಾವಿಸಿದ ಪೊಲೀಸರು ಪರಿಸ್ಥಿತಿ ನಿಯಂತ್ರಿಸಿದ್ದಾರೆ.

# ನಗರಕ್ಕೆ ಇಂದು ಡಾ. ವೀರೇಂದ್ರ ಹೆಗ್ಗಡೆ



ಅಜ್ಜಂಪುರ ಶೆಟ್ರು ಕಾಂಪೌಂಡ್‌ನ ಓಂ ಶ್ರೀ ಮಂಜುನಾಥ ಸ್ವಾಮಿ ನಿವಾಸದಲ್ಲಿ ಇಂದು ಬೆಳಿಗ್ಗೆ 11.25ಕ್ಕೆ 25ನೇ ವರ್ಷದ ಅಕ್ಕಿ ಸಮರ್ಪಣೆ ಹಾಗೂ ಮಂಜುನಾಥ ಸ್ವಾಮಿ ಪೂಜಾ ಕಾರ್ಯಕ್ರಮ ಮತ್ತು ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಮಂಜುನಾಥ ಸ್ವಾಮಿ ದೇವಸ್ಥಾನದಲ್ಲಿ ದಿನ ನಿತ್ಯ ನಡೆಯುವ ಅನ್ನ ಸಂತರ್ಪಣೆಗೆ ಪ್ರತಿ ವರ್ಷದಂತೆ ಈ ವರ್ಷವೂ 108 ಕ್ವಿಂಟಾಲ್ ಅಕ್ಕಿಯನ್ನು ಅಣಬೇರು ಮಂಜಣ್ಣ ಮತ್ತು ಕುಟುಂಬಸ್ಥರು ನೀಡಲಿದ್ದಾರೆ.

ಮಧ್ಯಾಹ್ನ 3.42ಕ್ಕೆ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆ ಅವರು ಆಗಮಿಸಲಿದ್ದು, ಈ ಸಮಾರಂಭದಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಉದ್ಯಮಿ ಅಣಬೇರು ರಾಜಣ್ಣ, ಶಾಸಕ ಕೆ.ಎ.ಸ್ ಬಸವಂತಪ್ಪ, ಮಾಜಿ ಸಚಿವ ಎಸ್.ಎ .ರವೀಂದ್ರನಾಥ್, ಎಸ್ ಕೆ ಆರ್ ಡಿ ಪಿ ಸಿಇಓ ಅನಿಲ್ ಕುಮಾರ್ ಸೇರಿದಂತೆ ಭಾಗವಹಿಸಲಿದ್ದಾರೆ.

ಅಣಬೇರು ಮಂಜಣ್ಣ ಅವರ ಜೊತೆಗೆ ಇತರೆ ಭಕ್ತರು ನೀಡುವ ಅಕ್ಕಿ ಸೇರಿ ಒಟ್ಟು 250 ಕ್ವಿಂಟಾಲ್ ಅಕ್ಕಿಯನ್ನು ಶ್ರೀ ಕ್ಷೇತ್ರಕ್ಕೆ ಕಳುಹಿಸಲಾಗುವುದೆಂದು ಜಿಲ್ಲಾ ಜನ ಜಾಗೃತಿ ವೇದಿಕೆ ಅಧ್ಯಕ್ಷ ಹೊನ್ನಾಳಿ ಬಾಬಣ್ಣ ತಿಳಿಸಿದ್ದಾರೆ.

# ಅಮಿತ್ ಷಾ ರಾಜೀನಾಮೆಗೆ ಸಂಸದೆ ಡಾ.ಪ್ರಭಾ ಆಗ್ರಹ

ದಾವಣಗೆರೆ, ಡಿ. 24- ಡಾ. ಅಂಬೇಡ್ಕರ್ ಕುರಿತ ಹೇಳಿಕೆಗೆ ಸಂಬಂಧಿಸಿದಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ರಾಜೀನಾಮೆ ನೀಡಲು ಸೂಚಿಸಬೇಕು. ಇಲ್ಲವೇ ಅಮಿತ್ ಶಾ ಅವರನ್ನು ಈ ಕೂಡಲೇ ಕೇಂದ್ರ ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದು ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಆಗ್ರಹಿಸಿದರು.




ನಗರದ ತಮ್ಮ ಗೃಹ ಕಚೇರಿಯಲ್ಲಿ ಜಿಲ್ಲಾ ಕಾಂಗ್ರೆಸ್ ವತಿಯಿಂದ ಇಂದು ಹಮ್ಮಿಕೊಂಡಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮಿತ್ ಶಾರವರಿಗೆ ಅಂಬೇಡ್ಕರ್ ಬಗ್ಗೆ ಮೇಲೆ ದ್ವೇಷ ಇದೆ. ಇದು ಸದನದಲ್ಲಿ ಅವರು ಮಾತನಾಡಿದ ಬಗೆಯಲ್ಲಿಯೇ ತಿಳಿದು ಬಂದಿದೆ. ಇದನ್ನು ನಾವು ಬಲವಾಗಿ ಖಂಡಿಸುವುದಾಗಿ ಹೇಳಿದರು.

ನಗರ ಹಾಗೂ ಜಿಲ್ಲೆಯಲ್ಲಿ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಸಚಿವ ಎಸ್. ಎಸ್. ಮಲ್ಲಿಕಾರ್ಜುನ್ ಅವರ ಕೊಡುಗೆ ಏನು ಎಂಬುದು ಎಲ್ಲರಿಗೂ ಗೊತ್ತು. ರಾಜಕೀಯಕ್ಕೋಸ್ಕರ ಏನೋ ಉದ್ದೇಶ ಇಟ್ಟುಕೊಂಡು ಮಾತನಾಡಿದರೆ ನಾವೇನು ಮಾಡಲು ಆಗುತ್ತದೆ. ಇದಕ್ಕೆಲ್ಲ ಉತ್ತರ ಕೊಡುವ ಸಮಯವೂ ಇಲ್ಲ ಎಂದು ಪ್ರಭಾ ಅವರು ಶಾಸಕ ಶಿವಗಂಗಾ ಬಸವರಾಜ್ ಹೇಳಿಕೆ ಸಂಬಂಧ ಅವರ ಹೆಸರು ಪ್ರಸ್ತಾಪಿಸದೆ ಕುಟುಕಿದರು.

ರಾಜಕೀಯ ಎಂದರೆ ಅವಕಾಶವಾದ. ಎಲ್ಲವನ್ನೂ ಅಧಿಕಾರದಲ್ಲಿ ಇದ್ದೇ ಮಾಡಲಾಗದು. ಅಧಿಕಾರ ಇಲ್ಲದೆಯೋ ಮಾಡಬಹುದು ಎಂಬುದನ್ನು ಈ ಹಿಂದೆಯೇ ಮಲ್ಲಿಕಾರ್ಜುನ್ ಅವರು ಸಾಧಿಸಿ ತೋರಿಸಿದ್ದಾರೆ. ವೈಯಕ್ತಿಕ ಹಿತಾಸಕ್ತಿ ಇಟ್ಟುಕೊಂಡು ಮಾತನಾಡಿದರೆ ಅದಕ್ಕೆಲ್ಲಾ ಉತ್ತರ ಕೊಡಲು ಆಗದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಶಾಸಕರಾದ ಬಸವಂತಪ್ಪ, ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷ ಹೆಚ್.ಬಿ ಮಂಜಪ್ಪ, ಎಸ್ಸಿ ಮೋರ್ಚಾದ ಅಧ್ಯಕ್ಷ ವೀರಭದ್ರಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ. ಶೆಟ್ಟಿ, ಮೇಯರ್ ಚಮನ್ ಸಾಬ್, ಪಾಲಿಕೆ ಸದಸ್ಯರಾದ ಗಡಿಗುಡಾಳ್ ಮಂಜುನಾಥ್, ಹರಿಹರದ ನಂದಿಗಾವಿ ಶ್ರೀನಿವಾಸ್ ಹಾಗೂ ಇತರರು ಉಪಸ್ಥಿತರಿದ್ದರು.



**ಸಂತ ತೋಮಸರ ದೇವಾಲಯದಲ್ಲಿ ಬಾಲ ಏಸುವಿಗೆ ವಿಶೇಷ ಆರಾಧನೆ**

**ದಾವಣಗೆರೆ ಪಿ.ಜೆ. ಬಡಾವಣೆಯ ಸಂತ ತೋಮಸರ ದೇವಾಲಯದಲ್ಲಿ ಕ್ರಿಸ್‌ಮಸ್ ಅಂಗವಾಗಿ ಮಂಗಳವಾರ ಮಧ್ಯರಾತ್ರಿ ಬಾಲ ಏಸುವನ್ನು ಗೋದಲಿ (ದನದ ಕೊಟ್ಟಿಗೆ)ಯಲ್ಲಿ ಪ್ರತಿಷ್ಠಾಪಿಸಲಾಯಿತು. ವಿಶೇಷ ಆರಾಧನೆಯನ್ನು ಧರ್ಮಗುರುಗಳು ನಡೆಸಿಕೊಟ್ಟರು.**

# ಐರಣಿ ಮಠಕ್ಕೆ ಉತ್ತರಾಧಿಕಾರಿ ನೇಮಕ; ಫೆಬ್ರವರಿಯಲ್ಲಿ ಪಟ್ಟಾಭಿಷೇಕ



ರಾಣೇಬೆನ್ನೂರು, ಡಿ. 24 - ನೂರಾರು ಗ್ರಾಮಗಳ ಸಾವಿರಾರು ಭಕ್ತರ ಹೃದಯ ಮಂದಿರದಲ್ಲಿ ನೆಲೆಸಿರುವ ಮುಪ್ಪಿನಪ್ಪಜ್ಜನ ಐರಣಿಯ ಐರಾವತ ಕ್ಷೇತ್ರದ ಹೊಳೆ ಮಠಕ್ಕೆ ಮೂರನೇ ತಲೆಮಾರಿನ ಉತ್ತರಾಧಿಕಾರಿಯ ನೇಮಕವಾಗಿದ್ದು. ಫೆಬ್ರುವರಿ ತಿಂಗಳಲ್ಲಿ ಪಟ್ಟಾಭಿಷೇಕ ನಡೆಯಲಿದೆ. ಸಮಾರಂಭವನ್ನ ಸಡಗರ ಸಂಭ್ರಮದಿಂದ ಈಗಿನ ಪೀಠಾಧಿಪತಿ ಶ್ರೀ ಬಸವರಾಜ ದೇಶಿಕೇಂದ್ರ ಸ್ವಾಮೀಜಿ ನಡೆಸಲಿದ್ದಾರೆ.

ಸಿದ್ಧಾರೂಢರ ಪಟ್ಟಾಭಿಷೇಕವು ಫೆಬ್ರವರಿ 8 ರಿಂದ 10 ರವರೆಗೆ ನಡೆಯಲಿದೆ. ಈ ಐತಿಹಾಸಿಕ ಸಮಾರಂಭಕ್ಕೆ ನಾಡಿನ ಪ್ರಮುಖ ಮಠಾಧೀಶರು, ಸಾದು, ಸಂತರು, ವಿವಿಧ ಗಣ್ಯರು, ಸರ್ವ ಧರ್ಮಗಳ ಅಸಂಖ್ಯಾತ ಭಕ್ತರು ಪಾಲ್ಗೊಳ್ಳುವರು ಎಂದು ಮಠದ ಸಂಚಾಲಕ ಬಾಬು ಶೆಟ್ಟರ ತಿಳಿಸಿದ್ದಾರೆ.

ಪೀಠಾಧಿಪತಿ ಬಸವರಾಜ ಶ್ರೀಗಳ ಆಶಯದ ಪರಿಶ್ರಮ, ಸಂಚಾಲಕ ಬಾಬು ಶೆಟ್ಟರ ಸೇವೆ, ಭಕ್ತರ ಮುಕ್ತ ಮನಸ್ಸಿನ ಸಹಾಯ ಹಾಗೂ ಸಹಕಾರದಿಂದ ಹೊಳೆಮಠದಲ್ಲಿ ಅತ್ಯಂತ ವೇಗವಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿವೆ. ಈ ನಮ್ಮ ಮಠಕ್ಕೆ ಉತ್ತರಾಧಿಕಾರಿಯ ಅವಶ್ಯಕತೆ ಇದೆ ಎಂಬುದು ಬಹಳಷ್ಟು ಭಕ್ತರ ಮನದಾಳದ ಮಾತುಗಳಾಗಿದ್ದವೆಂದು, ಅವುಗಳನ್ನರಿತ ಬಸವರಾಜ ಶ್ರೀಗಳು ಉತ್ತರಾಧಿಕಾರಿಯ ನೇಮಕದೊಂದಿಗೆ ಭಕ್ತರ ಹೃದಯ ಗೆದ್ದರೆಂದು ಹೇಳಲಾಗುತ್ತಿದೆ.






KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas